ಮಹಿಳಾ ವಿಶೇಷ ಪುಟಗಳೊಂದಿಗೆ

# ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಮಾರ್ಚ್, ೨೦೧೯ ಸಂಪಾದಕ : ಡಿ.ಎಸ್.ನಾಗಭೂಷಣ ಸಂಪುಟ: ೮ ಸಂಚಿಕೆ: ೨

ಚಂದಾ ರೂ. ೧೭೦/– (ಜನವರಿಯಿಂದ ಸೆಪ್ಟಂಬರ್‌ವರೆಗೆ) ರೂ. ೨೫೦/–(ಸಂಸ್ಥೆಗಳಿಗೆ) ಬೆಲೆ: ಬಿಡಿ ಪ್ರತಿ: ರೂ. ೩೦/– ಪುಟ: ೨೪

ವಿಳಾಸ: ಎಚ್.ಐ.ಜಿ–೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ–೫೭೭ ೨೦೪

ದೂ: ೦೮೧೮೨–೨೪೮೫೭೪ ಸಂಚಾರಿ: ೯೪೪೯೨ ೪೨೨೮೪ ಈ ಮೇಲ್: dsnagabhushana@gmail.com

## ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ರಾಷ್ಟ್ರೀಯತೆ ಮತ್ತು ದೇಶಪ್ರೇಮಗಳು ತಮ್ಮ ಮಿತಿಗಳನ್ನು ಮೀರಿ ಬೆಳೆದರೆ ಎಂತಹ ಭೀಕರ ಅನಾಹುತಗಳಿಗೆ ಕಾರಣವಾಗುತ್ತವೆ ಎಂಬುದಕ್ಕೆ ಜಗತ್ತಿನ ಇತಿಹಾಸದಲ್ಲಿ ಅನೇಕ ಉದಾಹರಣೆಗಳು ಸಿಗುತ್ತವೆ. ಟಾಲ್‌ಸ್ಟಾಯ್‌ರಿಂದ ಹಿಡಿದು ನಮ್ಮ ಗಾಂಧಿ ಮತ್ತು ಟ್ಯಾಗೋರ್‌ರಂತಹ ದಾರ್ಶನಿಕರು ಈ ಬಗ್ಗೆ ವಿಫುಲವಾಗಿ ಬರೆದಿದ್ದಾರೆ. ನಾವೆಲ್ಲ ಮೊದಲು ಈ ಸೃಷ್ಟಿಯ ಶಿಶುಗಳು. ರಾಜ್ಯ–ರಾಷ್ಟ್ರ ಇತ್ಯಾದಿಗಳು ನಾವೇ ನಮ್ಮ ನಾಗರೀಕ ಸೌಲಭ್ಯಗಳಿಗಾಗಿ ಮಾಡಿಕೊಂಡ ರಾಜಕೀಯ ನಿರ್ಮಿತಿಗಳು. ಆದ್ದರಿಂದ ಈ ನಿರ್ಮಿತಿಗಳ ಬದ್ಧತೆಗಳು ನಮ್ಮ ಮಾನವ ಸಹಜ ಹಕ್ಕುಗಳಿಗೆ ಎರವಾಗುವಂತಿರಬಾರದು. ಅಂದರೆ ನಾವು ಮೊದಲು ಮನುಷ್ಯರು. ಆನಂತರ ಒಂದು ದೇಶದ ಪ್ರಜೆಗಳು. ಆದರೆ ರಾಷ್ಟ್ರೀಯತೆ ಅಥವಾ ದೇಶಪ್ರೇಮದ ಅಮಲೇರಿದವರಿಗೆ ಈ ವಿವೇಚನೆ ಸಾಧ್ಯವಿಲ್ಲ. ಹಾಗಾಗಿಯೇ ಅವು ಭೀಕರವೆನ್ನಿಸುವುದು.

ಮೋದಿಯವರ ನೇತೃತ್ವದ ಬಿಜೆಪಿಯ ಮೂಲ ಮಂತ್ರವೇ ರಾಷ್ಟ್ರೀಯತೆ. ಅದೀಗ ಪುಲ್ವಾಮಾ ಉಗ್ರರ ದಾಳಿಯ ನಂತರ ಮತ್ತಷ್ಟು ಕೆದರಿಕೊಂಡಿದೆ. ಈ ಪುಲ್ವಾಮಾ ದಾಳಿ ಒಂದು ಹೇಡಿತನದ, ಹೇಯ ಕೃತ್ಯವೇ ಸರಿ. ಅದನ್ನು ಇಡೀ ದೇಶವೇ ಒಟ್ಟಾಗಿ ಖಂಡಿಸಿದೆ. ಮತ್ತು ಅದರಲ್ಲಿನ ನಮ್ಮ ವೀರಯೋಧರ ಮರಣದ ಬಗ್ಗೆ ಮಮ್ಮಲ ಮರುಗಿದೆ. ಆದರೆ ಈ ಘಟನೆಯನ್ನು ಪಾಕಿಸ್ತಾನದ ಮೇಲೆ ಯುದ್ಧ ಸಾರಿ ಸೇಡು ತೀರಿಸಿಕೊಳ್ಳುವ ಮಾತು ಮಾತ್ರ ಶುದ್ಧ ಅವಿವೇಕದ್ದು; ಹುಂಬತನದ್ದು ಮಾತ್ರವಲ್ಲ, ರಾಜಕೀಯ ಲಾಭದ ಸಂಕುಚಿತ ಉದ್ದೇಶವುಳ್ಳದ್ದೂ ಆಗಿದೆ. ಏಕೆಂದರೆ ಯುದ್ಧದ ಮೂಲಕ ಈ ಸಮಸ್ಯೆ ಪರಿಹಾರವಾಗುವಂತಿದ್ದರೆ ಅದು ಬಹು ಹಿಂದೆಯೇ ಪರಿಹಾರವಾಗಿರುತ್ತಿತ್ತು. ಅಲ್ಲದೆ, ಬಹು ಆಸೆ ಹುಟ್ಟಿಸಿ ಅಧಿಕಾರಕ್ಕೆ ಬಂದ ಮೋದಿ ಸರ್ಕಾರ ಎಲ್ಲರ ನಿರೀಕ್ಷೆಗಳನ್ನೂ ಹುಸಿಗೊಳಿಸಿ, ಅವರ ಸರ್ಕಾರದ ಅಧಿಕೃತ ಅಂಕಿ ಅಂಶಗಳೇ ಹೇಳುತ್ತಿರುವಂತೆ ಎಲ್ಲ ರಂಗಗಳಲ್ಲೂ ವಿಫಲವಾಗಿದೆ ಎಂಬ ಚಿತ್ರ ದೇಶದ ಮುಂದೆ ಸ್ಪಷ್ಟವಾಗಿ ಮೂಡುತ್ತಿದೆ. ಆ ಚಿತ್ರವನ್ನು ಮಸುಕುಗೊಳಿಸಲು ಮೋದಿ ಬೆಂಬಲಿಗರಿಗೆ ಈ ದುರದೃಷ್ಟಕರ ದಾಳಿಯನ್ನು ರಾಷ್ಟ್ರೀಯತೆ ಮತ್ತು ದೇಶಪ್ರೇಮಗಳ ಹುಚ್ಚು ಆವೇಶವನ್ನು ಪ್ರಚೋದಿಸಲು ಒಂದು ನೆಪವಾಗಿಬಿಟ್ಟಿದೆ. ಯುದ್ಧೋನ್ಮಾದ ಹುಟ್ಟಿಸಿ ಈ ಚುನಾವಣಾ ಸಂದರ್ಭದಲ್ಲಿ ನಡೆಯಬೇಕಾದ ರಾಜಕೀಯ ಚರ್ಚೆಯ ದಿಕ್ಕನ್ನೇ ಬದಲಿಸುವ ಪ್ರಯತ್ನ ಮಾಡಲಾಗುತ್ತಿದೆ.

ಹಾಗೆ ನೋಡಿದರೆ ಈ ಪುಲ್ವಾಮಾ ದಾಳಿ ಯಾರ ಮತ್ತು ಎಂತಹ ರಾಜಕಾರಣದ ಪರಿಣಾಮ? ಈ ದಾಳಿಯ ಮೂಲದಲ್ಲಿರುವ ಕಾಶ್ಮೀರ ಸಮಸ್ಯೆಯನ್ನು ಪರಿಹರಿಸಲು ಈವರೆಗಿನ ಕಾಂಗ್ರೆಸ್ ರಾಜಕಾರಣ ವಿಫಲವಾಗಿದೆ ಎಂದು ಹೇಳುತ್ತಾ ಪಾಕಿಸ್ತಾನದ ಬಗ್ಗೆ 'ಗಂಡು' ನೀತಿಯೇ ಇದಕ್ಕೆ ಮದ್ದು ಎಂದು ಪ್ರತಿಪಾದಿಸುತ್ತಾ ಬಂದ ಮೋದಿ ಈ ನಾಲ್ಕೂವರೆ ವರ್ಷಗಳಲ್ಲಿ ಕಾಶ್ಮೀರದಲ್ಲಿ ಏನು ಮಾಡಿದರು? ಆರಂಭದಿಂದಲೂ ಒಮ್ಮೆ ಓಲೈಕೆ ಮತ್ತೊಮ್ಮೆ ಬೆದರಿಕೆಯ ಮಾತುಗಳ, ದಿಕ್ಕು ದೆಸೆಗಳಿಲ್ಲದ ನೀತಿಯನ್ನೇ ಅನುಸರಿಸುತ್ತಾ ಬಂದು ಕಳೆದ ರಾಜ್ಯ ವಿಧಾನಾಸಭಾ ಚುನಾವಣೆಗಳ ನಂತರ ಸ್ವತಃ ತಾನೇ ರಾಷ್ಟ್ರವಿರೋಧಿ ಎಂದು ಕರೆಯುತ್ತಿದ್ದ ಪಿಡಿಪಿ ಪಕ್ಷದೊಂದಿಗೆ ಅವಕಾಶವಾದಿ ಮೈತ್ರಿ ಮಾಡಿಕೊಂಡು ಸರ್ಕಾರ ರಚಿಸಿದ ಅವರ ಪಕ್ಷ ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸಿದ ನಂತರ ಆ ಮೈತ್ರಿಯನ್ನು ಇತ್ತೀಚೆಗೆ ಮುರಿದುಕೊಂಡಿದೆ. ಈ ಅವಧಿಯಲ್ಲಿ, ಮುಸ್ಲಿಂ ಬಹುಸಂಖ್ಯಾತ ರಾಜ್ಯವಾಗಿದ್ದರೂ ಮತಾಧಾರಿತವಾದ ರಾಷ್ಟ್ರ ವಿಭಜನೆಯ ಸಂದರ್ಭದಲ್ಲಿ ಅದನ್ನು ಭಾರತಕ್ಕೆ ಸೇರಿಸಲು ಕಾರಣನಾದ ಹಿಂದೂ ದೊರೆಯ ಜೊತೆ ಸಹಕರಿಸಿದ ಧರ್ಮನಿರಪೇಕ್ಷ ನ್ಯಾಷನಲ್ ಕಾನ್‌ಫೆರನ್ಸ್ ಪಕ್ಷದ ರಾಜಕಾರಣವನ್ನು–ಅದರ ಕಾಂಗ್ರೆಸ್ ಸ್ನೇಹದ ಕಾರಣದಿಂದ– ಅದು ಮೂಲೆಗುಂಪು ಮಾಡಿತು. ಆ ಮೂಲಕ ರಾಜ್ಯದಲ್ಲಿದ್ದ ಧರ್ಮ ನಿರಪೇಕ್ಷತೆಯ ಪಸೆಯನ್ನು ಒರೆಸಿಹಾಕಿತು. ಇದರಿಂದಾಗಿ ರಾಜ್ಯದ ರಾಜಕಾರಣ ಹಿಂದೂ ಜಮ್ಮು ಮತ್ತು ಮುಸ್ಲಿಂ ಕಾಶ್ಮೀರ ಕಣಿವೆಯ ನಡುವೆ ಒಡೆದುಹೋಗಿ ಆ ರಾಜ್ಯ ಭಾವನಾತ್ಮಕವಾಗಿ ಉಳಿದ ಭಾರತದೊಡನೆ ಸೇರುವ ಪ್ರಕ್ರಿಯೆಗೆ ಒಂದು ದೊಡ್ಡ ಹೊಡೆತ ಬಿದ್ದಿತು. ಕಳೆದ ನಾಲ್ಕೂವರೆ ವರ್ಷಗಳ ಅವಧಿಯಲ್ಲಿ ಕಾಶ್ಮೀರದಲ್ಲಿ ಪರಿಸ್ಥಿತಿ ಹಿಂದೆಂದಿಗಿಂತ ಹೆಚ್ಚು ಹದಗೆಟ್ಟಿದೆ ಎಂದು ಅಂಕಿ ಅಂಶಗಳೇ ಹೇಳುತ್ತಿವೆ: ನಮ್ಮ ಸೈನಿಕರ ಮತ್ತು ಆ ರಾಜ್ಯದ ನಾಗರಿಕರ ಸಾವಿನ ಸಂಖ್ಯೆ ಮತ್ತು ಉಗ್ರರ ಜೊತೆ ಸೇರಿಕೊಂಡ ಸ್ಥಳೀಯ ಯುವಕರ ಸಂಖ್ಯೆ ಈಗ ಗಣನೀಯಬಾಗಿ ಏರಿದೆ. ಮೊನ್ನೆಯ ಪುಲ್ವಾಮಾ ದಾಳಿಯಲ್ಲಿ ಆತ್ಮಹತ್ಯಾ ಬಾಂಬಿಗನಾಗಿದ್ದವನು ಒಬ್ಬ ಸ್ಥಳೀಯ ಕಾಶ್ಮೀರ ಯುವಕ ಎಂಬುದು ಗಮನಾರ್ಹ. ಈ ಹೊಸ ಬೆಳವಣಿಗೆಗೆ ಯಾರು ಕಾರಣ? ಎಂತಹ ರಾಜಕಾರಣ ಇದಕ್ಕೆ ಕಾರಣ? ಮೋದಿ ಬೆಂಬಲಿಗರು ಯೋಚಿಸಬೇಕು.

ಕಾಶ್ಮೀರದ ಜನತೆಗೆ ಅವರು ಭಾರತದ ಜೊತೆಗಿರಲು ನಿರ್ಧರಿಸಿದಾಗ ನೀಡಿದ ವಾಗ್ದಾನಗಳ ಪ್ರಕಾರ ನಡೆದು, ಅವರ ಪ್ರಜಾಪ್ರಭುತ್ವೀಯ ಆಶೋತ್ತರಗಳು ಅಭಿವ್ಯಕ್ತವಾಗುವಂತಹ–ದೆಹಲಿಯ ಅನಗತ್ಯ ರಾಜಕೀಯಹಸ್ತಕ್ಷೇಪವಿಲ್ಲದೆ–ಮುಕ್ತ ಅವಕಾಶ ನೀಡಿ ಅವರ ಪ್ರೀತಿಯನ್ನು ಮರಳಿಗಳಿಸಬೇಕು. ಆಗ ಹೊರಗಿನ ಶಕ್ತಿಗಳ ಯಾವ ಆಟವೂ ನಡೆಯಲಾರದು. ಇದರ ಹೊರತಾಗಿ ಕಾಶ್ಮೀರ ಸಮಸ್ಯೆಯನ್ನು ನಾವು ಪರಿಹರಿಸಿಕೊಳ್ಳಲಾರೆವು ಎಂಬುದು ನಮಗೆ ಈ ಹೊತ್ತಿಗೆ ಮನವರಿಕೆಯಾಗಬೇಕಿತ್ತು. ಅದು ಆಗಿಲ್ಲವೆಂಬುದಕ್ಕೆ ಪುಲ್ವಾಮಾ ದಾಳಿ ಮಾತ್ರವಲ್ಲ, ಆನಂತರ ರಾಷ್ಟ್ರದ ವಿವಿಧ ಭಾಗಗಳಲ್ಲಿನ ಕಾಶ್ಮೀರಿ ವಿದ್ಯಾರ್ಥಿಗಳ ಮೇಲೆ, ಅವರು ನಮ್ಮ ಶತ್ರುಗಳೆಂಬಂತೆ ನಡೆದ ಹಲ್ಲೆಗಳೇ ಸಾಕ್ಷಿ. ಕಾಶ್ಮೀರದ ಸಮಸ್ಯೆ ಒಂದು ರಾಷ್ಟ್ರೀಯ ಸಮಸ್ಯೆಯಾಗಿದ್ದು ಅದನ್ನು ಪರಿಹರಿಸಲು ಈ ಸರ್ಕಾರ ಕಂಡುಕೊಂಡಿರುವ ಭೀಕರ ರಾಷ್ಟ್ರೀಯತೆಯ ಪರಿಯ ಪರಿಣಾಮವಿದು. ಇದಕ್ಕಿಂತ ಭೀಕರವಾದ ಸಂಗತಿ ಎಂದರೆ ನಮ್ಮ ಸರ್ವೋಚ್ಚ ನ್ಯಾಯಾಲಯವು ಕಾಶ್ಮೀರಿ ವಿದ್ಯಾಥಿಗಳಿಗೆ ರಕ್ಷಣೆ ನೀಡಬೇಕೆಂದು ಆದೇಶ ನೀಡುವವರೆಗೂ ನಮ್ಮ ಪ್ರಧಾನಿ ಆ ವಿದ್ಯಾರ್ಥಿಗಳಿಗೆ ರಕ್ಷಣೆಯ ಮಾತಿರಲಿ, ಅವರ ಮೇಲಿನ ದಾಳಿಗಳನ್ನು ಖಂಡಿಸುವ ಗೋಜಿಗೂ ಹೋಗಿರಲಿಲ್ಲ. ೨೦೦೨ರ ಗುಜರಾತ್ ಕೋಮು ಹಿಂಸೆಯಿಂದ ಹಿಡಿದು ಇತ್ತೀಚಿನ ಗೋರಕ್ಷಣೆಯ ಹೆಸರಿನ ಗುಂಪು ಹಲ್ಲೆ–ಹತ್ಯೆಗಳವರೆಗೆ ಮೋದಿ ಅನುಸರಿಸಿಕೊಂಡು ಬರುತ್ತಿರುವ ನೀತಿಯೇ ಇದಾಗಿದೆ. ಹಾಗಾಗಿ ದೇಶಕ್ಕೆ ಸದ್ಯಕ್ಕೆ ಮೋದಿ ರಾಜಕಾರಣದಿಂದ ರಕ್ಷಣೆ ಬೇಕಾಗಿದೆ.

ಕರ್ನಾಟಕದಲ್ಲಿ ದೇವೇಗೌಡರು ತಮ್ಮ ಕುಟುಂಬ ರಾಜಕಾರಣವನ್ನು ಮೂರನೇ ತಲೆಮಾರಿಗೂ ವಿಸ್ತರಿಸುವ ಲಜ್ಜೆಗೆಟ್ಟ ಪ್ರಯತ್ನಗಳ ನೆದರೇ ಇಲ್ಲದೆ ಕಾಂಗ್ರೆಸ್ ರಾಜ್ಯದಲ್ಲಿ ಆತ್ಮಹತ್ಯೆಯ ದಾರಿ ಹಿಡಿದಿರುವ ದೃಶ್ಯ ಕರುಣಾಜನಕವಾಗಿದೆ. ಇದನ್ನುಈಗ ನಾಯಕತ್ವದ ಗುಣಗಳಲ್ಲಿ ಸ್ವಲ್ಪ ಸುಧಾರಿಸಿರುವಂತೆ ತೋರುವ ರಾಹುಲ್ ಗಾಂಧಿಯವರು ಸುಮ್ಮನೆ ನೋಡುತ್ತಿರುವುದನ್ನು ನೋಡಿದರೆ ನಮ್ಮ ರಕ್ಷಣೆ ಯಾರಿಂದ ಎಂಬ ಆತಂಕ ಉಂಟಾಗುತ್ತದೆ. ಕಣ್ಮುಚ್ಚಿ ಹಾಲು ಕುಡಿವ ಬೆಕ್ಕಿನ ಸಂತತನದೊಂದಿಗೇ ರಾಜಕಾರಣ ಮಾಡುತ್ತಾ ಬಂದಿರುವ ದೇವೇಗೌಡರು ತಮ್ಮ ರಾಜಕೀಯ ಜೀವನದ ಈ ಕೊನೆಯ ವರ್ಷಗಳಲ್ಲಿ ರಾಜ್ಯಕ್ಕೆ ಕೊಟ್ಟು ಹೋಗುತ್ತಿರುವ ಈ 'ಬಳುವಳಿ'ಯ ಮೂಲಕ ಈಗಾಗಲೇ ಪಾತಾಳ ಮುಟ್ಟಿರುವ ರಾಜ್ಯ ರಾಜಕಾರಣ ಸದ್ಯಕ್ಕೆ ಮೇಲೇಳದಂತೆ ಅದರ ಸೊಂಟ ಮುರಿದೇ ಹೋಗಲು ತೀರ್ಮಾನಿಸಿದಂತಿದೆ. ಇದಕ್ಕಾಗಿ ಅವರನ್ನು ರಾಜ್ಯದ ಜನತೆ ಎಂದೂ ಕ್ಷಮಿಸಲಾರರು

**–ಸಂಪಾದಕ**

# ಅಗಲಿದ ನಾಯಕ ಜಾರ್ಜ್ ಫರ್ನಾಂಡೀಸ್: ಒಂದು ಶ್ರದ್ಧಾಂಜಲಿ



ದೇಶ ಕಂಡ ಅಪರೂಪದ ಸಮಾಜವಾದಿ ಕಾರ್ಮಿಕ ನಾಯಕ ಜಾರ್ಜ್ ಫರ್ನಾಂಡೀಸ್ ಇನ್ನಿಲ್ಲ. ಆರೇಳು ವರ್ಷಗಳ ದೀರ್ಘ ಅಸ್ವಸ್ಥತೆಯಿಂದ ಮುಕ್ತಿಹೊಂದಿ ಅವರು ಕಳೆದ ಜನವರಿ ೨೯ ರಂದು ತಮ್ಮ ೮೯ನೇ ವಯಸ್ಸಿನಲ್ಲಿ ದೆಹಲಿಯ ಅಧಿಕೃತ ನಿವಾಸದಲಿ ಕೊನೆಯುಸಿರೆಳೆದರು. ಇದರೊಂದಿಗೆ ದೇಶದ ಸಮಾಜವಾದಿ ಪರಂಪರೆಯ ಹಿರಿಯ ತಲೆಮಾರಿನ ಕೊನೆಯ ಕೊಂಡಿ ಕಳಚಿದಂತಾಗಿದೆ.

ಮೂಲತಃ ಮಂಗಳೂರಿನ ಒಂದು ದೊಡ್ಡ ರೋಮನ್ ಕ್ಯಾಥೋಲಿಕ್ ಕುಟುಂಬದ ಮಗನಾಗಿ ಹುಟ್ಟಿದ ಜಾರ್ಜ್ ತಮ್ಮ ತಂದೆಯ ಇಚ್ಛೆಯಂತೆ ಪಾದರಿಯಾಗಲು ನಿರಾಕರಿಸಿ ಆಕಸ್ಮಿಕವೆಂಬಂತೆ ಆ ಊರಿನ ಸಮಾಜವಾದಿ ನಾಯಕರಲ್ಲೊಬ್ಬರಾಗಿದ್ದ ಅಮ್ಮೆಂಬಳ ಬಾಳಪ್ಪನವರ ಆಶ್ರಯ ದೊರೆತು ಮುಂಬೈಗೆ ತೆರಳಿದರು. ಅಲ್ಲಿ ಮತ್ತೆ ಮಂಗಳೂರಿನವರೇ ಆದ ಹಿರಿಯ ಕಾರ್ಮಿಕ ನಾಯಕ ಪ್ಲಾಸಿಡ್ ಡಿ'ಮೆಲ್ಲೋ ಅವರ ಶಿಷ್ಯತ್ವದಲ್ಲಿ ಆ ಮಹಾನಗರದ ಬಹು ದೊಡ್ಡ ಕಾರ್ಮಿಕ ನಾಯಕರಾಗಿ ಬೆಳೆದ ಕಥೆ ಆಧುನಿಕ ಭಾರತದ ಸಮಾಜವಾದಿ ಇತಿಹಾಸದ ದಂತಕಥೆಯೇ ಹೌದು. ಸಹಜವಾಗಿಯೇ ಅವರು ಅವೊತ್ತಿನ ರಾಜಕೀಯ ಬಂಡಾಯಗಾರ ಲೋಹಿಯಾ ಅವರ ಶಿಷ್ಯತ್ವವನ್ನೂ ಸ್ವೀಕರಿಸಿದರು.

ಫರ್ನಾಂಡೀಸ್ ಒಂದು ಕರೆ ಕೊಟ್ಟರೆ ಸಾಕು, ಇಡೀ ಮುಂಬೈ ನಗರದ ಜನಜೀವನ ಸ್ಥಗಿತಗೊಳ್ಳುತ್ತಿತ್ತು.. ಅಷ್ಟರಮಟ್ಟಿಗೆ ಅವರು ಆ ಊರಿನ ದುಡಿಯುವ ಕೈಗಳ ವಿಶ್ವಾಸ ಗಳಿಸಿದ್ದರು. ಹಡಗು ಕಟ್ಟೆ, ರಸ್ತೆ ಸಾರಿಗೆ, ಟ್ಯಾಕ್ಸಿ ಚಾಲಕರು, ರೈಲ್ವೇ ಸಿಬ್ಬಂದಿ, ಹೋಟೆಲ್ ಕಾರ್ಮಿಕರು, ಬೀದಿ ವ್ಯಾಪಾರಿಗಳು, ಹೀಗೆ ಎಲ್ಲ ಸಾಧ್ಯ ಕಾರ್ಮಿಕ ವಲಯಗಳ ಏಕಮೇವಾದ್ವತೀಯ ನಾಯಕರಾಗಿ ಹೊರಹೊಮ್ಮಿದರು. ೧೯೬೭ರ ಲೋಕಸಭಾ ಚುನಾವಣೆಗಳಲ್ಲಿ ಮುಂಬೈ ಉದ್ಯಮ ವಲಯದ ಅನಭಿಷಕ್ತ ಸಾಮ್ರಾಟ ಎನಿಸಿದ್ದ ಹಿರಿಯ ಕಾಂಗ್ರೆಸ್ ನಾಯಕ ಎಸ್.ಕೆ. ಪಾಟೀಲರನ್ನು ಬೃಹತ್ ಅಂತರದಲ್ಲಿ ಸೋಲಿಸಿದ್ದು ಮತ್ತು ದೇಶದ ಸಾಮಾನ್ಯ ಜನಜೀವನ ವಾರಗಟ್ಟಲೆ ಅಸ್ತವ್ಯಸ್ತಗೊಳ್ಳುವಂತೆ ಅವರು ೧೯೭೪ರಲ್ಲಿ ಸಂಘಟಿಸಿದ ಅಖಿಲ ಭಾರತ ರೈಲ್ವೇ ಮುಷ್ಕರ ಅವರ ರಾಜಕೀಯ ಹೋರಾಟದ ಎರಡು ಮಹಾಘಟನೆಗಳಾಗಿದ್ದು ಅವು ಅವರನ್ನು ಓರ್ವ ರಾಷ್ಟ್ರೀಯ ನಾಯಕನನ್ನಾಗಿ ಮಾಡಿದವು.

೧೯೭೫ರಲ್ಲಿ ಪ್ರಧಾನಿ ಇಂದಿರಾ ಗಾಂಧಿವರು ತಮ್ಮ ಅಧಿಕಾರ ಉಳಿಸಿಕೊಳ್ಳಲು ತುರ್ತು ಪರಿಸ್ಥಿತಿ ಹೇರಿದಾಗ ಅದರ ವಿರುದ್ಧ ಹೋರಾಡಲು ಭೂಗತರಾಗಿ ಬರೋಡಾ ಡೈನಾಮೈಟ್ ಪ್ರಕರಣದ ಸಂಬಂಧ ಬಂಧಿತರಾದರು.. ೧೯೭೭ರ ಲೋಕಸಭಾ ಚುನಾವಣೆಗಳಲ್ಲಿ ಸೆರೆಮನೆಯಲ್ಲಿದ್ದುಕೊಂಡೇ ಬಿಹಾರದ ಕ್ಷೇತ್ರವೊಂದರಿಂದ ದಾಖಲೆ ಬಹುಮತದಿಂದ ಗೆದ್ದ ಜಾರ್ಜ್ ಆಗ ಭಾರತದ ಯುವಜನತೆಯ ಕಣ್ಮಣಿಯೇ ಆದರು.

ನಂತರ ಜನತಾ ಪಕ್ಷ ಹೋಳಾಗಿ ಛಿದ್ರ ವಿಚ್ಛಿದ್ರವಾಗಿ ಹೋದ ಇತಿಹಾಸದ ಮಧ್ಯೆ ಫರ್ನಾಂಡೀಸರೂ ದಿಕ್ಕೆಟ್ಟು ತಮ್ಮ ರಾಜಕೀಯ ಜೀವನದಲ್ಲೂ ಏರಿಳಿತಗಳನ್ನು ಕಂಡರು. ಕೊನೆಗೆ ಅಟಲ್ ಬಿಹಾರಿ ವಾಜಪೇಯಿಯವರ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರದಲ್ಲಿ ಮಂತ್ರಿಯಾದಾಗ ಅವರ ರಾಜಕೀಯ ಜೀವನ ಒಂದು ಪೂರ್ಣ ಸುತ್ತು ಪೂರ್ಣಗೊಂಡಂತಾಗಿತ್ತು. ಲೋಹಿಯಾ ನಿಧನದ ನಂತರ ಅವರ ಬಹಳಷ್ಟು ಅನುಯಾಯಿಗಳಂತೆ ದಿಕ್ಕು ತಪ್ಪಿ ಪರಿತಪಿಸುವಂತಾದ ಜಾರ್ಜ್ ವಿವಿಧ ಸರ್ಕಾರಗಳಲ್ಲಿ ಎರಡು ಮೂರು ಬಾರಿ ಸಚಿವರಾಗಿ–ಕೈಗಾರಿಕೆ, ರೈಲ್ವೇ ಮತ್ತು ರಕ್ಷಣಾ ಮಂತ್ರಿಯಾಗಿ ಜನ ಮೆಚ್ಚುವಂತಹ ಕೆಲಸಗಳನ್ನೇ ಮಾಡಿದರು, ಉದಾ: ಕೋಕಾಕೋಲ ಉಚ್ಚಾಟನೆ, ಕೊಂಕಣ ರೈಲ್ವೇ ಸ್ಥಾಪನೆ, ಹಿಮ ಪ್ರದೇಶದ ಸೈನಿಕರಿಗೆ ವಿಶೇಷ ಸೌಲಭ್ಯಗಳ ತುರ್ತು ಪೂರೈಕೆ/ ಆದರೆ ತಾತ್ವಿಕ ರಾಜಕಾರಣದ ವಿಷಯದಲ್ಲಿ ಹಲವು ತಪ್ಪುಗಳನ್ನು ಮಾಡಿದರು. ಆದರೆ ಅವರ ದುಡಿಯುವ ವರ್ಗಗಳ ಪರವಾಗಿ, ಆನಂತರ ಸರ್ವಾಧಿಕಾರಿ ಆಳ್ವಿಕೆಯ ವಿರುದ್ಧ ನಡೆಸಿದ ಹೋರಾಟ ಅನುಪಮವಾದದ್ದು. ಹಾಗಾಗಿ ಅವರ ತಪ್ಪುಗಳಿಗಿಂತ ಅವರ –ಟಿಬೆಟ್‌ನ ಸ್ವಾತಂತ್ರ್ಯ ಹೋರಾಟವೂ ಸೇರಿದಂತೆ ಹಲವು ಮಾನವ ಹಕ್ಕುಗಳ ಹೋರಾಟಗಾರರ ಪರವಾದ–ಕೆಚ್ಚಿನ ಹೋರಾಟದ ಬದುಕಿಗಾಗಿ ಅವರು ನಮ್ಮ ಮನಸ್ಸಿನಲ್ಲಿ ಬಹುಕಾಲ ಉಳಿಯುವರು.

**–ಡಿಎಸ್ಸೆನ್**

## ನಿಮ್ಮ ಪತ್ರ

ಪ್ರಿಯ ಸಂಪಾದಕರೇ,

'ಹೊಸ ಮನುಷ್ಯ' ಸಮಾಜವಾದಿ ಮಾಸಿಕ ಎಂಟನೆಯ ವರ್ಷಕ್ಕೆ ಮುಂದಡಿಯಿಡುತ್ತಿರುವುದು ಕರ್ನಾಟಕದ ಸಾಂಸ್ಕೃತಿಕ ಬದುಕಿನಲ್ಲೊಂದು ಆಶಾದಾಯಕವಾದ ಬೆಳವಣಿಗೆ. ಸಾಹಿತ್ಯ ಮತ್ತು ಬದುಕನ್ನು ಜೊತೆಗೆರಿಸಿಕೊಂಡು ರಾಜಕೀಯ ಪಕ್ಷಗಳ ಛಾಯೆ ಮತ್ತು ಹಂಗಿನಿಂದ ದೂರ ನಿಂತುಕೊಂಡು, ಗ್ಯಾಲರಿ ಸ್ಲೋಗನ್ ಭಾಷೆಯ ಗುಂಗಿಗೆ ಒಳಗಾಗದೆ, ಲೋಹಿಯಾ ಸಮಾಜವಾದಿ ಚಿಂತನೆಯನ್ನು ವರ್ತಮಾನದ ಕರ್ನಾಟಕಕ್ಕೆ ಬಹುಮುಖಿಯಾಗಿ ಕೊಡುವ ನಿಮ್ಮ ಪ್ರಯತ್ನ ಮಹತ್ವದ್ದು. ಪ್ರತಿಯೊಂದು ಸಂಚಿಕೆಯೂ ನಿಷ್ಪಕ್ಷಪಾತವಾಗಿ ನಿಜವಾದ ಹೊಸತನ್ನು ಕೊಡುತ್ತಿದೆ .

**–ಡಾ. ಬಿ ಎ . ವಿವೇಕ ರೈ,** ಮಂಗಳೂರು

ಪತ್ರಿಕೆ ಎಂಟನೇ ವರ್ಷಕ್ಕೆ ಕಾಲಿಡುತ್ತಿರುವುದು ಸಂತೋಷದ ವಿಷಯ. ನಿಮ್ಮ ಆರೋಗ್ಯದ ಗುಟ್ಟೇ 'ಹೊಸ ಮನುಷ್ಯ' ಎಂದರೆ ಅತಿಶಯೋಕ್ತಿಯಲ್ಲ! ಈವರೆಗೆ ಬಂದ ಎಲ್ಲ ಸಂಚಿಕೆಗಳು ಸಂಗ್ರಹಯೋಗ್ಯವಾಗಿದ್ದು, ಪ್ರಜ್ಞೆಗೊಂದಲದ ಗೂಡಾದಾಗ ನಾನಂತೂ ಈ ಕೆಲವನ್ನು ತಿರುವುತ್ತಿರುತ್ತೇನೆ. ಸದ್ಯದ ಸಾಮಾಜಿಕ ಸಂವಹನ ಕ್ರಿಯೆಗೆ ಬೇಕಾದ ಹರಿತವಾದ, ಆದರೆ ಅಷ್ಟೇ ಆತ್ಮೀಯವಾದ, ನಿರ್ಭಿಡೆಯ ಸಂಪಾದಕೀಯ ಬರಹಗಳು ಮನಸ್ಸನ್ನು ಹಗುರಗೊಳಿಸುತ್ತಿದೆ. ನಿಮಗೊಂದು ಸಲಾಂ!

**–ಎಂ.ಬಿ. ಪಾಟೀಲ,** ಕಲಬುರಗಿ

ಮೊದಲಿನಿಂದಲೂ ಪತ್ರಿಕೆಯ ಓದುಗನಾದ ನನಗೆ, ಆರಂಭದ ವರ್ಷ ತೀರಾ ಗಂಭೀರ ಲೇಖನಗಳಿಂದಾಗಿ ಅಷ್ಟು ಇಷ್ಟವಾಗಿರಲಿಲ್ಲವಾದರೂ ಆನಂತರ ತನ್ನ ವೈವಿಧ್ಯಮಯ ಬರಹಗಳಿಂದ ಆಪ್ತವಾಯಿತು. ಈಗ ಪತ್ರಿಕೆಗಾಗಿ ಕಾಯುತ್ತೇನೆ. ಮುಖ್ಯವಾಗಿ ಸಂಪಾದಕೀಯ ವಿಶ್ಲೇಷಣೆಯ ನನ್ನ ಅರಿವಿನ ದಿಗಂತವನ್ನು ವಿಸ್ತರಿಸಿದೆ.

**–ಮಲ್ಲಿಕಾರ್ಜುನ ಹೊಸಪಾಳ್ಯ,** ತುಮಕೂರು

ಅತ್ಯಂತ ಕಳಕಳಿಯಿಂದ ಪ್ರತಿಯೊಬ್ಬ ಓದುಗನನ್ನೂ ಹೊಸ ಮನುಷ್ಯನನ್ನಾಗಿ ರೂಪಿಸುವ ಸಾಮಾಜಿಕ ಜವಾಬ್ದಾರಿಯನ್ನು ಇಂದು ಪ್ರಾಮಾಣಿಕವಾಗಿ ನಿರ್ವಹಿಸುತ್ತಿರುವ ಏಕೈಕ ಕನ್ನಡ ಮಾಸಿಕವೆಂದರೆ ನಮ್ಮ "ಹೊಸ ಮನುಷ್ಯ" ಇದರ ಹೂರಣ ಅರ್ಥಪೂರ್ಣ ಬದುಕು ಕಟ್ಟಿಕೊಳ್ಳಲು ಅತ್ಯಂತ ಸಹಕಾರಿಯಾಗಿದೆ. ಏಳು ವರ್ಷ ಮುಗಿಸಿ ಎಂಟನೇ ವರ್ಷಕ್ಕೆ ಕಾಲಿಟ್ಟಿರುವ ಪತ್ರಿಕೆಗೆ ಶುಭಾಶಯಗಳು.

**–ಎಸ್.ಆರ್ ಬಾಲಸುಬ್ರಮಣ್ಯ,** ಬೆಂಗಳೂರು

'ಹೊಸ ಮನುಷ್ಯ' ಎಂಟನೆಯ ವರ್ಷದ ಮೊದಲ ಸಂಚಿಕೆ ಈಗಷ್ಟೇ ಓದಿ ಮುಗಿಸಿದೆ. ಸಂಚಿಕೆ ಎಂದಿನಂತೆ ಕುತೂಹಲದಿಂದ ಓದಿಸಿಕೊಂಡು ಹೋಯಿತು. ಎಲ್ಲದಕ್ಕಿಂತ ಹೆಚ್ಚಾಗಿ ನನ್ನ ಗಮನ ಸೆಳೆದದ್ದು ನೀವು ಬರೆದ "ಮನುಷ್ಯನನ್ನು ಪ್ರಕೃತಿಯಿಂದ ಪ್ರತ್ಯೇಕಿಸುತ್ತಿರುವ ವಿಜ್ಞಾನವೆಂಬ ಅ–ಜ್ಞಾನ" ಲೇಖನ. "ಅಭಿವೃದ್ಧಿ" ಯನ್ನು ವಿಜ್ಞಾನ ಮತ್ತು ಅರ್ಥಶಾಸ್ತ್ರಗಳನ್ನು ನೆಲೆಯಾಗಿಟ್ಟುಕೊಂಡು ವ್ಯಾಖ್ಯಾನಿಸಿದ ರೀತಿ ಆಳವಾದ ಒಳನೋಟಗಳಿಂದ ಕೂಡಿದೆ. ಅಭಿವೃದ್ಧಿಯ ಹೆಸರು ಹೇಳಿ ಎಂತಹ ಅನಾಹುತಕಾರಿ ನಿರ್ಧಾರಗಳನ್ನಾದರೂ ಕೈಗೊಂಡು ದಕ್ಕಿಸಿಕೊಳ್ಳಬಹುದಾದ ಒಂದು ಸಾಮಾಜಿಕ ಮತ್ತು ರಾಜಕೀಯ ಮನೋಭೂಮಿಕೆ ಗಟ್ಟಿಯಾಗಿ ನಿರ್ಮಾಣವಾಗಿರುವ ಇಂದಿನ ಕಾಲಘಟ್ಟದಲ್ಲಿ ಅಭಿವೃದ್ಧಿ ಅಂದರೆ ಏನು, ಎಷ್ಟು, ಯಾಕಾಗಿ ಎಂಬ ಪ್ರಶ್ನೆಗಳನ್ನು ಗಟ್ಟಿಯಾಗಿ ಕೇಳಬೇಕಿದೆ. ಅಭಿವೃದ್ಧಿಯ ಕುರಿತಾದ ನಮ್ಮ ತಿಳುವಳಿಕೆ, ನಂಬಿಕೆ ಮತ್ತು ಭರವಸೆಗಳನ್ನು ಸಂಪೂರ್ಣವಾಗಿ ಪುನರ್ ವಿಮರ್ಶಿಸಬೇಕಾಗಿದೆ. ದೊಡ್ಡ ಪತ್ರಿಕೆಗಳು ದೊಡ್ಡ ಮಟ್ಟದಲ್ಲಿ ಮಾಡಬೇಕಾದ ಈ ಕೆಲಸವನ್ನು "ಹೊಸ ಮನುಷ್ಯ" ದಲ್ಲಿ ಕಂಡೆ. ಇದರ ಮುಂದಿನ ಭಾಗಕ್ಕೆ ಕಾಯುತ್ತಿರುತ್ತೇನೆ. ಇಂದೊಂದು ಸರಣಿಯಾಗಿ, ಒಂದು ಚರ್ಚೆಯಾಗಿ ಬೆಳೆದರೆ ಚೆನ್ನಾಗಿರುತ್ತದೆ.

**–ಎ. ನಾರಾಯಣ,** ಬೆಂಗಳೂರು

ಕಳೆದ ಸಂಚಿಕೆಯಲ್ಲಿ ಕೆ.ವಿ.ನಾರಾಯಣರ ನುಡಿಯ ಅಳಿವನ್ನು ಕುರಿತ ಪುಸ್ತಕಕ್ಕೆ ನೀವು ಬರೆದ ಪ್ರತಿಕ್ರಿಯೆ ಅರ್ಥಪೂರ್ಣವೂ, ಸಮಯೋಚಿತವೂ ಆಗಿತ್ತು. ನಮ್ಮ ಕೆಲ ವಿದ್ವಾಂಸರು ನಿಂತ ನೆಲ ಬಿಟ್ಟು ಆಕಾಶದಲ್ಲಿ ಬೌದ್ಧಿಕ ವಿಹಾರ ವಿಹಾರಕ್ಕೆ ಹೊರಟಂತಿದೆ!

**–ಎಸ್.ಎಚ್. ರಾಮದೇವ,** ದಾವಣಗೆರೆ

(೧೫ನೇ ಪುಟಕ್ಕೆ

ಮಾರ್ಚ್ ೨೩: ಲೋಹಿಯಾ ಜನ್ಮದಿನ

# ಲೋಹಿಯಾ : ಒಂದು ನೆನಪು

–ಡಾ. ರಾಜಾರಾಮ ತೋಳ್ಪಾಡಿ



> " ಇಂದು ಭಾರತವೂ ಸೇರಿದಂತೆ ಇಡಿಯ ಜಗತ್ತು ಪ್ರಜಾತಂತ್ರಕ್ಕೆ ಸಂಬಂಧಿಸಿದ ಒಂದು ದೊಡ್ಡ ಸಂಕಟವನ್ನು ಎದುರಿಸುತ್ತಿದೆ. ಪ್ರಜಾತಂತ್ರ ಒಳಗೊಳ್ಳುವ ಮೌಲ್ಯಗಳು ಹಾಗೂ ಈ ಮೌಲ್ಯಗಳನ್ನು ವಾಸ್ತವಗೊಳಿಸುವ ಸಂಘ-ಸಂಸ್ಥೆಗಳು ನಿಧಾನವಾಗಿ; ಆದರೆ ನಿಸ್ಸಂಶಯವಾಗಿ ಕ್ಷೀಣಿಸುತ್ತಿವೆ.. ಜಗತ್ತಿನಾದ್ಯಂತ ಪ್ರಜಾತಂತ್ರಕ್ಕೆ ಬಂದೊದಗಿದ ಈ ವಿಪತ್ತನ್ನು ಅರ್ಥ ಮಾಡಿಕೊಳ್ಳಲು ಹಾಗೂ ಈ ವಿಪತ್ತಿನಿಂದ ಪಾರಾಗಲು ನಮ್ಮ ಬೌದ್ಧಿಕ ಚರಿತ್ರೆಯನ್ನು ನಾವು ಮರುಪರಿಶೀಲಿಸುವ ಅಗತ್ಯವಿದೆ. ಈ ಮರುಪರಿಶೀಲನೆಯಲ್ಲಿ ಲೋಹಿಯಾರಂತಹ ಚಿಂತಕರು ನಮಗೆ ಮಹತ್ವದ ಭೂಮಿಕೆಯಾಗುತ್ತಾರೆ. ಪ್ರಜಾತಂತ್ರ ಬಹುಸಂಖ್ಯಾಕವಾದವಾಗುವ ಸಾಧ್ಯತೆಗಳನ್ನು ಸೂಕ್ಷ್ಮವಾಗಿ ಗ್ರಹಿಸಿದ ಚಿಂತಕರಲ್ಲಿ ಲೋಹಿಯಾ ಒಬ್ಬರು ಮಾತ್ರವಲ್ಲ ಫ್ಯಾಸಿವಾದದ ಅಪಾಯಗಳನ್ನು ಅರಿತ ಭಾರತೀಯ ಚಿಂತಕರಲ್ಲಿ ಲೋಹಿಯಾ ಪ್ರಮುಖರು...."

**ಡಾ**. ರಾಮಮನೋಹರ ಲೋಹಿಯಾ (೨೩.೩.೧೯೧೦–೧೨.೧೦. ೧೯೬೭) ಭಾರತದ ರಾಜಕಾರಣದಿಂದ ಕಣ್ಮರೆಯಾಗಿ ಸುಮಾರು ಐದು ದಶಕಗಳೇ ಕಳೆದು ಹೋಗಿವೆ. ಗಂಗೆ –ತುಂಗೆಯರಲ್ಲಿ ಸಾಕಷ್ಟು ನೀರು ಹರಿದು ಹೋಗಿದೆ. ಭಾರತವೂ ಸೇರಿದಂತೆ ಇಡಿಯ ಜಗತ್ತು ಜಾಗತೀಕರಣ ಎನ್ನುವ ನವಿರಾದ ಹೆಸರಿನ ಕೆಳಗೆ ವಿಶ್ವ ಬಂಡವಾಳದ ಅಧೀನದ ಮಾರುಕಟ್ಟೆಯಾಗಿ ರೂಪುಗೊಂಡಿದೆ. ಆಮೂಲಾಗ್ರವಾಗಿ ಬದಲಾದ ಈ ಕಾಲಮಾನದಲ್ಲಿ ಇಪ್ಪತ್ತನೆಯ ಶತಮಾನದ ಭಾರತದಲ್ಲಿ ಸಮಾಜವಾದಿ ರಾಜಕಾರಣಕ್ಕಾಗಿ ಶ್ರಮಿಸಿದ ಲೋಹಿಯಾರ ಚಿಂತನೆಯ ಇಂದಿನ ಅರ್ಥವೇನು? ಅಥವಾ ಅವರು ಪ್ರತಿಪಾದಿಸಿದ ಮೌಲ್ಯಗಳ ಇಂದಿನ ಮಹತ್ವವೇನು? ಸಂಕ್ಷಿಪ್ತವಾಗಿಯಾದರೂ ಇಲ್ಲಿ ತಿಳಿಯೋಣ.

ಲೋಹಿಯಾರ ಚಿಂತನೆಯ ಇಂದಿನ ಅರ್ಥ ಮತ್ತು ಮಹತ್ವಗಳನ್ನು ಅರಿಯುವ ನೆಲೆಯಲ್ಲಿ ಅವರ ಚಿಂತನ ಲೋಕದ ತಾತ್ವಿಕ ವಾಸ್ತುಶಿಲ್ಪವನ್ನು ಮೊದಲಿಗೆ ತಿಳಿದುಕೊಳ್ಳಬೇಕಾದ ಅಗತ್ಯವಿದೆ. ಲೋಹಿಯಾರ ಚಿಂತನೆಯಲ್ಲಿ ಮೊದಲ ನೋಟಕ್ಕೆ ಮೂರು ತಾತ್ವಿಕ ಅಂಶಗಳು ವೇದ್ಯವಾಗುತ್ತದೆ. ಅದರಲ್ಲಿ ಮೊದಲನೆಯದು, ರಾಷ್ಟ್ರ ಎನ್ನುವ ಆಧುನಿಕ ಭಾವಶೀಲ ಸಮುದಾಯದ ಬಗ್ಗೆ ಅವರಿಗಿರುವ ವಿಶೇಷ ಕಾಳಜಿ. ಈ ಕಾಳಜಿಯನ್ನು ರಾಷ್ಟ್ರವಾದ ಎಂದು ಕರೆಯುವುದಕ್ಕಿಂತಲೂ ಸಾಂಸ್ಕೃತಿಕ ಚರಿತ್ರೆಯ ಅರಿವಿನಲ್ಲಿ ವಿನ್ಯಾಸಗೊಂಡ ದೇಶದ ಕುರಿತಾದ ಒಂದು ವಿಮರ್ಶಾತ್ಮಕ ಪ್ರೇಮವೆಂದು ಬಣ್ಣಿಸುವುದು ಹೆಚ್ಚು ಸೂಕ್ತವಾಗುತ್ತದೆ. ಯಾಕೆಂದರೆ, ರಾಷ್ಟ್ರದ ಕಲ್ಪನೆಯಲ್ಲಿ ಮತ್ತು ರಾಷ್ಟ್ರೀಯತೆಯ ಇತಿಹಾಸದಲ್ಲಿ ನಿಹಿತವಾಗಿರುವ ಅಧಿಕಾರಶಾಹಿ ಮತ್ತು ಹಿಂಸೆ ಲೋಹಿಯಾರಿಗೆ ಅತ್ಯಂತ ಅಪ್ರಿಯವಾದ ವಿಷಯವಾಗಿತ್ತು. ಹಾಗಾಗಿ, ಅವರನ್ನು ರಾಷ್ಟ್ರವಾದಿ ಎಂದು ಕರೆಯುವುದು ಅಷ್ಟು ಸೂಕ್ತವಾಗಲಾರದು. ಲೋಹಿಯಾರ ಚಿಂತನೆಯಲ್ಲಿ ಕಂಡು ಬರುವ ಎರಡನೆಯ ತಾತ್ವಿಕ ಅಂಶ ಪ್ರಖರವಾದ ವಿಚಾರಶೀಲತೆಯಲ್ಲಿ ರೂಪುಗೊಂಡ ಪ್ರಜಾತಂತ್ರದ ಕಲ್ಪನೆ. ಈ ಪ್ರಜಾತಂತ್ರದ ಕಲ್ಪನೆ ಸ್ವಾತಂತ್ರ್ಯದ ಬಗೆಗಿನ ಆಧ್ಯಾತ್ಮಿಕ ಶ್ರದ್ಧೆ ಹಾಗೂ ಕ್ರಿಯಾಶೀಲ ನಾಗರಿಕತ್ವದ ನೆಲೆಯಿಂದ ರೂಪುಗೊಂಡಿದೆ. ಬಹುಶ: ಲೋಹಿಯಾರನ್ನು ಭಾರತದ ಪ್ರಜಾತಂತ್ರದ ಮೊದಲ ಶ್ರೇಣಿಯ ತತ್ವಪದಕಾರನೆಂದು ಬಣ್ಣಿಸಬಹುದು. ಲೋಹಿಯಾರ ತತ್ವಚಿಂತನೆಯಲ್ಲಿ ಕಂಡು ಬರುವ ಮೂರನೆಯ ಅಂಶ ಮಾನವ ಸಮಾಜದ ಬೌದ್ಧಿಕ ಹಾಗೂ ಸಾಂಸ್ಕೃತಿಕ ಸ್ವಾಯತ್ತತೆಯನ್ನು ಎತ್ತಿ ಹಿಡಿಯುವ ಸಮಾಜವಾದಿ ದೃಷ್ಟಿ. ಈ ಮೂರು ಅಂಶಗಳನ್ನು ಲೋಹಿಯಾರ ತಾತ್ವಿಕ ರಾಜಕಾರಣದ ನೆಲೆಗಟ್ಟುಗಳು ಎಂದು ಕರೆಯಬಹುದು.

ಈ ತಾತ್ವಿಕ ನೆಲೆಗಟ್ಟಿನಿಂದ ಲೋಹಿಯಾರ ರಾಜಕೀಯ ಕ್ರಿಯಾಚರಣೆಯ ಮೂರು ಆಶೋತ್ತರಗಳು ಹೊರಹೊಮ್ಮುತ್ತವೆ. ಅವುಗಳನ್ನು ಸ್ವಾತಂತ್ರ್ಯದ ಪ್ರತಿಪಾದನೆ, ಸಮಾನತೆಗಾಗಿ ಸೆಣಸಾಟ ಹಾಗೂ ಶ್ರೇಷ್ಠತೆಯ ಹುಡುಕಾಟ ಎಂದು ನಾನು ಬಣ್ಣಿಸಲು ಇಚ್ಛಿಸುತ್ತೇನೆ. ಸ್ವಾತಂತ್ರ್ಯ, ಲೋಹಿಯಾ ರಾಜಕಾರಣದ ಅತ್ಯಂತ ಕೇಂದ್ರ ಕಾಳಜಿ. ಸ್ವಾತಂತ್ರ್ಯದ ಬಗೆಗಿನ ಅವರ ನಿಷ್ಠೆಯನ್ನು ಕೇವಲ ವ್ಯಕ್ತಿ ನಿಷ್ಠತೆಯುದಾರವಾದಿ(ಲಿಬರಲ್) ಚಿಂತನೆ ಎಂದು ತಿಳಿಯಲಾಗದು ಅಥವಾ ಅದನ್ನು ಲೋಹಿಯಾ ನಿಕಟ ಸಂಪರ್ಕ ಹೊಂದಿದ್ದ ಸಾಮಾಜಿಕ ಪ್ರಜಾತಂತ್ರದ ಪ್ರಭಾವಕ್ಕಷ್ಟೇ ಮಿತಿಗೊಳಿಸಲಾಗದು. ಜರ್ಮನಿಯ ಅವರ ಶೈಕ್ಷಣಿಕ ವಾಸ್ತವ್ಯದ ಕಾಲಾವಧಿಯಲ್ಲಿ ಅವರು ಕಣ್ಣಾರೆ ಕಂಡ ಫ್ಯಾಸಿವಾದದ ಭಯಾನಕ ವಾಸ್ತವ, ವಸಾಹತುಶಾಹಿ ಮಾನವ ಸಮುದಾಯಗಳ ಮೇಲೆ ನಡೆಸಿದ ಬೌದ್ಧಿಕ ಹಿಂಸೆ ಹಾಗೂ ಭಾರತೀಯ ಸಮಾಜದಲ್ಲಿ ವಿಭಿನ್ನ ರೀತಿಗಳಲ್ಲಿ ಹತ್ತಿಕ್ಕಲ್ಪಡುವ ಮಾನವನ ಘನತೆ ಮತ್ತು ಸ್ವಾತಂತ್ರ್ಯ ಲೋಹಿಯಾರಲ್ಲಿ ಸ್ವಾತಂತ್ರ್ಯವನ್ನು ಒಂದು ಆಧ್ಯಾತ್ಮಿಕ ಶ್ರದ್ಧೆಯಾಗಿ ಗ್ರಹಿಸುವಂತೆ ಮಾಡಿತು. ಸ್ವಾತಂತ್ರ್ಯದ ಬಗೆಗಿನ ಲೋಹಿಯಾರ ಈ ಆಧ್ಯಾತ್ಮಿಕ ಶ್ರದ್ಧೆ ಅವರನ್ನು ವಿಚಾರ ಸ್ವಾತಂತ್ರ್ಯದ ಹಾಗೂ ಮಾನವ ಸಮುದಾಯಗಳ ಸಾಂಸ್ಕೃತಿಕ ಅನನ್ಯತೆಯ ಬಹುದೊಡ್ಡ ಪ್ರತಿಪಾದಕರನ್ನಾಗಿಸಿತು. ಆದ್ದರಿಂದಲೇ, ಪ್ರಜಾತಂತ್ರ ಬಹುಸಂಖ್ಯಾತವಾದವಾಗಿ ವಿರೂಪಗೊಂಡಾಗ ಉಂಟಾಗಬಹುದಾದ ಅನಾಹುತಗಳನ್ನು ಲೋಹಿಯಾರಷ್ಟು ಸೂಕ್ಷ್ಮವಾಗಿ ಅರಿತ ಇನ್ನೊರ್ವ ಭಾರತೀಯ ಚಿಂತಕ ಇಲ್ಲವೆಂದೇ ಹೇಳಬೇಕು. ಮಾನವನ ವ್ಯಕ್ತಿಗತ ಸ್ವಂತಿಕೆ ಹಾಗೂ ಸಾಮುದಾಯಿಕ ಅಸ್ಮಿತೆಗಳ ಬಗೆಗಿನ ಲೋಹಿಯಾರ ಅಸಾಧಾರಣ ಅರಿವು ಅವರ ರಾಜಕಾರಣದ ಪರಿಕಲ್ಪನಾತ್ಮಕ ಕಾರ್ಯಸೂಚಿಯಾದ 'ಸಪ್ತಕ್ರಾಂತಿ'ಯಲ್ಲಿ ನಿಖರವಾಗಿ ಕಂಡುಬರುತ್ತದೆ. ಮಾನವನ ಸ್ವಂತಿಕೆಯ ಮೇಲೆ ನಡೆಯಬಹುದಾದ ಎಲ್ಲ ಸಾಮುದಾಯಿಕ ಹಲ್ಲೆಗಳನ್ನು ಸಪ್ತಕ್ರಾಂತಿ ಕಟುವಾಗಿ ವಿರೋಧಿಸುತ್ತದೆ.

ಲೋಹಿಯಾರ ರಾಜಕೀಯ ಕ್ರಿಯಾಚರಣೆಯ ಎರಡನೆಯ ಆಶೋತ್ತರವನ್ನು ಸಮಾನತೆಗಾಗಿ ಸೆಣಸಾಟ ಎಂದು ನಾವು ಗುರುತಿಸಿದ್ದೇವೆ. ಲೋಹಿಯಾ ಕೇವಲ ಭಾರತದಲ್ಲಿ ಮಾತ್ರವಲ್ಲ, ಇಡಿಯ ವಿಶ್ವದಲ್ಲಿ ಜಾತಿ, ವರ್ಗ, ಲಿಂಗ, ಧರ್ಮ, ರಾಷ್ಟ್ರ, ಜನಾಂಗೀಯತೆ ಮತ್ತು ಭಾಷೆ ಇವುಗಳ ಆಧಾರದಲ್ಲಿ ರಚಿತವಾದ ಎಲ್ಲ ಬಗೆಯ ಅಸಮಾನ ಸಂಬಂಧಗಳನ್ನು ವಿರೋಧಿಸುತ್ತಾರೆ. ಬಹುಶ: ಜಾತಿ, ವರ್ಗ, ಲಿಂಗ ಮೊದಲಾದ ಅಸಮಾನ ಸಂಬಂಧಗಳ ವಿರುದ್ಧ ಲೋಹಿಯಾರ ಹೋರಾಟಗಳ ಜೊತೆಗೆ ಇತರ ಅನೇಕ ಭಾರತೀಯ ಚಿಂತಕರನ್ನು ಅವರ ಸಹಪ್ರಯಾಣಿಕರಾಗಿ ಕಾಣಬಹುದು. ಆದರೆ, ಇಂಗ್ಲೀಷ್ ಪ್ರಭುತ್ವ ಸೃಷ್ಟಿಸಿದ ಅಸಮಾನತೆಯ ವಿರುದ್ಧ ಅವರು ನಡೆಸಿದ ಹೋರಾಟ ಮತ್ತು ಭಾರತೀಯ ಭಾಷೆಗಳ ಪುನರುಜ್ಜೀವನದ ಕುರಿತಾದ ಅವರ ಪರಿಶ್ರಮ ಸರಿಸಾಟಿ ಇಲ್ಲದ್ದು. ವಸಾಹತುಶಾಹಿಯ ಬೌದ್ಧಿಕ ಯಜಮಾನಿಕೆಯನ್ನು ವಸಾಹತೋತ್ತರ ಭಾರತ ಇಂಗ್ಲೀಷ್ ವ್ಯಾಮೋಹದಲ್ಲಿ ಕಂಡ ಲೋಹಿಯಾ ಸ್ವತಂತ್ರ ಭಾರತದಲ್ಲಿ ಇಂಗ್ಲೀಷ್ ಅಧಿಪತ್ಯದ ವಿರುದ್ಧ ಹೋರಾಟವನ್ನು ಭಾರತೀಯ ಜನ ಸಮುದಾಯಗಳ ಅತ್ಯಂತ ಮಹತ್ವದ ಪ್ರಜಾತಾಂತ್ರಿಕ ಹೋರಾಟವನ್ನಾಗಿ ಗ್ರಹಿಸಿದರು. ಬಹುಶ:, ಲೋಹಿಯಾರ ಸಮಾನತೆಯ ಪ್ರತಿಪಾದನೆಯ ಅತ್ಯಂತ ಮುಖ್ಯವಾದ ಅಧ್ಯಾಯವನ್ನು ಅವರ ಇಂಗ್ಲೀಷ್ ಪ್ರಭುತ್ವದ ಪ್ರತಿಭಟನೆಯಲ್ಲಿ ಕಂಡುಕೊಳ್ಳಬಹುದು.

ಲೋಹಿಯಾರ ರಾಜಕಾರಣದ ಮೂರನೆಯ ಆಶೋತ್ತರವನ್ನು ಶ್ರೇಷ್ಠತೆಯ ಹುಡುಕಾಟವೆಂದು ನಾನು ಕರೆದಿದ್ದೇನೆ. ಸ್ವಾತಂತ್ರ್ಯ ಮತ್ತು ಸಮಾನತೆಯ ಜೊತೆಜೊತೆಗೆ ಲೋಹಿಯಾ ಶ್ರೇಷ್ಠತೆಯ ಪ್ರತಿಪಾದಕರೂ ಹೌದು. ಅಥವಾ ಇದನ್ನು ಹೀಗೆ ಹೇಳಬಹುದು: ಸ್ವಾತಂತ್ರ್ಯ ಮತ್ತು ಸಮಾನತೆಗಳ ಬಗೆಗಿನ ತಮ್ಮ ಪ್ರಯತ್ನದಲ್ಲಿ ಶ್ರೇಷ್ಠತೆಯ ಆಶಯ ಮರೆಯಾಗಕೂಡದು ಎನ್ನುವ ವಿಶೇಷವಾದ ಅರಿವು ಲೋಹಿಯಾರಿಗೆ ಇದ್ದಿತು. ಭಾರತದ ಬಹುರೂಪಿ ಸಂಸ್ಕೃತಿಯ ಅನೇಕ ಮಜಲುಗಳನ್ನು ಅವರು ಗುರುತಿಸಿದ ರೀತಿ, ಭಾರತದ ಪುರಾಣ ಪ್ರಪಂಚದ ವಿದ್ಯಮಾನಗಳಿಗೆ ಅವರು ನೀಡಿದ ವಿನೂತನ ವ್ಯಾಖ್ಯಾನಗಳು ಸಂಸ್ಕೃತಿ ಮತ್ತು ಭಾಷೆಯ ಪ್ರಶ್ನೆಗಳನ್ನು ಅವರು ಎದುರಿಸಿದ ರೀತಿ ಹಾಗೂ ಭಾರತದ ನದಿಗಳು ಮತ್ತು ಯಾತ್ರಸ್ಥಳಗಳ ಬಗೆಗಿನ ಅವರ ವ್ಯಾಖ್ಯಾನಗಳು ಲೋಹಿಯಾರ ಸಾಂಸ್ಕೃತಿಕ

(೧೫ನೇ ಪುಟಕ್ಕೆ

# ತನ್ನ ತಾನರಿತರೆ ಅದೆ ಪ್ರಳಯ!

**ಮನುಷ್ಯನನ್ನು ಪ್ರಕೃತಿಯಿಂದ ಪ್ರತ್ಯೇಕಿಸುತ್ತಿರುವ 'ವಿಜ್ಞಾನ'ವೆಂಬ ಅ-'ಜ್ಞಾನ' : ಭಾಗ-೨)**

-ಡಿ.ಎಸ್. ನಾಗಭೂಷಣ

(ಕಳೆದ ಸಂಚಿಕೆಯಿಂದ ಮುಂದುವರೆದುದು)

**ನಾ**ನು ಆಗಲೇ ಹೇಳಿದ ಹಾಗೆ ಈ ಆಧುನಿಕ ವಿಜ್ಞಾನ ವಿಶ್ಲೇಷಣ ಜ್ಞಾನ. ಕೇವಲ ಜಗತ್ತನ್ನು ಜಡವಾಗಿ ನೋಡುವಂತಹ ಜ್ಞಾನ. ಎಲ್ಲವೂ ಜಡವೆ, ಮನುಷ್ಯರನ್ನು ಬಿಟ್ಟು ಮತ್ತು ಅದು ವಿಶ್ಲೇಷಿಸುವುದು ಅಳತೆಗೆ ಸಿಗುವ ವಸ್ತುಗಳನ್ನು ಮಾತ್ರ. ಅಳತೆಗೆ ಸಿಗದ ವಸ್ತುಗಳು, ವಿದ್ಯಮಾನಗಳು ಬೇಕಾದಷ್ಟಿವೆ ಜಗತ್ತಿನಲ್ಲಿ. ಉದಾಹರಣೆಗೆ, ನೀವು ಕೇಳಿರಬಹುದು, ಫಿಸಿಕ್ಸ್‌ನಲ್ಲಿ ಮೂಲಭೂತ ಕಣ-ಫಂಡಮೆಂಟಲ್ ಪಾರ್ಟಿಕಲ್ ಬಗ್ಗೆ. ಒಂದು ವಸ್ತುವನ್ನು ಒಡೆದು, ಒಡೆದು, ಒಡೆದು ನೋಡಿ ಅಣು, ಅಣುವಿನಲ್ಲಿ ಪರಮಾಣು, ಪರಮಾಣುವಿನಲ್ಲಿ ಪರಮಾಣು ಬೀಜ, ಅದರಲ್ಲಿ ಮತ್ತು ಸುತ್ತ ಇನ್ನಷ್ಟು ಕಣಗಳು.... ಒಡೀತಾನೆ ಇದೀವಿ ನಾವು, ಸಿಕ್ತಾನೇ ಇಲ್ಲ ಆ ಮೂಲ-ಭೂತ ಕಣ ಯಾವುದು ಅಂತ. ಸುಸ್ತಾಗಿ ಸುಸ್ತಾದ ಹಂತದಲ್ಲಿ ದೊರೆತ ಕಣಕ್ಕೆ ದೇವಕಣ ಅಂತ ಹೆಸರು ಇಟ್ಟು ಬಿಟ್ವಿ. ಎಲ್ಲಿಗೆ ಬಂತು ನಮ್ಮ ವಿಜ್ಞಾನ! ಅವಾಗ್ಲಾದ್ರೂ ಈ ವಿಜ್ಞಾನಿಗಳಿಗೆ, ಅವರಿಗಿಂತ ಹೆಚ್ಚಾಗಿ ವಿಜ್ಞಾನವಾದಿಗಳಿಗೆ ನಮ್ಮ ಪುರಾತನರು ದೇವರು ಅಂದರೆ ಏನು ತಿಳಿದುಕೊಂಡಿದ್ದರು ಅಂತ ಗೊತ್ತಾಗಬೇಕಾಗಿತ್ತು. ದೇವರು ಅಂದ್ರೆ ಗಣಪತಿ-ವಿಷ್ಣು-ಈಶ್ವರ ಅಥವಾ ದುರ್ಗೆ ಮಾರಿ ಅಲ್ಲ. ನಮ್ಮ ಸೃಷ್ಟಿಯ ಮೂಲ. ನಾವೆಲ್ಲರೂ ಮನುಷ್ಯರು ಮಾತ್ರ ಅಲ್ಲ, ಈ ಗಿಡ, ಪಕ್ಷಿ-ಪ್ರಾಣಿ, ಕ್ರಿಮಿ-ಕೀಟ ಬಂಡೆ, ನದಿ ಎಲ್ಲವೂ ಬಂದಿರೋದು ಆ ಒಂದೇ ಮೂಲದಿಂದಲೇ ಆ ಮೂಲ ನಮಗೆ ಗೊತ್ತಿಲ್ಲ. ಅದನ್ನ ಅರ್ಥ ಮಾಡ್ಕೊಳ್ಳೋಕೆ ನಮ್ಮ ಕೈಲಿ ಆಗ್ತಿಲ್ಲ. ಆ ಒಂದು ನಮ್ರತೆ ಮನುಷ್ಯನಿಗೆ ಬರ್ಲಿಲ್ಲ. ನಮ್ರತೆ ಇತ್ತು. ಆದರೆ ವಿಜ್ಞಾನ ಅದನ್ನು ಹಾಳು ಮಾಡ್ತು. ಎಲ್ಲವನ್ನೂ ನಾವು ತರ್ಕಕ್ಕೆ ಒಗ್ಗಿಸಿಕೊಂಡು, ಕಾರ್ಯ-ಕಾರಣಗಳ ಸಂಬಂಧದ ಮೂಲಕ ಅರ್ಥ ಮಾಡ್ಕೋಬಹುದು, ಎಲ್ಲವನ್ನೂ ಬದಲಾವಣೆ-ಮರು ಹೊಂದಾಣಿಕೆ -manipulate- ಮಾಡಬಹುದು ಅಂತ.

ಈ ಅಹಂಕಾರಿ ವಿಜ್ಞಾನ ಮಾಡಿರೋ ಅನಾಹುತಕ್ಕೆ ಒಂದು ಸಣ್ಣ ಉದಾಹರಣೆಯನ್ನು ಕೊಡ್ತೀನಿ. ನೀವೆಲ್ಲಾ ಹಿರೋಷಿಮಾ ನಾಗಸಾಕಿ ಮೇಲೆ ಬಾಂಬ್ ಹಾಕಿದ ಘಟನೆ ಬಗ್ಗೆ ಕೇಳಿರಬಹುದು.ಈ ಬಾಂಬ್ ದಾಳಿಯಿಂದಾಗಿ ಸಾವಿರಾರು ಜನ ಸತ್ತೋಗಿಬಿಟ್ಟರು. ಲಕ್ಷಾಂತರ ಜನ ಅಂಗವಿಕಲರಾದರು. ಇನ್ನಷ್ಟು ಜನ ಜೀವನ ಪೂರ್ತಿ ರೋಗಿಗಳಾಗಿ ಸತ್ರು. ಆ ಬಾಂಬ್ ಹಾಕಿದನಲ್ಲ, ಆ ಪೈಲೆಟ್, ಅವನು ಬಾಂಬ್ ಹಾಕಿದ ಮೇಲೆ ಈ ದುರಂತ ನೋಡಿ, ಕೇಳಿ ವಿಲಿವಿಲಿ ಒದ್ದಾಡಿ ಸತ್ಹೋದ. ಯಾಕೇಂದ್ರೆ ಅವನೊಬ್ಬ ನಿಷ್ಠಾವಂತ ಕ್ರಿಶ್ಚಿಯನ್ ಆಗಿದ್ದ. ಕ್ರಿಶ್ಚಿಯನ್ನರ ಮೂಲ ನಂಬಿಕೆ, Thou shall not kill-ನಾನು ಇನ್ನೊಬ್ಬರನ್ನು ಕೊಲ್ಲುವುದಿಲ್ಲ ಅಂತ. ಅವನು ಈ ಪಾಪಪ್ರಜ್ಞೆಗೆ ಒಳಗಾಗಿ, ಹುಚ್ಚನಾಗಿ ಆತ್ಮಹತ್ಯೆ ಮಾಡ್ಕೊಂಡುಬಿಟ್ಟ. ಅದಾದ ಮೂವತ್ತು ವರ್ಷಗಳ ನಂತರ ವಿಯೆಟ್ನಾಮ್ ಯುದ್ಧ ನಡೆಯಿತು. ವಿಯೆಟ್ನಾಂ ಯುದ್ಧದಲ್ಲಿ ರಸಾಯನಿಕ ಬಾಂಬ್ ಹಾಕಿದರು, ಅದೇ ಅಮೆರಿಕದವರು. ಆ ಬಾಂಬ್ ಹಾಕಿದ ಪೈಲೆಟ್ ವಿಯಯಟ್ನಾಂನ ತನ್ನ ಸೇನಾ ನೆಲೆಯಲ್ಲೇ ಆರಾಮಾಗೇ ಇದ್ದ. ಆಗ ನಮ್ಮ ತರ ಕೆಲವು 'ತಲೆಹರಟೆ'ಗಳು ಅವನನ್ನು ಒಂದು ಪೇಟೆ ಬೀದಿಗೆ ಕರೆತಂದು, "ನೋಡಪ್ಪ, ವಿಯೆಟ್ನಾಮ್ ನಿನ್ನ ಶತ್ರು ದೇಶಾಂತ ತಾನೇ ಬಾಂಬ್‌ಗಳನ್ನು ಹಾಕಿ ಜನರನ್ನು ಕೊಲ್ತಿರೋದು?" ಅಂತ ಅವನ ಕೈಗೆ ಒಂದು ಮಚ್ಚನ್ನು ಕೊಟ್ಟು, "ನೋಡು, ಆ ರಸ್ತೆಯ ಮೇಲೆ ಒಬ್ಬಳು ಮುದುಕಿ ಹೋಗ್ತಾ ಇದ್ದಾಳೆ. ಅವಳು ವಿಯೆಟ್ನಾಮಿನ ಹೆಂಗಸು. ನೀನು ಹೋಗಿ ಆ ಹೆಂಗಸನ್ನು ಕೊಂದ್ಬಿಟ್ಟು ಬರ್ತೀಯಾ?" ಅಂತ ಕೇಳಿದರು. ಇದರಿಂದ ಗಾಬರಿಯಾದ ಅವನು "ಏನು? ಏನು ಹೇಳ್ತಾ ಇದ್ದೀರಾ ನೀವು? ಆ ಅಮಾಯಕ ಹೆಂಗಸನ್ನು ಕೊಲ್ಲು ಅಂತ ಹೇಳ್ತಾ ಇದೀರಲ್ಲ! ಇದು ಅಧರ್ಮವಾಗುತ್ತೆ. Thou shall not kill ಅನ್ನೋ ನನ್ನ ಧರ್ಮಾದೇಶ ಉಲ್ಲಂಘನೆ ಆಗ್ತದೆ!" ಎಂದು ಹೌಹಾರಿದ. ಆಗ "ಆದರೆ ಅಲ್ಲಿ ಮತ್ತೆ ಅಷ್ಟೊಂದು ಜನರನ್ನು ಕೊಂದ್ಯಲ್ಲ ನೀನು ರಸಾಯನಿಕ ಬಾಂಬ್ ಹಾಕ್ಬಿಟ್ಟು, ಅದೇನು ಅಧರ್ಮವಲ್ವಾ?" ಅಂತ ಅವನ್ನನ್ನ ಕೇಳಿದ್ರೆ, ಅವನು ಅಮಾಯಕವಾಗಿ "ನಾನೇನು ಕೊಲ್ಲಲಿಲ್ಲಪ್ಪ. ಕಂಪ್ಯೂಟರ್ ಕೊಲ್ತು. ಕಂಪ್ಯೂಟರ್‌ನ ಯಾರೋ ಪ್ರೋಗ್ರಾಂ ಮಾಡಿದ್ರು. ನನ್ನ ಮೇಲಧಿಕಾರಿ ಹೇಳಿದ ಕಡೆ ನಾನು ವಿಮಾನ ತೆಗೆದುಕೊಂಡು ಹೋದೆ. ಅಷ್ಟೇ" ಎಂದು ಉತ್ತರಿಸಿದನಂತೆ. ಇದು ಆಧುನಿಕ ವಿಜ್ಞಾನದ ದುರಂತ.ತಂತ್ರಜ್ಞಾನದ ರೂಪದಲ್ಲಿ ಅದು ಹೀಗೆ ಧರ್ಮವನ್ನೇ ನಮ್ಮ ಸಂವೇದನೆಯಿಂದ ಪ್ರತ್ಯೇಕಿಸಿಬಿಟ್ಟಿದೆ. ನಮ್ಮ ಮನಸ್ಸಿನ ಸತ್ವವನ್ನೇ ಅದರ ಸಮಗ್ರತೆಯನ್ನೇ ಒಡೆದು ನಾಶ ಮಾಡ್ಬಿಟ್ಟಿದೆ.



ಹೀಗೆ ವಿಜ್ಞಾನ ಧರ್ಮದ ಜಾಗಕ್ಕೆ ಬಂದು, ನಮ್ಮ ಸಂವೇದನೆಯನ್ನೇ ಕಡಿದುಹಾಕ್ಬಿಟ್ಟಿದೆ.

ಇನ್ನೂ ಒಂದು ಮುಖ್ಯವಾದ ಮಾತು ಹೇಳಬೇಕು ನಿಮಗೆ. ಈ ಆಧುನಿಕ ವಿಜ್ಞಾನ ಅನ್ನುವುದು ನಮಗೆ ಬಂದದ್ದು, ನಾನು ಆಗಲೇ ಹೇಳಿದ ಹಾಗೆ, ಜ್ಞಾನಯುಗದ ಒಂದು ಕೊಡುಗೆಯಾಗಿ. ಹಾಗೆ ಅದು ಬಂದದ್ದು ಧರ್ಮದ ವಿರುದ್ಧ ಒಂದು ಪ್ರತಿಕ್ರಿಯೆಯಾಗಿ, ಪ್ರೊಟೆಸ್ಟ್ ಆಗಿ ಕೂಡ. ಇದರ ಪರಿಣಾಮವಾಗಿ ಪ್ರೋಟೆಸ್ಟೆಂಟ್ ಧರ್ಮ ಅಂತ ಒಂದು ಬಂತು. ಈ ರೋಮನ್ ಕ್ಯಾಥೋಲಿಕ್ ಧರ್ಮದ ಸಂಪ್ರದಾಯವಾದದ ವಿರುದ್ಧ ಈ ಧರ್ಮ. ಕ್ರಿಶ್ಚಿಯನ್ ಧರ್ಮ ಅಂತ ಏನಿದೆ ಅದು ಪೂರ್ತಿ ಧರ್ಮಾಧಿಪತಿಗಳ ಕೈ ಸೇರಿಬಿಟ್ಟು ಅವರದೇ ಸರ್ವಾಧಿಕಾರ ಆಗಿಬಿಟ್ಟಿದೆ, ಆದ್ದರಿಂದ ಬೈಬಲ್ಲನ್ನು ಬರೀ ಲ್ಯಾಟಿನ್ ಭಾಷೆಯಲ್ಲಿ ಮಾತ್ರ ಬೇಕಾಗಿಲ್ಲ ಎಲ್ಲ ಭಾಷೆಗಳಿಗೂ ಅನುವಾದ ಮಾಡಬೇಕು ಅನ್ನುವಂತಹ ಹಲವು ಮಡಿ-ಮೈಲಿಗೆಗಳನ್ನು ಸಡಿಲಿಸುವ ಉದಾರವಾದಿ ಧರ್ಮ ಪ್ರಾಟೆಸ್ಟೆಂಟ್ ಧರ್ಮ. ಪೂರ್ವದ ಸಂಪ್ರದಾಯವಾದಿ ಧರ್ಮದ ಭಾರವಾದ ಪಾರಮಾರ್ಥಿಕತೆಗೆ ಪ್ರತಿಕ್ರಿಯಿಸ್ತಾ ತನ್ನ ಉದಾರವಾದದ ಭಾಗವಾಗಿ ಆ ಹೊಸ ಧರ್ಮ ಏನ್ ಹೇಳ್ತು ಅಂದ್ರೆ, ಈ ಜಗತ್ತು ಮನುಷ್ಯನ ಸುಖಕ್ಕಾಗಿ ದೇವರು ಕೊಟ್ಟಿರೋ ಕೊಡುಗೆ. ಮನುಷ್ಯನ ಸುಖ-ಸೌಲಭ್ಯಗಳಿಗಾಗಿ ದೇವರು ಕೊಟ್ಟಿರುವ ಕೊಡುಗೆನೇ ಈ ಭೂಮಿ. ಅಲ್ಲಿಂದ ಶುರುವಾಯ್ತು ಈ ಆಧುನಿಕ ವಿಜ್ಞಾನದ ಆಟೋ ಸ್ಪರ್ಧೆ!. ಅಂದ್ರೆ ಈ ಭೂಮಿಯನ್ನು ದೇವರ ಕೊಡುಗೆ ಎಂದು ಹೇಳುವ ಮೂಲಕ ದೇವರಿಂದ ಅದನ್ನ ಬೇರೆ-ಪ್ರತ್ಯೇಕ ಮಾಡ್ಬಿಡ್ತು. ನಾವು ಸೃಷ್ಟಿಯೇ ದೇವರು ಅಂದ್ಕೊಂಡಿದ್ವಿ, ಇಲ್ಲ, ಸೃಷ್ಟಿನೇ ಬೇರೆ. ದೇವರೇ ಬೇರೆ ಅಂತ It separated God from the creation. ಈ ಭೂಮಿಯನ್ನು ನಮ್ಮ ಸುಖಕ್ಕೋಸ್ಕರ ಹೇಗಾದ್ರೂ ಬಳಸ್ಕೊಳ್ಬಹುದು. ಅಂದ್ರೆ, ಭೂಮಿ ಅನ್ನೋದು ಬಳಕೆದಾರಿಕೆ ವಸ್ತು, ಗ್ರಾಹಕ ವಸ್ತು ಆಗೋಗ್ಬಿಡ್ತು. It became a consumer item. ಇದರಿಂದಾಗಿ ವಿಜ್ಞಾನ ಈ ಸೃಷ್ಟಿಯ ರಹಸ್ಯ ತಿಳಿಯುವ ಪ್ರಯತ್ನದಲ್ಲಿ ಮನುಷ್ಯನನ್ನು ಸೃಷ್ಟಿಯಾಚೆ ನಿಲ್ಲಿಸಿ ಅದನ್ನು ಒಂದು ಪ್ರಯೋಗ ವಸ್ತುವಾಗಿ ಬಳಸೋಕೆ ಶುರು ಮಾಡ್ತು ಮೊದಲು ಕುತೂಹಲಕ್ಕೋಸ್ಕರ, ನಂತರ ಮನುಷ್ಯನ ಸುಖಕ್ಕೋಸ್ಕರ. ಆದರೆ ಅಧ್ಯಯನದ ವಸ್ತುವನ್ನು ವಿರೂಪಗೊಳಿಸಿ ಅದರ ಸತ್ವವನ್ನು ತಿಳಿಯುವ ವಿರೋಧಾಭಾಸದ, ಮೂರ್ಖತನದ ಪರಿಣಾಮವಿದು.

ಇದಕ್ಕೆಲ್ಲ ಕುಮ್ಮಕ್ಕು ಈ ಹೊಸ ಧರ್ಮದಲ್ಲೇ ಇತ್ತು. ಅದೇನೆಂದರೆ, ಮನುಷ್ಯ ಹುಟ್ಟಿರೋದೇ ಸುಖಕ್ಕೋಸ್ಕರ ಅಂತ ಅದು ಹೇಳ್ತು. ಸುಖ ಪಡುವುದು ಅವನ ಹಕ್ಕು ಅಂತ. ವಿಜ್ಞಾನ ಬೆಳೆಸಿದ ಒಂದು ಧರ್ಮ ಇದು. ದಯವಿಟ್ಟು ಇದನ್ನು ಯಾವುದೋ ಒಂದು ಧರ್ಮಧ ಆವೃತ್ತಿಯ ಟೀಕೆ ಎಂದು ಭಾವಿಸಬೇಡಿ. ಏಕೆಂದರೆ, ವಿಜ್ಞಾನನ್ವೇಷಣೆಯ ಸುಖಫಲಗಳು ಒಂದಾದರ ಮೇಲೊಂದು ಬರತೊಡಗಿದಂತೆ ಪಶ್ಚಿಮ-ಪೂರ್ವದವು ಎನ್ನದೆ ಎಲ್ಲ ಧರ್ಮಗಳೂ ಈ ಹೊಸ ಧರ್ಮದ ಸ್ಥಳೀಯ ಆವೃತ್ತಿಗಳೇ ಆದವು. ಇದರಿಂದಾಗಿ ಧರ್ಮ ಜ್ಞಾನಾನ್ವೇಷಣೆಯ ಹುರುಪನ್ನೇ ಕಳೆದುಕೊಂಡು ವಿಜ್ಞಾನಕ್ಕೆ ಶರಣಾಯಿತು. ಧರ್ಮ ಹೆಚ್ಚೆಂದರೆ ಹಳೆಯ ಧರ್ಮ ಗ್ರಂಥಗಳ ಪಠಣ, ನಿಮಿತ್ತ ಆಚರಣೆಗಳ ವ್ಯವಹಾರವಾಗಿಹೋಯಿತು. ಧರ್ಮ ರಾಜಕಾರಣವಾದ್ದದರ ಕಾರಣವೂ ಇಲ್ಲಿದ್ದಂತಿದೆ. ಅದರ ವಿವರಣೆ ಇಲ್ಲಿ ಬೇಡ.

ಇದೆಲ್ಲದರ ಒಟ್ಟರ್ಥ ಏನಂದ್ರೆ ಮನುಷ್ಯ ಅಲ್ಲೀವರ್ಗೆ ದೇಹಾತ್ಮವಾಗಿದ್ದ. He was body and spirit. ಅಲ್ಲಿಂದ ಯಾವಾಗ ಮನುಷ್ಯ ಸುಖ ಪಡೋಕೇ ಬಂದಿದ್ದಾನೆ ಅನ್ನೋ ಕಲ್ಪನೆ ಬಂತೋ, ಅಲ್ಲಿಂದ ಕೇವಲ ಅವನು ದೇಹವಾಗಿ ಹೋದ. ದೇಹ ಸುಖವೇ ಮುಖ್ಯವಾಗಿ ಹೋಯ್ತು. ಇದರಿಂದಾಗಿ ದೇಹ

ಸುಖಕ್ಕೋಸ್ಕರ ಅವನು ಅನ್ವೇಷಣೆ ಶುರು ಮಾಡ್ದ. ಸಾಹಸಗಳನ್ನ ಶುರು ಮಾಡ್ದ. ವಿಜ್ಞಾನ ಬೆಳೀತು. ಅದು ತಂತ್ರಜ್ಞಾನವಾಯ್ತು. ಹೊಸ ಹೊಸ ಸುಖದ ವಸ್ತುಗಳು ಬಂದ್ವು. ಮಾರುಕಟ್ಟೆ ಸೃಷ್ಟಿಯಾಯ್ತು. ಬಂಡವಾಳಶಾಹಿ ಬಂತು. ಸುಖದ ಸ್ಪರ್ಧೆ ಶುರುವಾಯ್ತು.. ಇದರಿಂದಾಗಿ ಮನುಷ್ಯನ ಸುಖಕ್ಕೆ ಮಿತಿಯೇ ಇಲ್ಲದಂತಾಗೋಯ್ತು. ಇದು ಸಾಲದು, ಅದು ಸಾಲದು, ಮತ್ತಷ್ಟು ಬೇಕು, ಮಗದಷ್ಟು ಬೇಕು ಎಂಬ ದಾಹ ಹೆಚ್ಚಾಗ್ತಾ ಹೋಯ್ತು. ಯಾಕೇಂದ್ರೆ ನನ್ನ ಆಜನ್ಮ ಸಿದ್ಧ ಹಕ್ಕದು, ಸುಖವಾಗಿರೋದು. ಇದೇ ಇಂದಿನ ನಮ್ಮ ತಣಿಯದ ಸುಖದ ದಾಹದ ರಹಸ್ಯ.

ಇದನ್ನ ನೋಡಿಯೇ, ಕಳೆದ ಶತಮಾನದ ಆರಂಭದಲ್ಲಿ ಮಹಾತ್ಮಾ ಗಾಂಧಿಯವರು ಈ ಆಧುನಿಕ ನಾಗರೀಕತೆ ಏನಿದೆ, ಅಂದ್ರೆ, ಮನುಷ್ಯನನ್ನು ದೇಹ ಮಾತ್ರವಾಗಿಯೇ ನೋಡುವ, ನೋಡಿಕೊಳ್ಳುವ ಅಂದರೆ ಮನಸ್ಸನ್ನು ದೇಹದ ವಿಸ್ತರಣೆ ಮಾತ್ರವೆಂಬಂತೆ ಪರಿಗಣಿಸುವ ನಾಗರೀಕತೆ–ಅಂದ್ರೆ, ಸುಖಪ್ರಧಾನವಾದ ನಾಗರೀಕತೆ– ಇದನ್ನ ಅಧರ್ಮ–ಅನೈತಿಕ ಅಂತ ಕರೆದ್ರು. ಇದು ಮನುಷ್ಯನನ್ನ ಎಲ್ಲಿಗೆ ಕರ್‍ಕೊಂಡು ಹೋಗತ್ತೆ ಅಂದ್ರೆ ಅವನ ಸರ್ವನಾಶಕ್ಕೆ ಕಾರಣ ಆಗತ್ತೆ ಇದು. ಹಿಂಸೆಗೆ ಕಾರಣ ಆಗತ್ತೆ ಇದು. ಯಾಕೇಂದ್ರೆ, ಸುಖದ ಸ್ಪರ್ಧೆಗೆ ಬಿದ್ದಾಗ ಸ್ಪರ್ಧೆಯಲ್ಲಿ ಹಿಂಸೆ ಖಚಿತ. ಈ ಹಿಂಸೆಯಿಂದ ಮನುಷ್ಯ ಮನುಷ್ಯನ್ನ ಮಾತ್ರ ಕೊಲ್ಲೋದಲ್ಲ, ಪ್ರಕೃತಿಯ ಮೇಲೆ ಆಕ್ರಮಣ. ನದಿಯ ಮೇಲೆ, ಬೆಟ್ಟಗಳ ಮೇಲೆ ಆಕ್ರಮಣ, ಇನ್ನೊಬ್ಬರ ಮೇಲಾಕ್ರಮಣ, ದೇಶಗಳ ಮೇಲಾಕ್ರಮಣ. ವಸಾಹತುಶಾಹಿ–Colonialisation, ಒಂದು ದೇಶ ಇನ್ನೊಂದು ದೇಶವನ್ನ ಆಕ್ರಮಿಸಿಕೊಳ್ಳೋ ಒಂದು ಪ್ರವೃತ್ತಿ ಶುರುವಾಗಿದ್ದು ಅದ್ರಿಂದ್ಲೇನೇ. ಯಾಕೇಂದ್ರೆ ಅಲ್ಲಿನ ಪ್ರಾಕೃತಿಕ ಸಂಪತ್ತನ್ನ ಕಾಪಾಡಿಕೊಂಡು ಇನ್ನೊಂದು ದೇಶದ ಪ್ರಾಕೃತಿಕ ಸಂಪತ್ತನ್ನ ಲೂಟಿ ಹೊಡೆಯೋದೇ ಅದಕ್ಕೆ ಕಾರಣವಾಗಿತ್ತು. ಅದಕ್ಕೆ ಗಾಂಧಿ ಹೇಳಿದರು, Technology is an instrument of colonialism. ತಂತ್ರಜ್ಞಾನ ಅಂದ್ರೆ ಮತ್ತೇನೂ ಅಲ್ಲ, ವಸಾಹತುಶಾಹಿಯ ಉಪಕರಣ. ಅಂದ್ರೆ ಇನ್ನೊಂದು ದೇಶವನ್ನು ಆಕ್ರಮಿಸಿಕೊಳ್ಳಕ್ಕೆ ನಾವು ಬಳಸಿಕೊಳ್ಳುವ ಒಂದು ಉಪಕರಣ. ಇನ್ನೊಂದು ದೇಶದ ಮೇಲೆ, ಇನ್ನೊಬ್ಬರ ಮೇಲೆ ಪ್ರಭುತ್ವ ಮಾಡೋದಕ್ಕೆ, ಪ್ರಕೃತಿಯ ಮೇಲೆ ಪ್ರಭುತ್ವ ಮಾಡೋದಕ್ಕೆ ನಾವು ಬಳಸಿಕೊಳ್ಳುವ ಉಪಾಯ, ತಂತ್ರಜ್ಞಾನ ಅನ್ನೋದು. ಹೀಗಾಗಿ ತಂತ್ರಜ್ಞಾನವೇ ಶ್ರೇಷ್ಠ ದೇವರಾಗಿ ಬಿಡ್ತು ನಮಗೆ. ಟೆಕ್ನಾಲಜಿ ಇಂಪ್ರೂವ್ ಮಾಡೋದು ರಾಷ್ಟ್ರಧರ್ಮ ಆಗೋಯ್ತು. ಮೋದಿಯವರಾಗಲಿ ಮನಮೋಹನ್‌ಸಿಂಗ್ ಆಗಲೀ, ರಾಜಕೀಯ ಪಕ್ಷದ ಎಲ್ಲರೂ–ಅವರು ಇವರು ಅಂತ ಇಲ್ಲ, ಪ್ರತಿಯೊಬ್ಬರೂ, ನೆಹರೂವಿನಿಂದ ಹಿಡಿದು ಇವತ್ತಿನವರೆಗೆ–ದೊಡ್ಡ ದೊಡ್ಡ ಅಣೆಕಟ್ಟುಗಳನ್ನು ಕಟ್ಟಿದ್ವಿ, ದೊಡ್ಡ ದೊಡ್ಡ ಫ್ಯಾಕ್ಟರಿಗಳನ್ನು ಕಟ್ಟಿದ್ವಿ, ದೊಡ್ಡ ದೊಡ್ಡ ಸಂಸ್ಥೆಗಳನ್ನು ಕಟ್ಟಿದ್ವಿ. ಯಾಕೆ? ನಾವು ಸುಖವಾಗಿ ಇರಬೇಕು, ನಾವು ವ್ಯವಸ್ಥಿತವಾಗಿ ಇರ್ಬೇಕು ಅಂತ. ಅವರು ಸದುದ್ದೇಶದಿಂದಲೇ ಮಾಡಿದ್ದಾರೆ. ಆ ಸದುದ್ದೇಶದ ಹಿಂದೆ ಈ ವೈಜ್ಞಾನಿಕ, ವೈಚಾರಿಕವಾದ ಮಾದರಿ ಇತ್ತು.

ಆದರೆ ಇದರಿಂದಾಗಿ ಇವತ್ತೇನಾಗಿದೆ ಅಣೆಕಟ್ಟುಗಳು? ನೋಡಿದೀರಲ್ಲ ಇಂದಿನ ಅಣೆಕಟ್ಟುಗಳ ಸ್ಥಿತಿಯನ್ನ. ಅಣೆಕಟ್ಟುಗಳು ನಾಶವಾಗ್ತಾ ಇವೆ. ಅದರ ಕೆಪ್ಯಾಸಿಟಿಗಳು ಕಡಿಮೆ ಆಗ್ತಾ ಇವೆ. ಅದರ ರಿಪೇರಿಗೆ ಅದನ್ನು ಕಟ್ಟಿದ ಖರ್ಚಿನ ಹತ್ತರರಷ್ಟು ಖರ್ಚು ಇವತ್ತು ಆಗ್ತಾ ಇದೆ. ಇದರಿಂದ ಹಸಿರು ಕ್ರಾಂತಿ ಆಯ್ತು ಅಂತೀವಿ. ಏನೋ ನಮ್ಮ ಫಸಲನ್ನ ವೃದ್ಧಿ ಮಾಡಿ ಹೆಚ್ಚುತ್ತಿರುವ ಬಾಯಿಗಳಿಗೆ ಆಹಾರ ಪೂರೈಸಬೇಕು ಅಂತ. ಅದಕ್ಕೆ ಹೊಸ ಹೊಸ ಕ್ರಿಮಿ–ಕೀಟ ನಾಶಕಗಳನ್ನು. ರಸಾಯನಿಕ ಗೊಬ್ಬರಗಳನ್ನು ಕಂಡುಹಿಡಿದ್ವಿ. ಟ್ರ್ಯಾಕ್ಟರ್ ಬಂತು. ಏನಾಯ್ತು? ರೈತರ ಆತ್ಮಹತ್ಯೆ ಜಾಸ್ತಿ ಆಗ್ತಾ ಹೋಯ್ತು. ಜೊತೆಗೆ ಇನ್ನೊಂದು ಭೀಕರ ಸುದ್ದಿ, ಪಂಜಾಬಿನಿಂದ ಜೈಪುರಕ್ಕೆ ಕ್ಯಾನ್ಸರ್ ರೋಗಿಗಳ ರೈಲು ಬಂಡಿ ಹೊರಡುವಂತಾಯಿತು.

ಇವತ್ತು ಫುಕುವೋಕಾರನ್ನ ಓದಬೇಕು ನೀವು. ಫುಕುವೋಕಾ ಒಂದು ದೊಡ್ಡ ಮಾತನ್ನು ಹೇಳುತ್ತಾನೆ. ಆ ಸತ್ಯದ ಆಳಕ್ಕೆ ಹೋದಷ್ಟೂ ಇನ್ನಷ್ಟು ಸತ್ಯ ಕಾಣುತ್ತೆ ನಿಮಗೆ. ಏನು ಅಂತಂದ್ರೆ ಇಡೀ ಜೀವ ಜಗತ್ತಿನಲ್ಲಿ ಬದುಕೋದಕ್ಕೋಸ್ಕರ, ಮನುಷ್ಯ ಮಾತ್ರ ದುಡೀತಾ ಇರೋದು. ಯಾವತ್ತು ಅವನು 'ದುಡಿಮೆ'ಗೆ ಬಿದ್ದನೋ ಅವತ್ತೇ ಅವನು ಸರ್ವನಾಶವಾದ –ಆತ್ಮನ ಸಾತಂತ್ರ್ಯ –ಕಳೆದುಕೊಂಡ ಅಂತ. ದುಡಿಮೆ ಸಹಜವಾಗಿ ಇರಬೇಕಾಗಿದ್ದದ್ದು, ಆಟದ ತರಹ ಆನಂದಕರವಾಗಿರಬೇಕಾಗಿದ್ದಿದ್ದು. ನಮ್ಮ ಜೀವನೋಪಾಯಕ್ಕಾಗಿ ಮಾಡಬೇಕಾಗಿದ್ದದ್ದು. ನಾವು ಜೀವಿಸಲಿಕ್ಕಾಗಿ ಇರಬೇಕಾಗಿದ್ದದ್ದು.. ಅದರ ಬದಲಾಗಿ ನಾವು ದೇಹ ಸುಖದ ಹಿಂದೆ ಬಿದ್ವಿ. ಸುಖದ ಸ್ಪರ್ಧೆಗೆ ಬಿದ್ವಿ. ಮತ್ತಷ್ಟು ಸುಖ, ಮಗದಷ್ಟು ಸುಖ, ಮಿತಿ ಇಲ್ಲದ ಸುಖ. ಇದನ್ನೇ ಗಾಂಧಿ ಹೇಳಿದ್ದು ಭೂಮಿ ಎಲ್ಲರ ಅಗತ್ಯಗಳನ್ನು ಪೂರೈಸಬಲ್ಲುದೇ ಹೊರತು ಎಲ್ಲರ ಆಸೆಗಳನ್ನಲ್ಲ ಅಂತ. ದುರಾಸೆಗಳಲ್ಲ, ಆಸೆಗಳು. ಆಸೆ ಅಂದ್ರೆ, ನಿಮ್ಮ ದೇಹ ಧಾರಣೆಗೆ ನೀವು ಈ ಜಗತ್ತಿನಲ್ಲಿ ನೆರೆಹೊರೆಯ ಮಧ್ಯೆ ಬದುಕುವುದಕ್ಕೆ ಏನು ಬೇಕು ಅವು ಅಗತ್ಯಗಳು. ನಿಮ್ಮ ಶೋಕಿಗೆ, ಮಜಾಕ್ಕೆ, ನಿಮ್ಮ ಚಪಲಗಳಿಗೆ ಇಂಬು ನೀಡುವುವು ಆಸೆಗಳು. ಆದ್ದರಿಂದ ಆಸೆಗಳನ್ನು ಕಂಟ್ರೋಲ್ ಮಾಡದ ಹೊರತು, ನೀವು ಈ ಜಗತ್ತನ್ನು ಉಳಿಸಿಕೊಳ್ಳಲಾರಿರಿ ಅಂತ ಹೇಳಿದರು. ಗಾಂಧಿ 'ಹಿಂದ್ ಸ್ವರಾಜ್'ನಲ್ಲಿ ತಾತ್ಪರ್ಯದಲ್ಲಿ ಹೇಳಿರೋದು ಇದನ್ನೇ.

ಇನ್ನೊಂದು ಸತ್ಯ ಅವರ ಈ ಮಾತಿನ ಹಿಂದೆ ಇತ್ತು. ಅದು ತುಂಬಾ ಮೂಲಭೂತವಾದ, ಕಣ್ಣಿಗೆ ಕಾಣುವ ಸತ್ಯ. ಅದು ಏನೂಂತಂದ್ರೆ, ಭೂಮಿ is a finite thing. ಭೂಮಿ ಅನ್ನೋದಕ್ಕೆ ಒಂದು ಮಿತಿ ಇದೆ. ಅದಕ್ಕೆ ಸುತ್ತಳತೆ ಇದೆ. ಅದಕ್ಕೊಂದು ಅಗಲ ಇದೆ. ಎತ್ತರ ಇದೆ. ಆದ್ದರಿಂದ ಆ ಭೂಮಿ ಮೇಲಿರುವ ನಮಗೂ ಕೂಡ ಒಂದು ಮಿತಿ ಇರಬೇಕು. ಗಾಂಧಿ ಹೇಳಿದ್ದು ಅದನ್ನೇನೆ. ಸದಾ ಏರುತ್ತಾ ಹೋಗುವ ಜೀವನಮಟ್ಟಕ್ಕೆ ಬದಲಾಗಿ ಮಿತಿಗಳುಳ್ಳ ಬದುಕು ನಡೆಸಬೇಕು. ಕೆಲವು ಮಿತಿಗಳನ್ನು ಹಾಕ್ಕೋಬೇಕು ನಾವು. ಸಂಯಮ ಇಟ್ಟುಕೊಳ್ಳಬೇಕು. ಇದು ವಿಜ್ಞಾನ ನಿಜವಾಗಿ ಧರ್ಮವಾಗುವ ಪರಿ. ಧರ್ಮ ರಾಜಕಾರಣವಾಗುವ ಪರಿ. ಅಥವಾ ಅರಿವಿನ ಅಖಂಡತೆ ಕಾಣಿಸಿಕೊಳ್ಳುವ ಪರಿ. ಆದರೆ ಆಧುನಿಕ ವಿಜ್ಞಾನದ ರುಚಿಗೆ ಬಿದ್ದಿರುವ ನಾವು ಇದನ್ನೆಲ್ಲ ವಿಜ್ಞಾನ ಅಂತ ಕರೆಯಲ್ಲ. ಧರ್ಮ ಅಂತ ಕರೆದುಬಿಡ್ತೀವಿ. ನಮ್ಮ ವೇದೋಪನಿಷತ್ತುಗಳು–ನಾನು ಹಿಂದೂ ಧರ್ಮದ ಬಗ್ಗೆ ಹೇಳ್ತಾ ಇಲ್ಲ. ಬೇರೆ ಧರ್ಮಗಳಲ್ಲೂ ಈ ತರದ ಗ್ರಂಥಗಳಿವೆ–ಶ್ರೇಯ ಮತ್ತು ಪ್ರೇಯ ಅನ್ನುವ ಕಲ್ಪನೆಗಳನ್ನು ಕೊಟ್ಟುವ ನಮಗೆ. ಶ್ರೇಯ ಅಂತಂದ್ರೆ ನಿನ್ನ ಒಳಲೋಕದ –ಆತ್ಮದ– ಶ್ರೇಯಸ್ಸು ಅಥವಾ ನಿನ್ನ ಚೈತನ್ಯವನ್ನು ಹಿಗ್ಗಿಸಿಕೊಂಡು ಪಡುವ ಆನಂದ. ಅದು ಜಗತ್ತನ್ನು ನೋಡುವ ಕ್ರಮಕ್ಕೆ ಸಂಬಂಧಿಸಿದ್ದು. ಇನ್ನು ಪ್ರೇಯಸ್ಸು ಅಂತ ಅಂದ್ರೆ ನಿನ್ನ ಲೌಕಿಕ ಯಶಸ್ಸು. ನೀನು ಏನು, ಎಷ್ಟು ಸಂಪಾದನೆ ಮಾಡ್ದೆ, ಎಷ್ಟು ಸುಖಪಟ್ಟೆ, ಇದು. ಮನುಷ್ಯ ಈ ಶ್ರೇಯಸ್ಸು ಮತ್ತು ಪ್ರೇಯಸ್ಸುಗಳ ನಡುವೆ ಸಮತೋಲನ ಸಾಧಿಸಿಕೊಂಡು ಹೋಗಬೇಕು ಅಂತ ಹೇಳುತ್ತೆ ಉಪನಿಷತ್ತು. ಅದನ್ನ ನಾವು ಮರೆತುಬಿಟ್ವಿ. ಇದು ವೈಜ್ಞಾನಿಕ ನಾಗರಿಕತೆ ಮಾಡಿರ್ತಕ್ಕಂಥ ದೊಡ್ಡ ಅನಾಹುತ.

ಅದರಿಂದಾಗಿ ನಾವು ವಿಜ್ಞಾನವೇ ಶ್ರೇಷ್ಠ ಅಂತ ಅಂದುಕೊಂಡ್ಬೋಗಿ, ವೈಜ್ಞಾನಿಕ ನಾಗರಿಕತೆ ಹಿಂದೆ ಬಿದ್ದು ನಾವು, ಈ ಮಿತಿಗಳಿಲ್ಲದ ಸದಾ ಏರುತ್ತಾ ಹೋಗುವ ಜೀವನಮಟ್ಟವೇ ಬದುಕಿನ ಶ್ರೇಷ್ಠಗುಣ ಅಂತ ತಿಳ್ಕೊಂಡು ಇರೋದ್ರಿಂದ ಏನಾಯ್ತು ಅಂದ್ರೆ, ಇಂಥವೆಲ್ಲ ಆಗ್ತಾ ಇವೆ. ನಮ್ಮ ಪರಂಪರೆಯಲ್ಲಿ ಮರಗಳನ್ನ, ಗಿಡಗಳನ್ನ ಭೂಮಿಯನ್ನ ಆಕಾಶವನ್ನ ಪೂಜೆ ಮಾಡ್ತಕ್ಕಂಥ ಒಂದು ಪರಿಪಾಠ ಇತ್ತು. ಅದನ್ನು ನಾವು ಮೌಢ್ಯ ಅಂತ ಕರೆದ್ವಿ. ಅದರ ಫಲವನ್ನು ನಾವು ಇವತ್ತು ವಿಜ್ಞಾನದ ಹೆಸರಿನಲ್ಲಿ ಮಾಡ್ತಕ್ಕಂಥ ಅನಾಹುತಗಳನ್ನ ನೋಡ್ತಾ ಇದೀವಿ. ಈಗ ಇನ್ನೊಂದು ವಾದ ಶುರುವಾಗಿದೆ. ಏನೂಂತಂದ್ರೆ, ಇಲ್ಲ ಇವನ್ನೆಲ್ಲ ಸರಿ ಮಾಡ್ಕೋಬಹುದು, ಸ್ವಲ್ಪ ಕಡಿಮೆ ಮಾಡ್ಕೋ ಬೇಕು ಅಷ್ಟೇ ಅಂತ. ಹಾಗಾದ್ರೆ ಎಷ್ಟು ಕಡಿಮೆ ಮಾಡಿಕೊಳ್ಳಬೇಕು? ಇದು ತರ್ಕ. ಇದು. ನಮ್ಮನ್ನು ಏನೂ ಮಾಡದ ಹಾಗೆ ಬಂಧಿಸುವ ತರ್ಕದ ಸರಪಳಿ. ಒಂದು ಸಾರಿ ಚೈನ್ ಶುರುವಾಯಿತು ಅಂತಂದ್ರೆ ನಿಲ್ಲೋಕೆ ಸಾಧ್ಯನೇ ಇಲ್ಲ. Unless you make up your mind to change the mode and direction of your life. ನಮ್ಮ ಜೀವನ ದೃಷ್ಟಿ ಬದಲಾಗದ ಹೊರತು ಜೀವನ ಶೈಲಿ ಬದಲಾವಣೆ ಆಗುವುದಿಲ್ಲ. ನಮ್ಮ ಭಾರತೀಯ ಅಥವಾ ಪೌರ್ವಾತ್ಯ, ಬೌದ್ಧ ಇರಬಹುದು, ಜೈನ ಇರಬಹುದು, ಟಿಬೇಟಿಯನ್ ಇರಬಹುದು ಅಥವಾ ಚೈನಾದ ತಾವೋ ಧರ್ಮ ಇರಬಹುದು. ಈ ಧರ್ಮಗಳ ಬೇರೆ ಬೇರೆ ರೂಪಗಳೇ ನಮ್ಮ ಏಷ್ಯಾ ಖಂಡದಲ್ಲಿ ಇರತಕ್ಕಂಥಾದ್ದು. ಅಥವಾ ಗಾಂಧಿ 'ಹಿಂದ್ ಸ್ವರಾಜ್'ನಲ್ಲಿ ಹೇಳೋಹಾಗೆ ಯಂತ್ರ ನಾಗರೀಕತೆ ಬರುವವರೆಗೆ ಪಶ್ಚಿಮದಲ್ಲೂ ಇಂತಹುದೇ ಧರ್ಮ, ಜೀವನದೃಷ್ಟಿ ಇದ್ದದ್ದು. ಇವು ಏನ್ ಮಾಡ್ತಾ ಇದ್ವು ಅಂದ್ರೆ, ಮನುಷ್ಯನ ಈ ಜನ್ಮ ಎತ್ತಿ ಬರ್ತಿವಲ್ಲ, ಮಾನವ ಜನ್ಮ ದೊಡ್ಡದು ಎಂದು ಬಿಡ್ತೀವಿ. ಯಾಕೆ ದೊಡ್ಡದು ಅಂತ ಅಂದ್ರೆ, reflective thinking f aculty –ಒಳಮುಖ ಚಿಂತನೆಯ–ನಮ್ಮನ್ನ ನಾವೇ ಪರಿಶೀಲಿಸಿಕೊಳ್ಳುವ ಶಕ್ತಿ ನಮಗೆ ಇದೆ, ಅದನ್ಯಾಕೆ ಬಳಸಿಕೊಳ್ಳಬೇಕು ಅಂತ ಹೇಳ್ತಾ ಇತ್ತು . ಮೊದಲು ನಿನ್ನನ್ನು ನೀನು ಅರ್ಥ ಮಾಡ್ಕೊ. ಯಾರು ನೀನು? ಮನುಷ್ಯ ಅಂದರೆ ಯಾರು? ಇದನ್ನ ತಿಳಿ. ಅದು ತಿಳಿದರೆ ಎಲ್ಲ ತಿಳಿಯುತ್ತೆ. ನಮ್ಮ ಅಲ್ಲಮ ಹೇಳಿದ್ದಾನಲ್ಲ. 'ತನ್ನ ತಾನರಿತರೆ ಅದೇ ಪ್ರಳಯ!! ಇವೊತ್ತು ಮನುಷ್ಯನಲ್ಲಿ ಈ ಅರಿವಿನ ಪ್ರಳಯ ಆಗಬೇಕಿದೆ. ನೈಸರ್ಗಿಕ ಪ್ರಳಯವನ್ನು ತಪ್ಪಿಸಬೇಕಾದರೆ.

**(ಮುಂದಿನ ಸಂಚಿಕೆಗೆ)**

**(ಇದು ಕಳೆದ ಸೆಪ್ಟಂಬರ್ ಹತ್ತರಂದು ಚಾಮರಾಜನಗರದ ದೀನಬಂಧು ಮತ್ತು ಇತರ ಸ್ಥಳೀಯ ಸಂಘ–ಸಂಸ್ಥೆಗಳ ಆಶ್ರಯದಲ್ಲಿ ಪರಿಸರ ವಿಕೋಪಗಳ ಬಗ್ಗೆ ಆಯೋಜಿಸಿದ್ದ 'ಹಸಿರು ಚಾಮರ' ಎಂಬ ಕಾರ್ಯಾಗಾರದಲ್ಲಿ ಆಡಿದ ಮಾತುಗಳ ಬರಹ ರೂಪ)**

(ಧ್ವನಿಯಿಂದ ಲಿಪಿಗೆ : **ರೇಖಾಂಬ ಟಿ.ಎಲ್**).

## ಮಹಿಳಾ ವಿಶೇಷ ಪುಟಗಳು



ಮತ್ತೊಂದು (ಅಂತಾರಾಷ್ಟ್ರೀಯ) ಮಹಿಳಾ ದಿನಾಚರಣೆ (ಮಾರ್ಚ್, ೮ ) ಬಂದಿದೆ. ಇದರ ಪರಿಣಾಮವಾಗಿ ಎಂಬಂತೆ ಮಹಿಳಾ ಜಾಗೃತಿ ಮತ್ತು ಸಬಲೀಕರಣದ ಕಾರ್ಯಕ್ರಮಗಳ, ಆಂದೋಲನಗಳ ಸಂಖ್ಯೆಯೂ ಹೆಚ್ಚಿದೆ. ಆದರೆ ದಿನೇ ದಿನೇ ಮಹಿಳೆಯರ ಸಮಸ್ಯೆಗಳು ಹೆಚ್ಚುತ್ತಲೇ ಹೋಗುತ್ತಿವೆ. ಸಬಲೀಕರಣ ಮತ್ತು ದಮನ–ದೌರ್ಜನ್ಯಗಳು ಜೊತೆಯಲ್ಲೇ ನಡೆದಿವೆ. ಏಕೀ ವಿಪರ್ಯಾಸ? ಮಹಿಳೆಯರ ಸಮಸ್ಯೆಗಳನ್ನು ಕೇವಲ ಮಹಿಳೆಯರ ಸಮಸ್ಯೆಗಳೆಂದು ನೋಡುವ ಹಳೆಯ ಮಾದರಿ ಸ್ತ್ರೀವಾದವೇ ವಿಭಿನ್ನ ರೂಪ–ರೂಹುಗಳಲ್ಲಿ ಚಾಲ್ತಿಯಲ್ಲಿರುವುದೇ ಇದಕ್ಕೆ ಕಾರಣವೇ? ಜಾಗತೀಕರಣದ ಪರಿಣಾಮವಾದ ಭೂಮಿಯ ಮೇಲಿನ ಅತ್ಯಾಚಾರದ ವಿಸ್ತರಣೆಯೇ ಇಂದು ಸ್ತ್ರೀಸಮುದಾಯದ ಮೇಲೆ ಹೆಚ್ಚುತ್ತಿರುವ ಅನಾಚಾರಗಳು ಎಂಬ ವಂದನಾ ಶಿವ ಅವರ ಮಾತನ್ನು ನಾವು ಪೂರ್ಣವಾಗಿ ಅರ್ಥ ಮಾಡಿಕೊಂಡು ಸ್ತ್ರೀ ಜಾಗೃತಿಯ ಆಂದೋಲನವನ್ನು ಸಮಗ್ರವಾಗಿ ಕಟ್ಟಲು ನಾವು ಸೋತಿದ್ದೇವೆಯೇ? ಹೆಣ್ಣೂ ಸೇರಿದಂತೆ ನಮ್ಮ ಸಮಾಜದಲ್ಲಿ ಹೆಣ್ಣುಗುಣ ಮತ್ತು ನೋಟಗಳು ಕಾಣೆಯಾಗುತ್ತಿರುವುದನ್ನು ನಾವು ಎಷ್ಟರ ಮಟ್ಟಿಗೆ ಗಮನಿಸಿದ್ದೇವೆ? ಲಿಂಗ ನಿರ್ಲಿಪ್ತಿಯಲ್ಲಿ ವಿಶ್ಲೇಷಿಸಿದ್ದೇವೆ? ಈ ಪ್ರಶ್ನೆಗಳು ನಮ್ಮನ್ನು ಕಾಡದ ಹೊರತು ಸ್ತ್ರೀ–ಪುರುಷರಿಬ್ಬರಿಗೂ ಮುಕ್ತಿಯಿಲ್ಲ ಎಂಬ ಸತ್ಯ ನಮಗೆ ಮನವರಿಕೆಯಾಗದ ಹೊರತು ಇಂದಿನ ಮಹಿಳಾ ದಿನಾಚರಣೆ ಒಂದು ಔಪಚಾರಿಕತೆಗಿಂತ ಹೆಚ್ಚಿನ ಮಹತ್ವ ಪಡೆಯಲಾರದೆಂದು 'ಹೊಸ ಮನುಷ್ಯ' ಭಾವಿಸಿ ಈ ಮಹಿಳಾ ವಿಶೇಷ ಸಂಚಿಕೆಯನ್ನು ನಿಮ್ಮ ಕೈಗಿಡುತ್ತಿದ್ದೇವೆ.



ಈ ದೃಷ್ಟಿಕೋನದ ಭಾಗವಾಗಿಯೇ, ಜಾಗತೀಕರಣ ನಿರ್ಮಿಸಿರುವ ಒತ್ತಡಗಳ ಪರಿಣಾಮವಾಗಿ ಗಂಡು –ಹೆಣ್ಣಿನ ಸಾಂಪ್ರದಾಯಿಕ ಸಂಬಂಧ ಮೂಲಭೂತ ಬದಲಾವಣೆಗಳಿಗೆ ಒಳಗಾಗಿ ನಮ್ಮ ವಿವಾಹ ಸಂಸ್ಥೆ ಮತ್ತು ಕುಟುಂಬ ವ್ಯವಸ್ಥೆ ಬಿಕ್ಕಟ್ಟಿಗೆ ಸಿಕ್ಕಿದೆಯೇ? ಇದಕ್ಕೆ ಪರಿಹಾರವೇನು ಎಂಬ ಪ್ರಶ್ನೆಯನ್ನು ನಮ್ಮ ಕೆಲ ಪ್ರಾಜ್ಞ ಓದುಗರ ಮುಂದಿಟ್ಟು ಪ್ರತಿಕ್ರಿಯೆಗಳನ್ನು ಪಡೆದಿದ್ದೇವೆ. ಅವು ಇಲ್ಲಿವೆ:

# ನಮ್ಮ ವಿವಾಹ ಸಂಸ್ಥೆ ಬಿಕ್ಕಟ್ಟಿನಲ್ಲಿದೆಯೇ?

### ಮದ್ದಾಗಿ ಬಂದು ಕಾಹಿಲೆಯಾಗಿ ಹಬ್ಬುತ್ತಿದೆ



ಇದು ಇವತ್ತಿನ ಸಂಕೀರ್ಣ ಮತ್ತು ಜಟಿಲ ಪ್ರಶ್ನೆಗಳಲ್ಲೊಂದು. ನಮ್ಮ ಮನಸ್ಸೇ ಒಮ್ಮೆ ಪರವಾಗಿ ಒಮ್ಮೆ ವಿರೋಧವಾಗಿ ಎರಡೂ ಕಡೆ ವಾಲುತ್ತಿದೆ. ವಾಸ್ತವವಾಗಿ, ಅನೇಕ ತೀವ್ರವಾದ ವೈವಾಹಿಕ ಬಿಕ್ಕಟ್ಟುಗಳನ್ನು ಬಲು ಹತ್ತಿರದಿಂದ ನೋಡುತ್ತಾ ಬಂದಿರುವ ನನಗೆ ಒಲ್ಲದ ದಾಂಪತ್ಯವನ್ನು ಒತ್ತಾಯದಿಂದ ಬದುಕುವುದರಲ್ಲಿ ಅರ್ಥವಿಲ್ಲ ಅಂತಲೇ ಅನಿಸುತ್ತದೆ. ಇಂಥಲ್ಲಿ ವಿವಾಹ ವಿಚ್ಛೇದನ ಒಂದು ದೊಡ್ಡ ಪರಿಹಾರವೇ ಸರಿ. ಹೆಣ್ಣಿನ ಮಟ್ಟಿಗೆ ಹೇಳಬೇಕೆಂದರೆ ಹಿಂದಿನಿಂದಲೂ ಅವಳು ವಿದ್ಯೆ, ಆರ್ಥಿಕ ಬಲ, ಆಸ್ತಿಯಲ್ಲಿ ಪಾಲು ಇಲ್ಲದೆ ನರಳಿದವಳು. ಅವೆಲ್ಲ ಅಂದೇ ಅವಳಿಗೆ ದೊರಕಿದ್ದರೆ ವಿವಾಹ ಬಂಧನ ಮತ್ತು ವಿವಾಹ ವಿಚ್ಛೇದನ ಎಂಬುದಕ್ಕೆ ಶ್ಲೋಕಗಳೇ ಬೇರೆಯಾಗುತಿದ್ದವೇನೋ. ಆಗೆಲ್ಲ ಹೆಣ್ಣುಮಕ್ಕಳು ಗಂಡನನ್ನು ಬಿಟ್ಟು ಬಂದರೆ ಬೀದಿಗೆ ಬೀಳುವ ಅಥವಾ ಯಾರದೋ ಮನೆ ಬಿಟ್ಟಿ ಚಾಕರಿಗೆ ಪಕ್ಕಾಗುವ ಗತಿ ಬರುತ್ತಿತ್ತು. ಗಂಡಿಗೆ ಇದುವೇ ಆಯುಧವಾಗಿ ಅವನ ಯಜಮಾನಿಕೆಯೂ ಅನುಗುಣವಾಗಿ ಏರುತ್ತಿತ್ತು. ಅಸಹಾಯಕ ಹೆಣ್ಣಿನ 'ಸಹನೆ'ಯ ದಿನಗಳು ಅವೆಲ್ಲ. ಇದನ್ನು ಸಹನೆ ಎನ್ನುವುದಾದರೆ ಇದು ಯಾವ ಬಗೆಯ ಸಹನೆ ಎನ್ನುತ್ತೀರಿ? ನಿಜ, ಹೇಳಲು ಹೋದಲ್ಲಿ, ಗಂಡಿನ ಬಿಕ್ಕಟ್ಟುಗಳೂ ಹಲವಿವೆ. ಇದೀಗ ವಿವಾಹದ ಚೌಕಟ್ಟಿಗೆ ಸಿಲುಕಿ ಇಡೀ ಜೀವನವನ್ನೇ ಬಲಿ ಕೊಡುತ್ತಿದ್ದ ಕಾಲ ಸಾವಕಾಶವಾಗಿ ದಾಟುತ್ತಿದೆ. ಮುಂಚಿನಂತಿಲ್ಲ ಕಾಲ, ಸೂಕ್ಷ್ಮವಾಗಿದೆ; ದೌರ್ಜನ್ಯಗಳ ಕುರಿತು ಗಂಡಿಗೂ ಹೆಣ್ಣಿಗೂ ಎಚ್ಚರ ಬರುತ್ತಿದೆ. ಅದರಿಂದಾಗಿ ವಿಚ್ಛೇದನ ಎಂಬುದು ಮದ್ದೂ ಹೌದು, ಬಿಡುಗಡೆಯೂ ಹೌದಾಗಿ ಅವರವರ ನಿರ್ಧಾರಕ್ಕೆ ತೆರೆದುಕೊಂಡಿದೆ. ಹೊಂದಾಣಿಕೆಗೆ ಯತ್ನಿಸಿದಷ್ಟೂ ತಾಳ ತಪ್ಪುತ್ತಲೇ ಹೋದರೆ? ಎಲ್ಲ ಸಾಧ್ಯತೆಗಳ ಮಿತಿ ಮೀರಿ ಹೋದರೆ, ತಮ್ಮೊಳಗಿನ ವ್ಯಕ್ತಿತ್ವಕ್ಕೆ ನಿರಂತರ ಹೊಡೆತ ಬೀಳುತ್ತಿದೆ, ಆತ್ಮವೇ ಹನನವಾಗುತ್ತಿದೆ ಅಂತಾದರೆ ಹೊರಬಂದು ಇಬ್ಬರೂ ಮುಕ್ತರಾಗಲಿ, ಬಿಡಿ. ಅದನ್ನು ಆಧುನಿಕತೆ ನೀಡಿದ ವರ ಎನ್ನೋಣ. ಒಂದಂತೂ ಸತ್ಯಸ್ಯ ಸತ್ಯ. ತಮ್ಮ ದಾಂಪತ್ಯವನ್ನು ಸುಖಾಸುಮ್ಮನೆ ಬಲಿಕೊಡಲು ಗಂಡಾಗಲೀ ಹೆಣ್ಣಾಗಲೀ ಆಂತರ್ಯದಲ್ಲಿ ಸುತರಾಂ ಸಿದ್ಧರಿರುವುದಿಲ್ಲ.

ಆದರೆ ಮದ್ದಾಗಿ ಬಂದ ಬಿಡುಗಡೆಯೆಂಬಂತೆ ಬಂದ ವಿಚ್ಛೇದನ ಈಗ ಕಾಹಿಲೆಯಾಗಿ ರೂಪಾಂತರಗೊಳ್ಳುತ್ತಿದೆ. ಈಗೀಗ ಈ ಕಾಹಿಲೆ ಉಲ್ಬಣಿಸುತ್ತಿದೆ. ಇದು ನಿಜಕ್ಕೂ ಶೋಚನೀಯ. ಹೊಂದಾಣಿಕೆ ಮತ್ತು ಪ್ರೀತಿಗೆ ಇಬ್ಬರೂ ತಂತಮ್ಮ ಅಹಂಕಾರವನ್ನು ತಗ್ಗಿಸಿ ಸಹನೆಯಿಂದ ಕಾಯಬೇಕು. ಕಾಯಲಿಕ್ಕೆ ಸಿದ್ಧವೇ ಇಲ್ಲದ, ತಾಳ್ಮೆಯ ಹೆಸರೇ ಒಲ್ಲದ, ಬಿಟ್ಟು ಹೋಗಲು ಸಶಕ್ತ ಕಾರಣಗಳೇ ಇಲ್ಲದ ಜೋಡಿಗಳು ಹೆಚ್ಚಾಗುತ್ತಿವೆ. ಇಂಥ ದಂಪತಿಗಳು ಹಾಗೂ 'ಲಿವಿಂಗ್ ಟುಗೆದರ್' ಆಯ್ದುಕೊಂಡೂ ಒಬ್ಬರಿಗೊಬ್ಬರು ಪರಕೀಯರೆಂಬಂತೆ ಸದಾ ಸಿಡಿದುಕೊಂಡೇ ಇರುವವರು ಮಾತ್ರ ಸಮಾಜಕ್ಕೆ ಶಾಪ.

**– ವೈದೇಹಿ, ಹಿರಿಯ ಲೇಖಕಿ, ಮಣಿಪಾಲ**

### ಸ್ವಾತಂತ್ರ್ಯ, ಅರಿವು ಮತ್ತು ಅಹಂ



ಇತ್ತೀಚಿನ ದಿನಗಳಲ್ಲಿ ಜಗತ್ತಿನ ಎಲ್ಲ ದೇಶಗಳಲ್ಲಿ ಜಾಗತೀಕರಣ ಒಂದು ಮಹತ್ತರ ಬದಲಾವಣೆಯನ್ನು ತಂದಿತು. ಜಾಗತೀಕರಣದ ಫಲವಾಗಿ ಬಹುರಾಷ್ಟ್ರೀಯ ಕಂಪನಿಗಳು ನಮ್ಮಲ್ಲಿಗೆ ಕಾಲಿಟ್ಟವು. ಅವರ ಅಗತ್ಯಕ್ಕೆ ತಕ್ಕಂತೆ ನಮ್ಮ ವಿದ್ಯಾಭ್ಯಾಸವೂ ಪೂರಕವಾಯ್ತು. ಇದರಿಂದ ಹೆಚ್ಚಿದ ಉದ್ಯೋಗಾವಕಾಶಗಳಿಂದ ನಮ್ಮ ಯುವ ಜನತೆ ಪಟ್ಟಣಗಳಿಗೆ ಬರತೊಡಗಿದರು. ಉದ್ಯೋಗ, ಕೈ ತುಂಬ ಹಣ, ಪರಿಮಿತ ಸ್ವಾತಂತ್ರ್ಯದಿಂದ ಬಿಡುಗಡೆ ಇವೆಲ್ಲಾ ಜೀವನ ಮಟ್ಟವನ್ನು ಸುಧಾರಿಸದರೂ ಅನಿವಾರ್ಯವಾಗಿ ಹಲವು ಸಮಸ್ಯೆಗಳು ಹುಟ್ಟಿಕೊಂಡವು.

ಜಾಗತೀಕರಣ ಆರ್ಥಿಕ ಸ್ವಾತಂತ್ರ್ಯವನ್ನು ತಂದಂತೆಯೇ ನಮ್ಮ ಸಾಂಸ್ಕೃತಿಕ ಕೌಟುಂಬಿಕ ಬೇರುಗಳನ್ನು ನಾಶಪಡಿಸಿದೆ. ಜಾಗತೀಕರಣದಿಂದ ಬಂದ ಆರ್ಥಿಕ ಸ್ವಾತಂತ್ರ್ಯ ವರವಾದರೆ, ಕೌಟುಂಬಿಕ ಹಾಗೂ ಸಾಂಸ್ಕೃತಿಕ ನೆಲೆಯಲ್ಲಿ ಶಾಪವಾಗಿ ಪರಿಣಮಿಸಿದೆ. ಅಪರಿಮಿತವಾಗಿ ದುಡಿಯಬೇಕಾಗಿದ್ದರೂ ಕಿರಿಯ ಪೀಳಿಗೆ ದೊಡ್ಡವರ ಹಿಡಿತದಿಂದ ಪಾರಾದರೂ ಮುಕ್ತ ಒಡನಾಟ ಮತ್ತು ಇತರ ಕಾರಣಗಳಿಂದ ತಮ್ಮನ್ನು ತಾವು ನಿಯಂತ್ರಿಸಿಕೊಳ್ಳದಾಗಿದ್ದಾರೆ. ಇಂದಿನ ಕಿರಿಯರಿಗೆ ಹಣ ತರುವ ಉದ್ಯೋಗದ ಒತ್ತಡಗಳು ಸಮಾಧಾನದ ಸಾಂಸಾರಿಕ ಒಡನಾಟಕ್ಕೆ ಮುಳುವಾಗಿದೆ. ಅದರಿಂದ ಇಂದಿನ ಕಿರಿಯ ಹೆಣ್ಣು, ಗಂಡುಗಳು ವೈವಾಹಿಕ ಜೀವನ ನಡೆಸಲು ಬೇಕಾದ ಸಮಯದ ಅಭಾವ, ಪರಸ್ಪರ ವಿಶ್ವಾಸ, ತಾಳ್ಮೆಗಳ ಕೊರತೆ, ಮಾನಸಿಕ ಒತ್ತಡ ಹಾಗೂ ಅನುಮಾನಿಸುವ ಪ್ರವೃತ್ತಿಗಳಿಂದ ಕೆಲವರಿಗೆ ವಿವಾಹ ಬೋರಾಗಿರಬಹುದು. ಆರ್ಥಿಕತೆ ಹೆಚ್ಚಾದಂತೆ ಕೌಟುಂಬಿಕ ಜೀವನ ಬಡವಾದಂತೆ ಕಾಣಿಸುತ್ತದೆ. ಜಾಗತೀಕರಣಕ್ಕೆ ಒಳಗಾದ ಹೆಣ್ಣಿಗೆ ವಿವಾಹ ಬಂಧನದಂತೆಯೂ ಕಾಣಿಸಬಹುದು. ಆರ್ಥಿಕ ಕಾರಣಗಳಿಂದ "ಲಿವಿಂಗ್ ಟು ಗೆದರ್" ವ್ಯವಸ್ಥೆ ಹುಟ್ಟಿಕೊಂಡಿರಬಹುದು. ಆರ್ಥಿಕ ಸ್ವಾತಂತ್ರ್ಯ, ಒಬ್ಬರನ್ನೊಬ್ಬರು ಅರಿತುಕೊಳ್ಳದ "ಅಹಂ" ವಿಚ್ಛೇದನಗಳಿಗೆ ಕಾರಣವಾಗಿರಬಹುದು. ಮಹಿಳಾ ವಿಚ್ಛೇದನಕ್ಕೆ ಮಹಿಳಾ ಜಾಗೃತಿ ಹಾಗೂ ವ್ಯಕ್ತಿಗತ ವೈಲಕ್ಷ್ಯಣಗಳು, ಕೆಲವು ಸಲ ಗಂಡ–ಹೆಂಡಿರ ಬದುಕಿನಲ್ಲಿ ಪರಸ್ಪರ ಅಸಹನೀಯತೆ ಸಹ ಕಾರಣವಾಗಿರುತ್ತದೆ ಎಂದೆನ್ನಿಸುತ್ತದೆ.

**–ಪದ್ಮಾ ಶ್ರೀರಾಮ್, ಚಿಂತಕಿ, ಮೈಸೂರು**

## ಹೆಣ್ಣಿನ ಸ್ವಯಂನಿರ್ಧಾರದ ದಿನಗಳಿವು



**ಮ**ನು ಎಂಬ ಮಹಾಶಯ ಯಾವಾಗ ನಮ್ಮ ಭರತ ಖಂಡದಲ್ಲಿ ಉದಿಸಿದನೋ, ಅಲ್ಲಿಯವರೆಗೆ ಜೊತೆ ಜೊತೆಯಲ್ಲೇ ಸಾಗಿದ್ದ ಪುರುಷ ಮಹಿಳೆಯನ್ನು ಹಿಂದಕ್ಕೆ ಸರಿಸಿಯಾಗಿತ್ತು. ಯಜಮಾನಿಕೆಯ ದೊಣ್ಣೆ ಆತನ ಕೈಯಲ್ಲಾಗಲೇ ಬಂದಿತ್ತು. ಅಂದಿನ ಸಂಪ್ರದಾಯವನ್ನು ಗಟ್ಟಿಯಾಗಿ ದಾಖಲಿಸಿ ಅದಕ್ಕೊಂದು ಶಾಸ್ತ್ರದ ರೂಪ ಕೊಟ್ಟವನು ಮನು. ಇಂದಿಗೂ ಅದನ್ನೇ ಸಂವಿಧಾನ ಎಂದು ನಂಬುವವರನ್ನು ನಾವು ಕಾಣುತ್ತೇವೆ.

ಮಹಿಳೆಯು ಪುರುಷನ ಅಡಿಯಾಳು ಎಂಬುದನ್ನು ಬಹಳ ಗಟ್ಟಿಯಾಗಿ ಸ್ಥಿರೀಕರಿಸಿದ್ದೇ ಮದುವೆ ಎಂಬ ಸಾಂಸ್ಥಿಕ ರಚನೆ. ಮನೆ, ಕುಟುಂಬ, ಆಸ್ತಿ, ಕಾಳು ಹಾಗೆಯೇ ಹೆಂಡತಿ ಎಲ್ಲದಕ್ಕೂ ಅವನು ಯಜಮಾನನಾದ. ಅಲ್ಲಿಂದ ಮುಂದುವರೆದ ಪುರುಷ ಯಜಮಾನಿಕೆ ಬೆಳೆಯುತ್ತಲೆ ಹೋಯಿತು, ಆಳವಾಗುತ್ತಲೆ ಹೋಯಿತು, ಪುರುಷ ಪ್ರಧಾನ ಮೌಲ್ಯ ಅದೆಷ್ಟು ಆವರಿಸಿಕೊಂಡಿತೆಂದರೆ, ಮದುವೆಗೆ ಹೆಣ್ಣನ್ನು ಖರೀದಿಸುವ ವಸ್ತುವೆಂಬಂತೆ ನೋಡುವುದು, ಮದುವೆಯಲ್ಲಿ ಗಂಡಿನ ಪಾದ ತೊಳೆಯುವ ವರೋಪಚಾರ-ತಾಳಿ ಕಟ್ಟುವಂಥ ಸಂಪ್ರದಾಯಗಳು, ಮುತ್ತೈದೆ ಎಂದು ಕರಿಮಣಿ, ಕಾಲುಂಗುರ ಬಳೆ, ಕುಂಕುಮ ಎಲ್ಲವನ್ನೂ ಕಡ್ಡಾಯವಾಗಿಸುವುದು. ಗಂಡ ಸತ್ತ ಮಹಿಳೆ ಎಲ್ಲವನ್ನೂ ತೆಗೆದು ತಲೆಯನ್ನೂ ಬೋಳಿಸಿ ವಿರೂಪಗೊಳಿಸುವುದು, ಅವಳಿಗೆ ಇನ್ನೊಂದು ಮದುವೆ ಆಗದಂತೆ ಇನ್ನೊಬ್ಬ ಪುರುಷನ ಸಹವಾಸ ಮಾಡದಂತೆ ನಿರ್ಬಂಧ, ವರದಕ್ಷಿಣೆ, ವರದಕ್ಷಿಣೆ ಕೊಡದಿದ್ದರೆ, ಕೊಟ್ಟಿದ್ದು ಕಡಿಮೆಯಾದರೆ ಹಿಂಸೆ, ಕಿರುಕುಳ, ಕಡೆಗೆ ಜೀವಂತ ಸುಟ್ಟು ಹಾಕುವ ಕ್ರಮಗಳು. .ಒಂದೇ ಎರಡೇ? ಮದುವೆಯೆಂಬ ಸಾಮಾಜಿಕ ಸಂಸ್ಥೆ ಮಹಿಳೆಗೆ ಎಂದೂ ಸಮಾನತೆಯನ್ನೂ ಕೊಡಲಿಲ್ಲ, ಸುರಕ್ಷತೆಯನ್ನಂತೂ ಕೇಳಲೇಬೇಡಿ.

ಇಂದು ಒಂದು ವರ್ಗದ ಹೆಣ್ಣುಮಕ್ಕಳಿಗೆ ಶಿಕ್ಷಣ ಕೈಗೆಟಕುತ್ತಿದೆ. ಹೊಸಲಿನಿಂದಾಚೆ ಬಂದು ಹೊರಜಗತ್ತನ್ನವಳು ನೋಡುತ್ತಿದ್ದಾಳೆ. ತನ್ನ ಬಗ್ಗೆ, ತನ್ನ ಮೇಲಾಗುತ್ತಿರುವ ದೌರ್ಜನ್ಯದ ಬಗ್ಗೆ ಅರಿತುಕೊಳ್ಳುತ್ತಿದ್ದಾಳೆ. ತಾನೇಕೆ ಕೀಳು, ತನಗೆ ಸಮಾನತೆ ಇಲ್ಲವೇಕೆ ಎಂಬ ಪ್ರಶ್ನೆಗಳು ಅವಳಲ್ಲಿ ಮೂಡುತ್ತಿವೆ. ವರದಕ್ಷಿಣೆ ಕೇಳುವವ ತನಗೆ ಬೇಡ ಎನ್ನುತ್ತಿದ್ದಾಳೆ. ಹಿಂಸೆ ಕೊಡುವ ಕುಟುಂಬದಿಂದ ಹೊರಬರುತ್ತಿರುವವಳನ್ನು ಬೆರಗಿನಿಂದ ನೋಡುತ್ತಿದ್ದಾಳೆ. ಅವಳ ಧೈರ್ಯದ ಬಗ್ಗೆ ಮೆಚ್ಚುಗೆಯೂ ಆಗುತ್ತಿದೆ. ಮದುವೆಯೆಂಬ ಸಂಸ್ಥೆಯಲ್ಲಿ ಇಷ್ಟೊಂದು ಶೋಷಣೆ ಇದೆಯೆಂದಾದರೆ ತಾನೇಕೆ ಅದಕ್ಕೆ ಕೊರಳೊಡ್ಡಬೇಕು ಎಂದು ತನ್ನಲ್ಲೇ ತಾನು ನಿರ್ಧಾರ ಮಾಡುತ್ತಿದ್ದಾಳೆ. ಅಷ್ಟೇ.

**-ಶಾರದಾ ಗೋಪಾಲ,** ಸಾಮಾಜಿಕ ಕಾರ್ಯಕರ್ತೆ, ಧಾರವಾಡ

## ಮದುವೆ ಮುರಿಯದಿರಿ



**ಮಾ**ನವನ ವಿಕಾಸ ಪಥದಲ್ಲಿ "ಮದುವೆ" ಮತ್ತು "ಕುಟುಂಬ" ವ್ಯವಸ್ಥೆ ರೂಪಗೊಂಡದ್ದು ಅತ್ಯಂತ ಮಹತ್ವದ ಹೆಜ್ಜೆ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ. ಈ ದಶಕದಲ್ಲಿ ಈ ವ್ಯವಸ್ಥೆ ತೀವ್ರವಾಗಿ ಹದಗೆಡುತ್ತಿರುವುದು ನಿಜಕ್ಕೂ ಆತಂಕಕಾರಿಯಾಗಿದೆ.

ಒಂದು 'ಮದುವೆ' ಯಶಸ್ವಿಯಾಗಬೇಕಾದರೆ, ಒಂದು ಕುಟುಂಬ ಶಾಂತಿ -ನೆಮ್ಮದಿಯಿಂದ ಇರಬೇಕಾದರೆ 'ಹೊಂದಾಣಿಕೆ' ಅತಿ ಮುಖ್ಯ ನಮ್ಮ-ನಮ್ಮ ಸ್ವಪ್ರತಿಷ್ಠೆ ಬಿಟ್ಟು ಬಾಳದಿದ್ದರೆ ದಾಂಪತ್ಯ ವಿಫಲವಾಗುತ್ತದೆ. ನಮ್ಮ ಹಿರಿಯರ ಸಂಸಾರ ನೋಡಿದರೆ ಅವಿಭಕ್ತ ಕುಟುಂಬದಲ್ಲಿ ತ್ಯಾಗ, ಸಂಯಮ ಮುಂತಾದ ಮಾನವೀಯ ಮೌಲ್ಯಗಳ ತಳಹದಿಯ ಮೇಲೆಯೇ ಜೀವನ ಸಾಗುತ್ತಿದ್ದುದು ಕಾಣುತ್ತದೆ. ಆದರೆ ಇತ್ತೀಚಿನ ದಿನಗಳಲ್ಲಿ ತ್ಯಾಗ, ಸಂಯಮ, ನಿಷ್ಠೆ, ನಂಬಿಕೆ ಮುಂತಾದವು ಅರ್ಥ ಕಳೆದುಕೊಂಡು, 'ನಾನು' ಎಂಬ ಅಹಂಕಾರ ಪ್ರವೃತ್ತಿಯೇ ವಿಜೃಂಭಿಸುತ್ತದೆ.

ನಾಲ್ಕಾರು ದಶಕಗಳ ಹಿಂದೆ, ನಾವು ಓದುವಾಗ ತಂದೆ ಕುಟುಂಬದ ಯಜಮಾನನಾಗಿದ್ದ. ಈಗ ಹೆಣ್ಣು, ಗಂಡಿಗೆ ಸಮನಾಗಿ ಓದಿರುತ್ತಾಳೆ. ಗಂಡಿಗೆ ಸಮನಾಗಿ ದುಡಿಯುತ್ತಿದ್ದಾಳೆ. ಹಾಗಾಗಿ ಯಾರು-ಯಾರಿಗೂ ಯಜಮಾನರಾಗಿ ಉಳಿದಿಲ್ಲ. ಏನಿದ್ದರೂ ಪರಸ್ಪರ ವಿಶ್ವಾಸ, ಗೌರವ, ನಿಷ್ಠೆ ಇದ್ದರೆ ಮಾತ್ರ ಸಂಸಾರ ಸಾಧ್ಯ. ಯಾವುದೇ ಕಾಲದಲ್ಲಾದರೂ, ಗಂಡಿಗಾಗಲಿ, ಹೆಣ್ಣಿಗಾಗಲಿ ಭದ್ರತೆ, ಶಾಂತಿ, ನೆಮ್ಮದಿ ಬೇಕೇ ಬೇಕು. ಜೊತೆಗೆ ಮದುವೆ ಅಥವಾ ಕುಟುಂಬ ಹಲವು ರೀತಿಯ ಸೌಕರ್ಯಗಳನ್ನು ಒದಗಿಸುತ್ತದೆ. ವೃದ್ಧಾಪ್ಯದಲ್ಲಿ, ಜೀವನ ಸಂಗಾತಿಗಳಲ್ಲಿ ಯಾರೇ ರೋಗಿಗಳಾದರೆ, ಅಸಹಾಯಕರಾದರೆ ಪ್ರೀತಿಯ ದಾಂಪತ್ಯ ನೀಡುವ ಆಧಾರ ಬೇರೆಯವರು ನೀಡಲಾರರು.

ಒಂದು ಸಮಾಜದ 'ಭವಿಷ್ಯ'ವಾದ ಮಕ್ಕಳು ಎಲ್ಲ ರೀತಿಯಿಂದಲೂ ಆರೋಗ್ಯಕರವಾಗಿ ಬೆಳೆಯಲು ಕುಟುಂಬ ಮಹತ್ವದ ಪಾತ್ರ ವಹಿಸುತ್ತದೆ. "ಗಂಡ - ಹೆಂಡಿರ ಜಗಳದಲ್ಲಿ ಕೂಸು ಬಡವಾಯ್ತು" ಎಂಬ ಗಾದೆ ಅನುಭವ ಜನ್ಯವಾದದ್ದು. ವಿರಸ ದಾಂಪತ್ಯದಲ್ಲಿ ಹೆಚ್ಚು ನರಳುವವರು ಮಕ್ಕಳು. ಒಂದು ಉತ್ತಮ ಸಮಾಜ ನಿರ್ಮಾಣವಾಗಲು ಸ್ವಸ್ಥ ಕುಟುಂಬಗಳು ಇರಲೇಬೇಕು. ಆ ದೃಷ್ಟಿಯಿಂದಲಾದರೂ ನಮ್ಮ ಯುವಜನತೆ ಕುಟುಂಬ ಉಳಿಸಿಕೊಳ್ಳುವ ಬಗ್ಗೆ ಚಿಂತಿಸಬೇಕು. ಹಿರಿಯರು ಸರಿಯಾದ ಮಾರ್ಗದರ್ಶನ ಮಾಡಬೇಕು.

ಗಡಿಬಿಡಿಯಲ್ಲಿ ಮದುವೆಯಾಗಿ ಅಥವಾ ಯಾವುದೋ ಮೋಹಾವೇಶದಲ್ಲಿ 'ಲಿವಿಂಗ್ ಟುಗೆದರ್' ಸಂಬಂಧ ಬೆಳೆಸಿ, ಪಶ್ಚಾತ್ತಾಪ ಪಡುವುದಕ್ಕಿಂತ, ನಿಧಾನವಾಗಿ ನಿರ್ಧರಿಸಿ, ಮನೋಧರ್ಮ ಹೊಂದುವವರ ಜೊತೆ ಮದುವೆ ಎಂಬ ಪವಿತ್ರ ಸಂಬಂಧ ಬೆಳೆಸಬೇಕು. ಸ್ವಾತಂತ್ರ್ಯ ಸ್ವೇಚ್ಛೆಯಲ್ಲ ಎಂಬುದನ್ನು ಎಲ್ಲರೂ ತಿಳಿದುಕೊಳ್ಳಬೇಕು.

**-ವಿಜಯಾ ಶ್ರೀಧರ್,** ಲೇಖಕಿ, ಶಿವಮೊಗ್ಗ

## ಬದಲಾಗಬೇಕಿದೆ; ಅನಾದಿಯ ಹಾದಿ



**ಜಾ**ಗತೀಕರಣವು ಆಧುನಿಕತೆಯ ಮುಂದುವರಿಕೆಯಂತೆ ಕಾಣುತ್ತಿದೆಯಾದರೂ ವಾಸ್ತವದಲ್ಲಿ ಅದು ಆಧುನಿಕತೆಗೆ ತದ್ವಿರುದ್ಧವಾದ ಪರಿಣಾಮವನ್ನು ಉಂಟುಮಾಡುತ್ತಿದೆ. ಭಾರತೀಯ ಸಮಾಜ ರಚನೆಯ ಆದರ್ಶ ಎಂದು ಕರೆಯಲಾದ ಕುಟುಂಬ ವ್ಯವಸ್ಥೆ ಮತ್ತು ಅದರ ಬೆನ್ನೆಲುಬಾದ ದಾಂಪತ್ಯದ ಅಡಿಪಾಯವೇ ಅಸಮಾನತೆಯದಾಗಿತ್ತು. ಸಮಾನತೆಯ ಆದರ್ಶವು ಆಧುನಿಕ ಸಮಾಜವು ಎಂದೂ ರೂಢಿಗೆ ತರದ ಪವಿತ್ರ ಕನಸಿನಂತಿತ್ತು. ಆಧುನಿಕ ಸಮಾಜದಲ್ಲಿ ಮಹಿಳೆ ಪಡೆದ ಶಿಕ್ಷಣ-ಉದ್ಯೋಗಾವಕಾಶಗಳು, ಸಾಂಪ್ರದಾಯಿಕವಾಗಿ ಅವಳು ನಿರ್ವಹಿಸುತ್ತಿದ್ದ ಸತೀತ್ವ ಮತ್ತು ತಾಯ್ತನದ ಚಹರೆಯನ್ನು ಇನ್ನಷ್ಟು ಗಟ್ಟಿಗೊಳಿಸಿದವು. ಸಾಲಂಕೃತಗೊಳಿಸಿದವು. ದಾಂಪತ್ಯವು ನಿಭಾಯಿಸಲೇಬೇಕಾದ ಸಂಗತಿಯಾಗಿಯೇ ಮುನ್ನಡೆಯಿತು. 'ಭಾರತದಲ್ಲಿ ವಿಚ್ಛೇದಿತ ದಾಂಪತ್ಯ ವ್ಯವಸ್ಥೆಯಿದೆ' ಎಂಬ ವ್ಯಂಗ್ಯವೂ ಮುಂದುವರೆಯಿತು.

ಜಾಗತೀಕರಣ ಕಾಲಮಾನವು ಶಿಕ್ಷಣ-ಉದ್ಯೋಗದ ಪರಿಸ್ಥಿತಿಯನ್ನು ಆಮೂಲಾಗ್ರವಾಗಿ ಬದಲಿಸಿತು. ಉದ್ಯೋಗವು ಭದ್ರತೆಯಾಗುಳಿಯಲಿಲ್ಲ. ನಿರಂತರ ಸ್ಪರ್ಧೆಯಾಯ್ತು. ಈ ಸ್ಥಿತಿಯು, ಮಹಿಳೆಗೆ ಸಾಂಪ್ರದಾಯಿಕ ದಾಂಪತ್ಯ ಧರ್ಮವನ್ನು ನಿಭಾಯಿಸಲಾಗದ ಸಂಕಷ್ಟವನ್ನು ತಂದಿಟ್ಟಿದೆ. ಸ್ವವ್ಯಕ್ತಿತ್ವ ನಿರ್ಮಿತಿಯ ಪ್ರಜ್ಞೆಯೂ ಜಾಗೃತವಾಗಿದೆ. ಬದಲಾಗಿರುವ ಸಾಮಾಜಿಕ-ಆರ್ಥಿಕ ಪರಿಸ್ಥಿತಿಯಲ್ಲಿ, ಬದಲಾಗದಿರುವ ಕೌಟುಂಬಿಕ ಮೌಲ್ಯಗಳೊಂದಿಗೆ ಸೆಣಸಲಾಗದ ಆತಂಕದಲ್ಲಿ ಕುಟುಂಬ ವಿಮುಖತೆ ಬೆಳೆಯುತ್ತಿದೆ. ಬಂಡವಾಳವಾದವು ತನ್ನ ಹಿತಕ್ಕಾಗಿ, ಮಹಿಳೆಯ ಸಂಗೋಪನಾ ಚಹರೆಯನ್ನು ಮತ್ತು ಸಾಧನೆಯ ವ್ಯಕ್ತಿತ್ವದ ಚಹರೆಯನ್ನು ಒಟ್ಟಿಗೇ ಚಲಾವಣೆಗೆ ತಂದಿದೆ. ಸತತವಾಗಿ ಪೋಷಿಸುತ್ತಿದೆ. ಮನರಂಜನಾ ಮಾಧ್ಯಮಗಳಲ್ಲಿ ಜಾಹೀರಾತುಗಳಲ್ಲಿ ಅಚ್ಚೊತ್ತಿರುವುದು ಹೆಣ್ಣಿನ ಈ ಇಮ್ಮುಖತೆಯೇ. ಆದರೆ ಇದನ್ನು ವಾಸ್ತವದಲ್ಲಿ ಬದುಕುವುದು ಕಷ್ಟಸಾಧ್ಯವಾಗುತ್ತಿದೆ. ಯಾಕೆಂದರೆ, ಪಿತೃ ಪ್ರಾಧಾನ್ಯತೆಯ ಉಸಿರಲ್ಲಿ ಬೆಳೆದ ಕುಟುಂಬ ವ್ಯವಸ್ಥೆಯು ತನ್ನನ್ನು ಬದಲಿಸಿಕೊಳ್ಳಲು ಸಿದ್ಧವಾಗುತ್ತಿಲ್ಲ. ಈ ವಿಘಟನೆ ಬಲುದೀರ್ಘಕಾಲ ಸಾಮಾಜಿಕ ಸ್ಥಿತಿಯನ್ನು ವಿಷಮಗೊಳಿಸಬಲ್ಲದು.

ಈಗ ತುರ್ತಾಗಿ ನಡೆಯಬೇಕಿರುವುದು- ದಾಂಪತ್ಯ ವ್ಯವಸ್ಥೆಯ ಮರುನಿರ್ವಚನ. ಹಳೆಯ ಗೆದ್ದಲಿಗೆ ಸುಣ್ಣ ಬಳಿದು, ದಾಂಪತ್ಯ ಸಖ್ಯದ ಜೀವತ್ರಾಣವು ಹೊಸ ಚಿಗುರು ಪಡೆಯುವುದಕ್ಕೆ ಸಿದ್ಧತೆ. ಮನುಷ್ಯ ಸಂಬಂಧದಲ್ಲಿಯೇ ಅದ್ವಿತೀಯ ಭಾವನಾತ್ಮಕ ಭರವಸೆಯನ್ನು ದಾಂಪತ್ಯ ನೀಡಬಲ್ಲದೆಂಬುದನ್ನು ಯುವ ಮನಸ್ಸುಗಳಿಗೆ ಅರಿವಾಗಿಸಬೇಕಿದೆ. 'ಒಂದು ಹೆಣ್ಣಿಗೊಂದು ಗಂಡು ಸೇರಿ ಬಾಳುವ ಪರಿಯಲ್ಲಿಯೇ ದುಃಖ ಹಗುರಾವೆನಿಸುವ ಮಂತ್ರವಿರುವುದನ್ನು'- ಮುಂದಿನ ತಲೆಮಾರಿಗೆ ಮನನಗೊಳಿಸಬೇಕು. ದಾಂಪತ್ಯವು ಧರ್ಮ-ಜಾತಿ-ವರ್ಗಗಳ ವ್ಯವಹಾರದ ಮಟ್ಟದಿಂದ, ಜೀವ ಜೀವಗಳ ಆಶಯ-ಆದ್ಯತೆಗಳ ಬೆಸೆಕೆಯಾಗುವ ಹಂತಕ್ಕೇರಬೇಕು. ಯುವ ಸಮುದಾಯಕ್ಕೆ ಈ ಆದರ್ಶದ ರುಚಿ ಹಚ್ಚಿಸಬೇಕು. ಇಂತಹ ಹೊಸತನಕ್ಕೆ ತಮ್ಮನ್ನು ಒಡ್ಡಿಕೊಂಡು ಬಾಳ ಸಾಫಲ್ಯದಲ್ಲಿರುವ ಹಲವಾರು ಎಳೆಯರು ವಿವಾಹ ವ್ಯವಸ್ಥೆಗೆ ಮರು ನಿರ್ವಚನವನ್ನು ನೀಡುತ್ತಿದ್ದಾರೆ.

**-ವಿನಯಾ ಒಕ್ಕುಂದ,** ಪ್ರಾಧ್ಯಾಪಕಿ, ಲೇಖಕಿ, ಧಾರವಾಡ

## ಸಮತೆಯ ಅಗತ್ಯ



**ವ್ಯ**ಕ್ತಿ ವಿಚಾರವಂತನಾದಂತೆ ಖಾಸಗೀತನವನ್ನು ಇಷ್ಟಪಡುತ್ತಾನೆ ಅನಿಸುತ್ತದೆ, ಹಾಗಾಗಿ ಅವಿಭಕ್ತ ಕುಟುಂಬ ಅವರನ್ನು ಕಸಿವಿಸಿಗೊಳಿಸುತ್ತಿದೆ. ತದನಂತರದ ಇಚ್ಛೆಯೇ ಲಿವಿನ್ ರಿಲೇಶನ್ಶಿಪ್ ಮತ್ತು ಸಿಂಗಲ್ ಮದರ್. ಇನ್ನುಳಿದಂತೆ ವಿವಾಹ ಪದ್ಧತಿಯು ವಿಶೇಷವಾಗಿ ನಮ್ಮ ಹೆಣ್ಣುಮಕ್ಕಳಿಗೆ ಗಂಡಿನ ಕುಟುಂಬವನ್ನು ಸಲಹುವ ಕಾರಣಕ್ಕಾಗಿ ಹೆಚ್ಚು ಸಮಯವನ್ನು ಹಾಗೂ ಅವಳಿಂದ ಹೆಚ್ಚಿನ ತ್ಯಾಗವನ್ನು ನಿರೀಕ್ಷಿಸುತ್ತದೆ. ಕುಟುಂಬದ ಮನೆ ಆಸ್ತಿಯನ್ನು ಕಾಯ್ದುಕೊಂಡು ಹೋಗಲು ಆಕೆ ಮಕ್ಕಳನ್ನು ಹೆತ್ತುಕೊಡಲೇಬೇಕು ಎಂಬಂತಹ ಅನೇಕ ಸಂಹಿತೆಗಳನ್ನು ಹೇರುತ್ತದೆ.

ವಿವಾಹದ ಎಲ್ಲ ಕಟ್ಟುಪಾಡುಗಳೂ ಸಂಪ್ರದಾಯದ ಹೆಸರಿನಲ್ಲಿ ಸ್ವಾತಂತ್ರ್ಯ ಹರಣ, ಬಂಧನದ ಅರ್ಥದಲ್ಲಿ ಆಗುತ್ತಿರುವ ಶೋಷಣೆಗಳೇ. ವಿವಾಹ ಸಂಬಂಧಗಳು ದೈಹಿಕ ಅನುನಯದ ಜೊತೆಗೇ ಮಾನಸಿಕವಾಗಿಯೂ ಅನನ್ಯ ಹೊಂದಾಣಿಕೆಯ ಅನಿವಾರ್ಯತೆಯನ್ನು ಅಪಾರ ಸಹನೆ ತಾಳ್ಮೆಗಳನ್ನು ಬೇಡುತ್ತದೆ. ದಾಂಪತ್ಯ ನಿಷ್ಠೆ ಎಂಬುದಂತೂ ಹೆಣ್ಣಿಗೆ ಮಾತ್ರ ಸಂಬಂಧಿಸಿದ್ದು ಎಂಬಂತೆ ಬಿಂಬಿತವಾಗಿದೆ. ಹೀಗಾದಾಗ ಪ್ರಗತಿಪಥದತ್ತ ಮುಖ ಮಾಡಿದ ಸಮಾಜ ಸಹಜವಾಗಿಯೇ ಕ್ರಮೇಣ ವಿವಾಹ ಸಂಸ್ಥೆಯಿಂದ ದೂರಾಗುತ್ತದೆ.

ಭಾರತದಲ್ಲಿ ಮುಂದಿನ ಇಪ್ಪತ್ತೈದು ವರ್ಷಗಳಲ್ಲೇ ಎಲ್ಲರ ಮನೆಯಲ್ಲೂ ಲಿವಿನ್ ರಿಲೇಶನ್ಶಿಪ್‌ನಲ್ಲಿರುವ ಜೋಡಿಗಳು ಕಾಣಸಿಕ್ಕು, ಸಮಾಜ ಅದರ ಕುರಿತು ಮಾತನಾಡಿಕೊಳ್ಳುವುದನ್ನು ನಿಲ್ಲಿಸುತ್ತದೆ. ಅದು ಸಾಮಾನ್ಯವೆಂತಾದಾಗ ಮುಂದೆ ಅದೇ ಸಮಾಜದ ಒಂದು ಸಂಪ್ರದಾಯವಾಗಿ ಬೆಳೆಯಲೂಬಹುದು. ಈ ಲಿವಿಂಗ್ ಟುಗೆದರ್ ಅನ್ನುವುದನ್ನು ಆಧುನಿಕತೆ ಎಂಬರ್ಥದಲ್ಲಿ ಗ್ರಹಿಸುವುದಲ್ಲ, ಅದೊಂದು ಹೊಸ ಅರಿವು. ಹೊಸ ಪರಿಜ್ಞಾನ, ಯುವ ಜನಾಂಗದ ಹೊಸ ಅನಿವಾರ್ಯತೆ, ಆದರೆ ಮನೆ ವೃದ್ಧರನ್ನು ನೋಡಿಕೊಳ್ಳಲು ಬೇರೊಂದು ಶಿಸ್ತುಬದ್ಧ ವ್ಯವಸ್ಥೆ ಹುಟ್ಟಿಕೊಳ್ಳಲೇಬೇಕು.

ಗಂಡು ಮತ್ತು ಹೆಣ್ಣು ಇಬ್ಬರಿಗೂ ಪರಸ್ಪರರ ಅಗತ್ಯವಿದೆ. ಹೆಣ್ಣಿಗೆ ತಾಯ್ತನದ ಅನುಭವ ಬೇಕು ಅನ್ನಿಸಿದರೆ ಮಕ್ಕಳನ್ನು ಮಾಡಿಕೊಳ್ಳಬಹುದು, ಇದೀಗ ಸಂತಾನೋತ್ಪತ್ತಿ ಅಥವಾ ಮಾನವ ಸಂತತಿ ಉಳಿಸುವ ವಾಹಕವಾಗಿ ಮಾತ್ರ ನಡೆವ ಲೈಂಗಿಕ ಸಂಬಂಧ ಎಂಬಂತಾಗಿರುವುದೇ ವಿವಾಹ ಸಂಸ್ಥೆ ಶಿಥಿಲಗೊಳ್ಳಲು ಕಾರಣ. ಇದು ಸ್ತ್ರೀವಾದವಲ್ಲ, ಇದು ನಮ್ಮ ಬದುಕು. ನಾವು ಗಂಡುಮಕ್ಕಳಂತೆಯೇ ಬೆಳೆದಿದ್ದೇವೆ. ನಮಗೆ ಸ್ವಂತಕ್ಕೆ ಹೊಟ್ಟೆ ಹೊರೆವ ಸಾಮರ್ಥ್ಯದ ಜೊತೆ ಸ್ವಂತ ವಿಚಾರಗಳಿವೆ. ನಮಗೆ ನಮ್ಮದೇ ಆದ ಸಮಯದ ಅಗತ್ಯವಿದೆ, ನಿಮ್ಮ ಎಂಥದೇ ಚೌಕಟ್ಟಿನಲ್ಲೂ ಇವಕ್ಕೆಲ್ಲ ಸಮತೆಯ ಸುರುಳೀತ ಅನುಕೂಲಗಳಿವೆ ಅಂತಾದರೆ ಅದು ವಿವಾಹವೂ ಆಗಬಹುದು,

**–ಸುನಂದಾ ಕಡಮೆ**, ಲೇಖಕಿ, ಹುಬ್ಬಳ್ಳಿ

## ತುಕ್ಕು ಹಿಡಿದ ಕನ್ನಡಿ



**ಸ**ಮಾಜದ ಸ್ವರೂಪ, ಮೌಲ್ಯವ್ಯವಸ್ಥೆಯಲ್ಲಿ ಜಾಗತೀಕರಣದ ಮಾರುಕಟ್ಟೆ ಆರ್ಥಿಕತೆ ತಂದ ಬದಲಾವಣೆಯು ಮಹಿಳೆ ಮತ್ತು ವಿವಾಹಸಂಸ್ಥೆ ಎದುರಿಸುತ್ತಿರುವ ಬಿಕ್ಕಟ್ಟುಗಳ ಕಾರಣವೆಂದು ತೋರಿದರೂ, ಕಷ್ಟಮೂಲದ ಕಣ್ಣು ಗಂಡರಿಮೆಯನ್ನು ಆವಾಹಿಸಿಕೊಂಡ ಆಧುನಿಕ ಸಮಾಜದಲ್ಲಿದೆ. ಸತಿಪತಿಯರು ದೈಹಿಕ, ಭಾವುಕ, ಸೃಜನಶೀಲ ಅಗತ್ಯಗಳಿಗೆ ಪೂರಕವಾಗಿ ಬದುಕುವಂತಿದ್ದರೆ ಅರ್ಥಪೂರ್ಣ ಸಂಬಂಧವಾಗಬಹುದಾಗಿದ್ದ ದಾಂಪತ್ಯವು ಹೆಣ್ಣಿಗೆ ಸ್ವಾತಂತ್ರ್ಯ–ಸಮಾನತೆ ನಿರಾಕರಿಸಿ ಬಿಕ್ಕಟ್ಟುಗಳನ್ನು ಮೇಲೆಳೆದುಕೊಂಡಿದೆ.

ಮದುವೆ ಸಂಸ್ಥೆಯೊಳಗಿನ ಅಗೋಚರ ಹಿಂಸೆ; ದಾಂಪತ್ಯ ನಿಷ್ಠೆಯನ್ನು ಸಾಬೀತುಗೊಳಿಸಬೇಕಾದ ಏಕಪಕ್ಷೀಯ ಹೊರೆ; ಕೊನೆಮೊದಲಿರದ ಕೌಟುಂಬಿಕ ಜವಾಬ್ದಾರಿಗಳು ಹೆಣ್ಣಿನ ಆತ್ಮಗೌರವವನ್ನು, ಕ್ರಿಯಾಶೀಲತೆಯನ್ನು ನಿರಂತರ ದಮನಿಸುತ್ತಿವೆ. ಏಂಗೆಲ್ಸ್ ಗುರುತಿಸಿರುವಂತೆ ಮಾನವ ಸಮಾಜದ ಮೊದಲ ಗುಲಾಮಳು ಹೆಣ್ಣು. ಅವಳ ಶ್ರಮ, ವಿರಾಮ ಮತ್ತು ಲೈಂಗಿಕತೆಗಳ ನಿಯಂತ್ರಣವೇ ಕುಟುಂಬ ವ್ಯವಸ್ಥೆಯ ಅಡಿಪಾಯ. ತಾಯಿ, ದಾಸಿ, ವೇಶ್ಯೆ, ಮಂತ್ರಿ ಮೊದಲಾಗಿ ಎಲ್ಲಕ್ಕೂ ಅವಳು ಒದಗಬೇಕು. ದಂಪತಿಗಳ ನಡುವಿನ ದೈಹಿಕ ಆಕರ್ಷಣೆ ಕೆಲಕಾಲ ಬೆಳಗಿದರೂ ಬರಬರುತ್ತ ದೀಪದ ಉಸಿರು ಕಟ್ಟುತ್ತದೆ. ದಾಂಪತ್ಯ ಹೊಸನೆಲೆಗಳಲ್ಲಿ ನವೀಕರಣಗೊಳ್ಳದೇ ಹೆಣ್ಣುಜೀವದ ಸ್ವಾಯತ್ತತೆಯ ಸಮಾಧಿ ಮೇಲೆ ಶಿಥಿಲವಾಗುತ್ತದೆ. ಇವತ್ತಿಗೂ ಮದುವೆಯೆಂದರೆ ನಿನ್ನೆ ನಾಳೆಗಳ ಮೇಲೆ ಸಂಪೂರ್ಣ ಹಕ್ಕುಸ್ವಾಮ್ಯದೊಂದಿಗೆ ಒಂದು ಹೆಣ್ಣನ್ನು ಗಂಡಿಗೆ ಹಸ್ತಾಂತರಿಸುವುದೇ ಆಗಿದೆ. ಕಾಲದ ಅವಶ್ಯಕತೆಗಳಿನುಗುಣವಾಗಿ ಅವಳ ದುಡಿಮೆ, ಜವಾಬ್ದಾರಿಗಳು ಹೆಚ್ಚಿದರೂ ಗಾಣದೆತ್ತಿನಂತಹ ಸ್ಥಿತಿಯಲ್ಲಿ ಬದಲಾವಣೆಯಾಗಿಲ್ಲ. ಪರಿಧಿ ಹಿಗ್ಗಿದರೂ ಗೂಟ ಆಳಕ್ಕೆ ಹುಗಿದುಕೊಂಡಿದ್ದು, ಕಣ್ಣಿಹಗ್ಗ ಮತ್ತಷ್ಟು ಹುರಿಗೊಂಡಿದೆ.

ಕೊನೆಗೂ ಬೇಕಿರುವುದು ಸುರಕ್ಷಿತ ಆವರಣವೋ? ಸ್ವಾಯತ್ತ ಬದುಕೋ? ಎಂದು ಹುಡುಗಿಯರು ಕೇಳಿಕೊಳ್ಳತೊಡಗಿದ್ದಾರೆ. ಕುಟುಂಬವೆಂಬುದು ಪುಣ್ಯಕೋಟಿಯ ಕುತ್ತಿಗೆಗೆ ಕಟ್ಟಿದ ಕುಂಟೆ ಯಾಕಾಗಿದೆಯೆಂದು ಹೆಣ್ಣು ಪ್ರಶ್ನಿಸುತ್ತಿದ್ದಾರೆ. ಸಿದ್ಧ ಮಾದರಿ ನಿರಾಕರಣೆಗೊಳಗಾಗುತ್ತಿದೆ, ಸಂಬಂಧಗಳ ಹೊಸನೆಲೆಯ ಶೋಧ ಆರಂಭವಾಗಿದೆ.

ಹಾಗೆ ನೋಡಿದರೆ ಇವತ್ತಿನ ಸಂಕ್ರಮಣ ಕಾಲಘಟ್ಟದಲ್ಲಿ ಬೌದ್ಧಿಕ ಬಿಕ್ಕಟ್ಟು ಎದುರಿಸುತ್ತಿರುವವರು ಪುರುಷರು. ಯಾಕೆಂದರೆ ಹೆಣ್ಣು ಹೆಣ್ತನವನ್ನು ಮರುವ್ಯಾಖ್ಯಾನಿಸಿಕೊಂಡು ಗಡಿಗೆರೆ ವಿಸ್ತರಿಸಿಕೊಂಡಿದ್ದಾಳೆ. ಆದರೆ ಗಂಡಸರಲ್ಲ. ಗಂಡು ತನ್ನ ಗಂಡಸುತನವನ್ನು, ಹುಸಿ ಮೇಲರಿಮೆಯನ್ನು ಕಾಲದ ಕುಲುಮೆಯಲ್ಲಿ ಕಾಯಿಸಬೇಕು. ದಾಂಪತ್ಯ, ಸಮಾನತೆ, ಸ್ವಾಯತ್ತತೆಯೇ ಮೊದಲಾದ ಮೌಲ್ಯಗಳ ನಿಜಾರ್ಥ ಅರಿಯಬೇಕು. ಹೆಣ್ಣನ್ನು ಘನತೆಯಿಂದ, ಸಮಾನ ಗೌರವದಿಂದ ನಡೆಸಿಕೊಂಡು, ನೋವು–ನಲಿವು–ಶ್ರಮಗಳಲ್ಲಿ ಸಮಭಾಗಿಯಾಗಬೇಕು. ಹಾಗಲ್ಲದಿದ್ದರೆ ವಿವಾಹಸಂಸ್ಥೆಯಂತೆ ಹೆಣ್ಣುಗಂಡು ಸಂಬಂಧದ ಎಲ್ಲ ನೆಲೆಗಳೂ ಗಾಢಮೌನದಲ್ಲಿ ಸಮಾಧಿಯಾಗುವ ಅಪಾಯವಿದೆ.

**–ಡಾ. ಎಚ್.ಎಸ್.ಅನುಪಮಾ**, ಮಹಿಳಾ ಸಂಘಟಕಿ, ಕವಲಕ್ಕಿ

## ಆತಂಕ ಬೇಕಿಲ್ಲ



**ಜಾ**ಗತೀಕರಣವೆಂಬುದು ನಮ್ಮ ಬದುಕಿನ ಭಾಗವೇ ಆಗಿ ಕಾಲು ಶತಮಾನವೇ ಆಗಿದೆ. ಆ ಮೊದಲೇ ೭೦ರ ದಶಕದ ಬಂಡಾಯ ದಲಿತ ಚಳವಳಿಗಳು ಅಂತರ–ಜಾತಿ ವಿವಾಹಗಳನ್ನು ಪ್ರೋತ್ಸಾಹಿಸಿದುವು.

ಜಾಗತಿಕ ಉದಾರೀಕರಣದಲ್ಲಿ ಲಕ್ಷಾಂತರ ರೇಟ್ ಉದ್ಯಮ ಹಾಗೂ ಉದ್ಯೋಗಾವಕಾಶಗಳು ಮಹಿಳೆಯರಿಗೆ ಆರ್ಥಿಕ ಭದ್ರತೆ ಒದಗಿಸಿದರೂ ಮಹಿಳಾ ವಿಮೋಚನೆ, ಸಬಲೀಕರಣದಲ್ಲಿ ಯಾವ ಪವಾಡವೂ ಆಗಲಿಲ್ಲ. ಪರಸ್ಪರ ಪ್ರೀತಿಸಿ ಮದುವೆಯಾದವರಲ್ಲೂ ಹೊಂದಾಣಿಕೆ ಸಾಮರಸ್ಯದ ಕೊರತೆಯಿಂದ ಬದುಕು ನರಕವಾಗಿರುವುದನ್ನು ಕಾಣುತ್ತೇವೆ. ಪ್ರೇಮರಹಿತ ಮದುವೆಯಲ್ಲಿ ನರಳುವುದಕ್ಕಿಂತ ಕಳಚಿಕೊಳ್ಳುವುದೇ ಲೇಸು.  ಆದರೆ ಆ ಧೈರ್ಯದ ಹೆಜ್ಜೆಗೂ ಪುರುಷ ವ್ಯವಸ್ಥೆ ಸರಪಳಿ ಹಾಕಿಡುತ್ತದೆ. ಆಕೆ ಬದುಕಿರುವವರೆಗೂ ಅವನ ಆಸ್ತಿ ಆಗಿ ಬಿದ್ದಿರಬೇಕಷ್ಟೆ. ವೈಧವ್ಯವೆಂಬುದುದು ಮಹಿಳಾ ಶೋಷಣೆಯ ಅತ್ಯಂತ ಕ್ರೂರವಾದ ಘಟ್ಟ, ಆಧುನಿಕತೆ ನುಸುಳದೇ ಇದ್ದ ಕಾಲದಲ್ಲಿಯೇ ಕೆಳವರ್ಗದವರಲ್ಲಿ ಕೂಡಿಕೆ, ಕೂಡಾವಳಿ, ಉಡಕಿ ಮೂಲಕ ವಿಧವಾ ವಿವಾಹಕ್ಕೆ ಅವಕಾಶವಿತ್ತು. ಮೇಲ್ವರ್ಗದ ಮಹಿಳೆಯರಿಗೆ ಅವಕಾಶವಿದ್ದಿಲ್ಲ. ವಿವಾಹ, ಕುಟುಂಬಗಳೆಂಬ ಸಾಮಾಜಿಕ ಸಂಸ್ಥೆಗಳನ್ನು ಪುರುಷಪ್ರಧಾನ ಪಾಳೇಗಾರಿ ಮೌಲ್ಯಗಳೇ ಹುಟ್ಟುಹಾಕಿವೆ. ಜಾತಿ ವ್ಯವಸ್ಥೆಯನ್ನು ಗಟ್ಟಿಗೊಳಿಸಲು ವಿವಾಹ ಸಂಸ್ಥೆಯನ್ನು ಬಲವಾಗಿ ಬಳಸಿಕೊಳ್ಳಲಾಗಿದೆ ಎನ್ನುತ್ತಾರೆ ಚಿಂತಕರು.

ಅಮೇರಿಕೆಯ ವರ್ಲ್ಡ್ ಟ್ರೇಡ್ ಸೆಂಟರಿನ ಅವಳಿ ಕಟ್ಟಡಗಳ ಮೇಲೆ ಬಾಂಬ್ ದಾಳಿಯಾದಾಗ ೨೦೦೦ಕ್ಕೂ ಮೀರಿ ಜನ ಸತ್ತರು. ಅವರೆಲ್ಲರೂ ಕೊನೆಯದಾಗಿ ಕರೆ ಮಾಡಿದ್ದು ತಮ್ಮ ಪತ್ನಿಯರಿಗೇ ಎಂದು ಸಮೀಕ್ಷೆಗಳು ಹೇಳುತ್ತವೆ. ಅವರಿಗೂ ನಮ್ಮಂತೆ ಕುಟುಂಬ ವ್ಯವಸ್ಥೆ, ಬದ್ಧತೆಯೆಂಬುದಿದೆ, ನಾವೇ ಸ್ವಚ್ಛಂದತೆಯನ್ನು ತಪ್ಪಾಗಿ ಗ್ರಹಿಸಿಕೊಂಡಿದ್ದೇವೆ ಅನಿಸುತ್ತದೆ. ಇನ್ನು ಆಧುನಿಕತೆ ಎನ್ನುವುದು ನಮ್ಮ ಉಡುಗೆ ತೊಡುಗೆ ಬದುಕಿನ ಶೈಲಿಯಲ್ಲಿ ವ್ಯಕ್ತವಾಗುತ್ತಿದೆಯೇ ಹೊರತು  ಬದುಕಿನ ರೀತಿಯಲ್ಲಲ್ಲ. ಈಗಂತೂ ಸುಪ್ರೀಂ ಕೋರ್ಟ ಒಟ್ಟಿಗೆ ಬಾಳುವ "ಲಿವ್ ಇನ್ ಟುಗೆದರ್" ಸಂಗಾತಿಗಳಿಗೆ ವಿವಾಹಿತರೆಂದೇ ಪರಿಗಣಿಸಬೇಕು ಎಂದು ಮಾನ್ಯತೆ ನೀಡಿದೆ. ಕೆಲ ಪಶ್ಚಿಮ ದೇಶಗಳಲ್ಲಿ ಸಲಿಂಗ ವಿವಾಹಗಳೂ ಕಾನೂನಿನ ಮಾನ್ಯತೆ ಪಡೆದಿವೆ.

ನನ್ನ ವಿಚಾರದಲ್ಲಿ ಸಮಾನತೆ, ಸ್ವಾತಂತ್ರ್ಯ, ಪ್ರೀತಿಯೇ ಆಧಾರವಾಗಿರುವ ಒಟ್ಟಿಗೆ ಬಾಳುವ ಬದುಕೇ ಚೆಂದ. ಜಾಗತಿಕರಣ ಇದು ನನ್ನ ದೇಹ, ನನ್ನ ಆಯ್ಕೆಯೆಂಬ ಮುಕ್ತತೆಯ ಅರಿವನ್ನು, ಆಯ್ಕೆಯ ಅವಕಾಶವನ್ನು ಮಹಿಳೆಗೆ ಉದಾರವಾಗಿ ನೀಡಿದೆಯೆನ್ನಬಹುದು. ಅದರಿಂದ ಜಾಗತೀಕರಣ, ಉದಾರಿಕರಣ ಮತ್ತು ನಗರೀಕರಣಗಳ್ಯಾವವೂ ವಿವಾಹ ಸಂಸ್ಥೆಯನ್ನು ಶಿಥಿಲಗೊಳಿಸುತ್ತಿದೆಯೆಂಬ ಆತಂಕ ಬೇಕಿಲ್ಲ!

**–ರೇಣುಕಾ ನಿಡಗುಂದಿ**, ಲೇಖಕಿ ಮತ್ತು ಪತ್ರಕರ್ತೆ, ದೆಹಲಿ

ಯುವಲಹರಿ

# ತರಗತಿಯ ಪಾಠ ಮತ್ತು ವರ್ತಮಾನ

–ಸ್ನೇಹಾ ಎನ್.ಆರ್.



**ನಾ**ನು ಹಳ್ಳಿಯ ಕಾಲೇಜಿನಲ್ಲಿ ಪಿಯುಸಿ ಮಕ್ಕಳಿಗೆ ಇಂಗ್ಲಿಷ್ ಪಾಠ ಮಾಡುತ್ತೇನೆ. ಭಾಷಾ ಪಠ್ಯಗಳಲ್ಲಿ ಮಹಿಳಾ ಸಂವೇದನೆಯ ಪದ್ಯ, ಗದ್ಯಗಳು ಕಡ್ಡಾಯವಾಗಿ ಇದ್ದೇ ಇರುತ್ತವೆ. ಪಠ್ಯಪುಸ್ತಕ ಸಮಿತಿಯ ವಿಷಯ ತಜ್ಞರ ಕಾಳಜಿ ಫಲವಾಗಿ ಮಹಿಳಾತನವನ್ನು ಅತ್ಯಂತ ಪರಿಣಾಮಕಾರಿಯಾಗಿ ಬಿಂಬಿಸುವ ಪದ್ಯ, ಪಾಠಗಳಿರುತ್ತವೆ ಕೂಡ. ಪರಿಣಾಮ, ಪರೀಕ್ಷಾ ದೃಷ್ಟಿಯಿಂದಲಾದರೂ ಪ್ರತಿವರ್ಷ ಐದರಿಂದ ಆರು ಲಕ್ಷ ಮಕ್ಕಳು ಮಹಿಳಾ ಪರವಾದ ಸಾಹಿತ್ಯ – ಸಂವೇದನೆಗೆ ಕಡ್ಡಾಯ ಕಿವಿಗೊಡುತ್ತಾರೆ. ಪರೀಕ್ಷೆ ಎದುರಿಸುವವರು ಮತ್ತು ಉತ್ತೀರ್ಣರಾಗುವವರ ಪೈಕಿ ಹೆಚ್ಚು ಪಾಲು ಹೆಣ್ಮಕ್ಕಳೇ ಆಗಿರುತ್ತಾರೆ.

ಪಠ್ಯದಲ್ಲಿನ ಲಿಂಗಸಮಾನತೆ; ಮಹಿಳೆಯರ ಆರ್ಥಿಕ ಸಬಲತೆ; ಸ್ವಾವಲಂಬನೆಯ ಆಶಯಗಳು ಮಕ್ಕಳ ಮನಸ್ಸಿನ ಮೇಲೆ ಪೂರಕ ಪರಿಣಾಮ ಬೀರದೆ ಇಲ್ಲ. ಎಷ್ಟೋ ಹೆಣ್ಮಕ್ಕಳು ಸ್ಥಾಪಿತ ಹಿತಾಸಕ್ತಿಗಳು ಸೃಷ್ಟಿಸಿದ ಚೌಕಟ್ಟುಗಳನ್ನು ದಾಟಿ, ಅರ್ಥಪೂರ್ಣ ಬದುಕು ಕಟ್ಟಿಕೊಂಡಿದ್ದಾರೆ. ತರಗತಿಯಲ್ಲಿ ಇಂಥ ವಿಷಯಗಳ ಚರ್ಚೆಯಲ್ಲಿ ಆಸಕ್ತಿಯಿಂದ ಭಾಗವಹಿಸುವ ಅನೇಕ ಹೆಣ್ಮಕ್ಕಳು,ಹುಡುಗರು ಬದುಕಿನ ಸಂದರ್ಭದಲ್ಲಿ ಸಮಾನತೆ; ಸಬಲತೆಯ ಆಶಯಗಳಿಗೆ ವಿಮುಖವಾಗಿ ನಡೆಯುವ ಅನಿವಾರ್ಯಕ್ಕೆ ಒಡ್ಡಿಕೊಳ್ಳುವುದನ್ನೂ ಕಂಡಿದ್ದೇನೆ.

ಕೆಲವು ವರ್ಷಗಳ ಹಿಂದೆ, ಪಾಕಿಸ್ತಾನದ ಕವಿಯತ್ರಿ ಕಿಶ್ವರ್ ನಹೀದರ I am not that woman ಪದ್ಯ ಪಠ್ಯವಾಗಿತ್ತು. ಮಹಿಳಾ ಸ್ವಾಭಿಮಾನವನ್ನು ಅತ್ಯಂತ ಪ್ರಖರವಾಗಿ ಬಿಂಬಿಸುವ ಪದ್ಯದಲ್ಲಿ ಕಿಶ್ವರ್, ಮಹಿಳೆಯ ಸ್ವಾಭಾವಿಕ ನಡವಳಿಕೆಗಳನ್ನೇ ಶೋಷಣೆಯ ಅಸ್ತ್ರವನ್ನಾಗಿಸಿಕೊಳ್ಳುವ ಸಮಾಜವನ್ನು ಪ್ರಶ್ನಿಸುತ್ತಾ, ಖಂಡಿಸುತ್ತಾ ಅವುಗಳಿಗೆ ಅಷ್ಟೇ ದೃಢ ಉತ್ತರಗಳನ್ನು ನೀಡುತ್ತಾ ಸಾಗುತ್ತಾಳೆ. "ಸಂಕುಚಿತ ಮನೋಧರ್ಮದ ದೇಶ ಎಂದೂ ಸ್ವತಂತ್ರವಾಗಿರದು ಎನ್ನುವುದನ್ನು ನೀನು ಅರಿತಿಲ್ಲ. ತಾಯ್ತನ, ಪಾವಿತ್ರ್ಯತೆ, ತ್ಯಾಗಮಯಿಯಾಗಷ್ಟೇ ಬಿಂಬಿತವಾಗುವ ಹೆಣ್ಣು ನಾನಲ್ಲ. ನಾನೀಗ ಹೂವಾಗಿ ಅರಳುವ ಕಾಲ ಬಂದಿದೆ," ಎನ್ನುವ ಸಂದೇಶವನ್ನು ರವಾನಿಸುತ್ತಾಳೆ.

ತರಗತಿಯಲ್ಲಿ ಇಂಥ ಪದ್ಯಗಳನ್ನು ಆಸಕ್ತಿಯಿಂದ ಕೇಳಿಸಿಕೊಳ್ಳುವ ನಮ್ಮ ಹಳ್ಳಿಯ ಹೆಣ್ಮಕ್ಕಳ ಕನಸುಗಳು ಅರಳುವುದೇನೋ ಹೌದು. ಆದರೆ, ಆ ಮಟ್ಟಿನ ಸುಧಾರಣೆಗೆ ಒಡ್ಡಿಕೊಳ್ಳದ ಸಾಮಾಜಿಕ ವ್ಯವಸ್ಥೆ ಹೆಚ್ಚಿನ ಸಂದರ್ಭಗಳಲ್ಲಿ ಆಕೆಯ ಕನಸುಗಳನ್ನು ಕಮರಿಸುತ್ತಿರುತ್ತದೆ. ಪುರುಷ ಪ್ರಧಾನ ಸಮಾಜ ಮತ್ತು ಲಿಂಗ ಸಂಬಂಧಿ ಅಸಮಾನತೆಯ ಬಗ್ಗೆ ಕಿಶ್ವರ್ ಎತ್ತುವ ಪ್ರಶ್ನೆಗಳನ್ನು ಮತ್ತು ಲಿಂಗಸಮಾನತೆಯ ಅಗತ್ಯವನ್ನು ನಾನು ತರಗತಿಯಲ್ಲಿ ಚರ್ಚಿಸುತ್ತಿದ್ದಾಗ ಪ್ರತಿಭಾವಂತ ವಿದ್ಯಾರ್ಥಿನಿಯೊಬ್ಬಳು ಸಾಕಷ್ಟು ಪ್ರಭಾವಿತಳಾದಂತೆ ಕಂಡಳು. ಆಕೆ ಚರ್ಚೆಯಲ್ಲಿ ಆಸಕ್ತಿದಾಯಕವಾಗಿ ಭಾಗವಹಿಸಿದ್ದು ನನ್ನಲ್ಲಿ ಹೆಮ್ಮೆ ಮೂಡಿಸಿತು ಕೂಡ. ಆದರೆ, ಪಿಯುಸಿಯನ್ನು ಉನ್ನತ ದರ್ಜೆಯಲ್ಲಿ ಪಾಸು ಮಾಡಿದ ಆಕೆ ಮುಂದೆ ಓದುವ ಅವಕಾಶವನ್ನು ಕೈಚೆಲ್ಲಿ ಮದುವೆಯಾಗುವ ಆತುರಕ್ಕೆ ಒಡ್ಡಿಕೊಂಡಳು. ತನಗಿಂತ ಒಂದೆರಡು ವರ್ಷ ಹಿರಿಯನಾದ,ನಮ್ಮದೇ ಕಾಲೇಜಿನಲ್ಲಿ ಓದಿ, ಅರ್ಧಕ್ಕೆ ಬಿಟ್ಟಿದ್ದ ವಿದ್ಯಾರ್ಥಿಯನ್ನು ಪ್ರೀತಿಸಿ,ಮದುವೆಯ "ಬಂಧನ"ಕ್ಕೆ ಒಳಗಾದಳು. ತರಗತಿಯಲ್ಲಿ ಕಲಿತ ಸ್ವಾಭಿಮಾನ; ಸ್ವಾವಲಂಬನೆ; ಆರ್ಥಿಕ ಸಬಲತೆಯ ಅಗತ್ಯದ ಪಾಠಗಳು ಅವರಿಬ್ಬರ ಪಾಲಿಗೆ ಆ ಹೊತ್ತಿಗೆ 'ಅಪ್ರಸ್ತುತ' ಎನ್ನಿಸಿದ್ದವು !

ಹೀಗೆ, ನಾನು ಪಾಠಮಾಡುವ ಪರಿಸರದಲ್ಲಿ ಮದುವೆಯೇ ಬದುಕಿನ ಆತ್ಯಂತಿಕ "ಗುರಿ" ಎಂದು ಅವಸರಕ್ಕೆ ಬೀಳುವವರು ಒಬ್ಬಿಬ್ಬರಲ್ಲ. ಹಲವು ಪ್ರಕರಣಗಳಲ್ಲಿ ಜವಾಬ್ದಾರಿ 'ಕಳೆದುಕೊಳ್ಳುವ' ಅವಸರ ಪ್ರೇರಿತ ಪೋಷಕರ ಒತ್ತಾಯ ಕಾರಣವಾದರೆ, ಕೆಲವು ಸಂದರ್ಭಗಳಲ್ಲಿ ಹುಡುಗ–ಹುಡುಗಿಯರೇ ಅವಶ್ಯ ಜವಾಬ್ದಾರಿಗಳ ಬಗ್ಗೆ ತಲೆ ಕೆಡಿಸಿಕೊಳ್ಳದೆ ಬೇಜವಾಬ್ದಾರಿ ಮೆರೆಯುತ್ತಾರೆ. ಮದುವೆ ಎಲ್ಲದಕ್ಕೂ 'ಸುಲಭ' ಉತ್ತರವಾಗಿ ಈಗಲೂ ಬಿಂಬಿತವಾಗುತ್ತಿರುವುದು ಮತ್ತು ನಂಬಿಕೆ, ಮಾಧ್ಯಗಳಿಗೆ ಕಟ್ಟುಬಿದ್ದು ಸಂಕುಚಿತವಾಗಿ ಆಲೋಚಿಸುವ ಸಮಾಜದ ಪಾತ್ರವೂ ಇದರಲ್ಲಿ ಹಿರಿದು. ಹುಡುಗಾಟದ ಪರ್ವ ಮುಗಿದು, ಬದುಕಿನ ಕಷ್ಟ ಕೋಟಲೆಗಳು ಎದುರಾದಾಗ ತಳಮಳಿಸಿದವರನ್ನೂ ಕಂಡಿದ್ದೇನೆ ಮತ್ತು ಇಂಥ ಸಂದರ್ಭಗಳಲ್ಲೆಲ್ಲ ತರಗತಿಯ ನನ್ನ ಪಾಠಗಳು "ವ್ಯರ್ಥ ಪ್ರಲಾಪವೇ" ಎನ್ನಿಸಿದ್ದೂ ಉಂಟು. ಪಠ್ಯವನ್ನು ಎಷ್ಟೇ ಎಚ್ಚರಿಕೆಯಿಂದ ವ್ಯಾಖ್ಯಾನಿಸಿದರೂ, ಹದಿಹರೆಯದವರು ತಮ್ಮ ಇಷ್ಟಾರ್ಥಕ್ಕೆ ತಕ್ಕಂತೆ ಸರಳವಾಗಿ ಅರ್ಥೈಸಿಕೊಳ್ಳುವ; ಧಾರವಾಹಿ– ಸಿನಿಮಾಗಳ ಕಾಲ್ಪನಿಕ ಪಾತ್ರಗಳನ್ನೇ ಆದರ್ಶವಾಗಿಸಿಕೊಂಡು ಪ್ರೇಮ, ಕಾಮ, ಮೋಹ, ಮೌಢ್ಯದ ಹಿಂದೆ ಬೀಳುವ ಪರಿ ಗಾಬರಿ ಮೂಡಿಸುತ್ತದೆ ಕೂಡ.

ಉತ್ತಮ ಅಂಕಗಳೊಡನೆ ಪಿಯುಸಿ ಪಾಸಾಗಿದ್ದ ನನ್ನ ಮತ್ತೊಬ್ಬ ವಿದ್ಯಾರ್ಥಿನಿ ಅಂಕಪಟ್ಟಿ ಪಡೆಯಲು ಬರುವ ವೇಳೆಗಾಗಲೇ 'ವಿಧವೆ' ಎನ್ನಿಸಿಕೊಂಡಿದ್ದಳು. ಮನೆಯವರ ಬಲವಂತಕ್ಕೆ ಕಟ್ಟುಬಿದ್ದು ಸೋದರಮಾವನನ್ನೇ ಮದುವೆಯಾಗಿದ್ದು; ವಯಸ್ಸಿನಲ್ಲಿ ತುಂಬಾ ಹಿರಿಯನಾಗಿದ್ದ ಆಕೆಯ ಗಂಡ ಅಕಾಲ ಮರಣಕ್ಕೀಡಾಗಿದ್ದು; ಮದುವೆಗೆ ಅವಸರಿಸಿದ್ದ ಮನೆಯವರು ಅಂತಿಮವಾಗಿ ಅವಳ 'ಹಣೆಬರಹ'ವನ್ನು ಜರಿದದ್ದು ಎಲ್ಲವೂ ಆ ಒಂದೆರಡು ತಿಂಗಳಲ್ಲೇ ಮುಗಿದುಹೋಗಿತ್ತು ! ಪುಟ್ಟ ವಿಧವೆಯ ಕಣ್ಣುಗಳು ಅಸಹಾಯಕತೆಯನ್ನಷ್ಟೆ ಹೊರಸೂಸುತ್ತಿದ್ದವು. ನನ್ನ ತರಗತಿಯ 'ಪಾಠ'ಗಳು ಆಕೆಯ ಸ್ಥಿತಿಯಲ್ಲಿ ನನ್ನನ್ನು ಅಣಕಿಸಿದವು. ಆದರೆ, ಹಲವು ತಿಂಗಳುಗಳ ಬಳಿಕ ಮತ್ತೆ ಎದುರಾದ ಆಕೆ, "ನಾನೀಗ ಕೆಲಸಕ್ಕೆ ಸೇರಿದ್ದೇನೆ," ಎಂದು ಖುಷಿ ತುಳುಕಿಸಿದಳು. ಮನಸ್ಸು ತುಸು ಹಗುರಾಯಿತು. ದುಡಿದು, ತನ್ನ ಬದುಕನ್ನು ನಿರ್ವಹಿಸಿಕೊಳ್ಳಬಲ್ಲೆ ಎನ್ನುವುದನ್ನು ನಿರೂಪಿಸಿದ ಆಕೆ ಈಗ ಪಕ್ಕದ ಊರಿನ ಹುಡುಗನನ್ನು ಮೆಚ್ಚಿ ಮರು ಮದುವೆಯಾಗಲಿದ್ದಾಳೆ; ಅದೂ ಜಾತಿಯ ಸಂಕೋಲೆಯನ್ನು ಮೀರಿ. ಆಕೆಯ ಬದುಕಿನಲ್ಲಿ ಭರವಸೆಯ ಬೆಳಕು ಹರಿಯುತ್ತಿರುವುದು ಸಂಭ್ರಮಿಸಲೇ ಬೇಕಾದ ಸಂಗತಿ ಹೌದಾದರೂ, ಇಂಥದೊಂದು ಆರ್ಥಿಕ ಸ್ವಾವಲಂಬನೆ ಮತ್ತು ಜಾತಿ–ಕಟ್ಟು, ಕಟ್ಟಳೆಗಳನ್ನು ಮೀರಿದ ಆಯ್ಕೆಯ ಸ್ವಾತಂತ್ರ್ಯ ದಕ್ಕಲು ಅವಳಿಗೆ ವೈಧವ್ಯ ಪ್ರಾಪ್ತವಾಗಬೇಕಾಯಿತಲ್ಲ ಎನ್ನುವುದು ವ್ಯವಸ್ಥೆಯ ವಿಪರ್ಯಾಸವೂ ಹೌದು.



**(ಮೈಸೂರಿನ ಸ್ನೇಹಾ, ಹೆಗ್ಗಡದೇವನಕೋಟೆ ತಾಲ್ಲೂಕಿನ ಹಳ್ಳಿಯೊಂದರಲ್ಲಿನ ಪ.ಪೂ. ಮಹಿಳಾ ಕಾಲೇಜಿನಲ್ಲಿ ಇಂಗ್ಲಿಷ್ ಬೋಧಕಿಯಾಗಿದ್ದು, ಭರತನಾಟ್ಯ ಕಲೆಯಲ್ಲಿಯೂ ಪರಿಣಿತಿ ಪಡೆದಿದ್ದಾರೆ)**

### ಚಂದಾದಾರರಾಗಲು ಬಯಸುಯವವರಿಗೆ ಸೂಚನೆ

ಹೊಸ ಮನುಷ್ಯ'ಕ್ಕೆ ಚಂದಾದಾರರಾಗ ಬಯಸುವವರು ಪತ್ರಿಕೆಯ ಮುಖಪುಟದಲ್ಲಿರುವ ಪತ್ರಿಕೆಯ ವಿಳಾಸಕ್ಕೆ ಸಂಪಾದಕರ ಹೆಸರಿನಲ್ಲಿ ಬರೆದ ಚೆಕ್/ ಡಿಡಿ ಕಳಿಸಬಹುದು. ಅಥವಾ ಸಂಪಾದಕರು, ಹೊಸ ಮನುಷ್ಯ ಹೆಸರಿನಲ್ಲಿ ಶಿವಮೊಗ್ಗದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಗೀತಾಕೃಪಾ ಶಾಖೆಯಲ್ಲಿರುವ **(ifsc code: sbin 0040444)** ಚಾಲ್ತಿ ಖಾತೆ ಸಂಖ್ಯೆ 64110358330 ಇಲ್ಲಿಗೆ ನೆಫ್ಟ್ ಮೂಲಕ ಚಂದಾ ಮೊತ್ತವನ್ನು (ರೂ. 170/–) ವರ್ಗಾವಣೆ ಮಾಡಿ (ನಗದು ಕಟ್ಟುವುದು ಮಾತ್ರ ಬೇಡ) 9449242284 ಈ ಸಂಖ್ಯೆಗೆ ಖಚಿತಪಡಿಸಿ ತಮ್ಮ ವಿಳಾಸ ಕಳಿಸಬೇಕು.–ಸಂ.

ಕಥೆ

# ಅಪರಾಧಿ ನಾನಲ್ಲ... ಅಪರಾಧವೆನಗಿಲ್ಲ...

–ಆರ್. ಸಮತಾ ಯುವರಾಜ್



> ಒಂದಿನ ಹೀಗೆ ಬೈಯ್ದುಕೊಳ್ಳುತ್ತಾ ಬಟ್ಟೆ ಒಗಿತಾ ಇದ್ದೆ "ಗಂಡನ ಮೇಲಿನ ಸಿಟ್ಗೆ ಆ ಬಟ್ಟೆ ಏನ್ಮಾಡದೂ!" ಅಂದ್ರು ಯಾರೋ. ನೋಡಿದ್ರೆ ಅವ್ನು ಬೇಲಿ ಪಕ್ಕದ ಮರಕ್ಕೆ ಒರಗಿ ನಗುತ್ತಾ ನಿಂತಿದ್ದ. ನನಗೂ ನಗು ಬಂತು "ನಿಂಗೂ ಹೆಡ್ತಿ ಬರಲಿ ನೋಡ್ತಿನಿ ಹೆಂಗಿರಿಸಿಕೋಳ್ತೀಯಾ ಅಂತಾ" ಅಂದೆ. ಅದಕ್ಕವನು 'ಹೆಂಗಿರಿಸ್ತೀನಿ, ಹೇಳ್ಲಾ?' ಎಂದು ಹತ್ರ ಬಂದ. ಅಷ್ಟೇ... ಮುಂದೆ ನನ್ನ ಮೈಮೇಲಿನ ಪ್ರಜ್ಞೆ ನನಗೆ ಕಳೆದು ಹೋಯ್ತು. ಒಂದಿಷ್ಟು ದಿನ ನಾನು ನಾನಾಗಿರಲಿಲ್ಲ. ಲೋಕವೆಲ್ಲಾ ಮರೆತು ಹೋಯ್ತು. ಗಂಡ ಮನೆ ಮಕ್ಕಳು ಕಾಣದಾದ್ರು.... ಒಂದಿನ ಶಂಕ್ರಂಗೆ ಗೊತ್ತಾದಾಗ ನಂಗೆ ಪ್ರಜ್ಞೆ ಬಂತು. ಆ ದಿನ ಶಂಕ್ರ ಎಲ್ಲಾ ಮುಗಿಸಿ ಬಿಟ್ಟ. ರಾಕ್ಷಸಾವತಾರ ಅಂದ್ರೆ ಏನೂಂತ ಅವತ್ತೇ ನನಗೆ ಗೊತ್ತಾದದ್ದು,..." ಎಂದು ಬಿಕ್ಕಳಿಸಲು ಪ್ರಾರಂಭಿಸಿದಳು.

**ನಾ**ಲ್ಕೈದು ವರ್ಷಗಳಿಂದ ಊರಿಗೆ ಹೋಗಬೇಕೆಂದುಕೊಂಡಿದ್ದರೂ ವಿಭಾಳಿಗೆ ಹೋಗಲಾಗಿರಲಿಲ್ಲ. ಊರೆಂದರೆ ಅವಳ ತವರುಮನೆಯಲ್ಲ. ಗಂಡ ರವಿಯ ಹುಟ್ಟಿದೂರು. ತಂದೆ ತಾಯಿಗೆ ಏಕೈಕ ಕುಲಪುತ್ರನಾಗಿದ್ದ ಅವಳ ಗಂಡನ ಒಂದು ಚಿಕ್ಕ ತೋಟ, ಮನೆ ಇರುವುದು ಅಲ್ಲೇ. ವಿಭಾಳ ಅತ್ತೆ ಮಾವ ತೀರಿಕೊಂಡ ಬಳಿಕ ತೋಟ, ಮನೆ ನೋಡಿಕೊಳ್ಳಲು ರವಿಯ ದೂರದ ಸಂಬಂಧಿಯಾದ ಕಮಲತ್ತೆ, ಕುಮಾರ್ಮಾವ ಅಲ್ಲೇ ನೆಲೆಸಿದ್ದಾರೆ. ರವಿ, ವಿಭಾ ಇಬ್ಬರೂ ನಗರವೊಂದರಲ್ಲಿ ಉದ್ಯೋಗಸ್ಥರಾದ್ದರಿಂದ ಊರಿಗೆ ಹೋಗಿ ಬರಲು ಸಮಯ ಹೊಂದಿಸುವುದೇ ಒಂದ ದೊಡ್ಡ ತಲೆನೋವು. ರವಿ ಮಾತ್ರ ಆಗಾಗ್ಗೆ ಹೋಗಿ ತೋಟದ ವರಮಾನದಲ್ಲಿ ಸ್ವಲ್ಪ ಪಡೆದು, ಉಳಿದುದನ್ನು ಕಮಲತ್ತೆ ಮನೆಯವರಿಗೆ ಖರ್ಚಿಗೆ, ತೋಟದ ವ್ಯವಸ್ಥೆಗೆ ನೀಡಿ ನೆಂಟರಿಷ್ಟರನ್ನೆಲ್ಲಾ ಮಾತನಾಡಿಸಿ ಬರುತ್ತಿದ್ದರೂ ವಿಭಾ ಮಾತ್ರ ಊರಿಗೆ ಹೋಗಲು ಮಕ್ಕಳ ಶಾಲೆಯ ರಜೆಗಳು ಬರುವುದನ್ನೇ ಕಾಯಬೇಕಿತ್ತು.

ಅಂತೂ ದಸರಾ ರಜೆಗಳು ಪ್ರಾರಂಭವಾಗಿ ಮಕ್ಕಳು 'ಅಮ್ಮ, ಎಲ್ಲಾದರು ಕರೆದುಕೊಂಡು ಹೋಗು' ಎಂದು ವರಾತ ತೆಗೆದಾಗ , ರವಿ "ಹೆಂಗೂ ಊರಬ್ಬನೂ ಹತ್ರ ಬಂದದಲ್ವಾ, ನೀನೂ ಹುಡುಗ್ರು ಹೋಗ್ಬುಟ್ ಬನ್ನಿ, ಈ ಸತಿ ನಂಗೂ ಆಫೀನಿಂದ ಟ್ರೈನಿಂಗ್ ಹಾಕವ್ರಲಾ, ನಾನು ಬರಕಾಕ್ಕಿಲ್ಲ" ಎಂದ.

ಹೆಂಗೂ ದಸರಾ ರಜೆಯಲ್ಲಿನ ಸಾಲು ಸಾಲು ಹಬ್ಬಗಳಿಂದಾಗಿ ಸಿಗುವ ರಜೆಗಳ ಜೊತೆಗೆ ಇನ್ನೂ ನಾಲ್ಕು ದಿನ ಕೆಲಸಕ್ಕೆ ರಜಾ ಹಾಕಿ, ರವಿಗೆ ನಾಲ್ಕೈದು ದಿನಗಳಿಗಾಗುವಷ್ಟು ಅಡಿಗೆ ಬೇಯಿಸಿ ಫ್ರಿಡ್ಜ್‌ನಲ್ಲಿಟ್ಟು, ಮಕ್ಕಳನ್ನು ಹೊರಡಿಸಿಕೊಂಡು ಊರಿನ ಬಸ್ಸೇರಿದಳು.

ರಜಾದಿನಗಳಾದ್ದರಿಂದ ಕಿಕ್ಕಿರಿದು ತುಂಬಿದ್ದ ಬಸ್ ಹತ್ತುವುದೇ ಒಂದು ಸಾಹಸವಾಗಿ, ಹೇಗೋ ಹತ್ತಿ ಸೀಟು ಹಿಡಿದು ನುಸುಳಿ ಇಳಿಯುವಷ್ಟರಲ್ಲಿ ಸಾಕು ಸಾಕಾಯ್ತು. ಇಳಿಯುವಾಗ ಎಷ್ಟೇ ಜೋಪಾನ ಮಾಡಿದರೂ ಮಗ ಬಸ್ಸಿನ ಬಾಗಿಲ ಬಳಿ ಜಾರಿ ಬಿದ್ದ ರಭಸಕ್ಕೆ ಅವನ ಕೈ, ಕಾಲು ಮಂಡಿಗಳೆಲ್ಲಾ ತರಚಿ ಹೋಗಿ ರಕ್ತ ಜಿನುಗಲಾರಂಭಿಸಿತು. ರಕ್ತ ನೋಡಿ ಗಾಬರಿಯಾದ ಅವಳು ಹೇಗೋ ಲಗ್ಗೇಜ್ ಮತ್ತು ಮಕ್ಕಳಿಬ್ಬರನ್ನೂ ಅವಚಿಕೊಂಡು ಬಸ್ ನಿಲ್ದಾಣದ ಪಕ್ಕದಲ್ಲೇ ಇದ್ದ ಸಮುದಾಯ ಆರೋಗ್ಯ ಕೇಂದ್ರಕ್ಕೆ ಧಾವಿಸಿದಳು. ಮಗುವಿನ ಕೈ ಕಾಲಿನ ರಕ್ತ ನೋಡಿದ ಜನ "ಒಳಗಿರುವವರು ಬಂದ ಮೇಲೆ ನೀವೇ ಮೊದಲು ಹೋಗ್ರಮ್ಮ" ಎಂದು ಹೇಳಿ ಕ್ಯೂನಲ್ಲಿ ಜಾಗ ಬಿಟ್ಟು ಕೊಟ್ಟರು. ಒಳಗಿರುವವರು ಯಾವಾಗ ಹೊರಬರುವರೆಂದು ಕಾಯುತ್ತಾ ವಿಭಾ ಬಾಗಿಲಲ್ಲೇ ಮಗನ ಕೈ ಹಿಡಿದುಕೊಂಡು ನಿಂತಳು.

ಒಳಗೆ ಡಾಕ್ಟರ್ ಯಾರೊಂದಿಗೋ ಏರು ಧ್ವನಿಯಲ್ಲಿ ಮಾತನಾಡುತ್ತಿದ್ದುದು ಕೇಳಿಸಿತು. 'ಏನಮ್ಮಾ ತಲೆ ಸರಿಯಿಲ್ವಾ ನಿಂಗೂ, ನಿನ್ ಗಂಡಂಗೂ, ಇದು ಆರನೇ ಅಬಾರ್ಷನ್‌ಗ ನೀನು ಬಂದಿರುವುದು! ಆಪರೇಶನ್ ಮಾಡ್ಸಿಕೊಳ್ಳೋಕೆ ಏನ್ ರೋಗ ನಿಂಗೆ? ನಿನ್ನನ್ನು ನೀನು ಯಾವತ್ತಾದ್ರೂ ಕನ್ನಡಿಯಲ್ಲಿ ನೋಡಿಕೊಂಡಿದ್ದೀಯಾ? ನಿನ್ನ ಮೈಯಲ್ಲಿ ರಕ್ತ ಮಾಂಸ ಏನಾದ್ರೂ ಇದಿಯಾ? ಮೊದ್ಲು ಚೆನ್ನಾಗಿ ಉಂಡು, ತಿಂದು ತಯಾರಾಗು. ಮತ್ತೆ ಅಬಾರ್ಷನ್ಗೆ ಎಂದು ಬಂದ್ರೆ ನಿನ್ನ ಗಂಡನ ಮೇಲೆ ಕ್ರಿಮಿನಲ್ ಕೇಸ್ ಹಾಕಿಸ್ತೀನಿ ಅಷ್ಟೇ. ಈಗ ಹೋಗು. ನಾಳೆ ನಿನ್ನ ಮೂರ್ಖ ಗಂಡನ್ನ ಕರ್ಕೊಂಡು ಬಾ. ಅವ್ನಿಗೆ ಚೆನ್ನಾಗಿ ಬುದ್ಧಿ ಹೇಳ್ಬೇಕು" ಎಂದು ಹೇಳಿ, ಆ ಹೆಂಗಸನ್ನು ಆಚೆ ಹೋಗಲು ಹೇಳಿ 'ನೆಕ್ಸ್ಟ್' ಎಂದರು. ಇನ್ನೂ ಗಾಬರಿಯಲ್ಲೇ ಇದ್ದ ವಿಭಾ ಹೊರ ಬಂದವಳನ್ನು ಎಲ್ಲೋ ನೋಡಿದ್ದೇನೆ ಎಂದೆನಿಸಿದರೂ ಅದರ ಬಗ್ಗೆ ತಕ್ಷಣಕ್ಕೆ ಯೋಚಿಸದೆ, ಮಗನನ್ನು ಎಳೆದುಕೊಂಡು ಒಳನುಗ್ಗಿದಳು. ಗಾಯಕ್ಕೆ ಮುಲಾಮು, ಬ್ಯಾಂಡೆಜ್ ಟೆಟನಸ್ ಚುಚ್ಚುಮದ್ದು ಎಲ್ಲಾ ಆದ ಬಳಿಕ ನಿರಾಳವೆನಿಸಿ, ಡಾಕ್ಟರ್‌ಗೆ ವಂದಿಸಿ ಆಚೆ ಬಂದಳು.

ಇನ್ನು ಮನೆ ತಲುಪಲು ಆಟೋ ಏನಾದ್ರೂ ಸಿಗಬಹುದಾ ಎಂದು ಆಚೀಚೆ ನೋಡುತ್ತಿರುವಾಗ ಹಿಂದಿನಿಂದ ಯಾರೋ 'ವಿಭಕ್ಕ' ಎಂದಂಗಾಯ್ತು. ಯಾರಪ್ಪ ಇದು ಎಂದು ಕೊಳ್ಳುತ್ತಾ ಹಿಂದಿರುಗಿ ನೋಡಿದರೆ ಅದೇ ಅಬಾರ್ಷನ್ ಕೇಸಿನ ಹೆಂಗಸು. ಹತ್ತಿರ ಬಂದು 'ಯಾಕಕ್ಕ, ನನ್ನ ಪತ್ತೆಯಾಗ್ಲಿಲ್ವ?' ಎಂದಳು.

ನಿಧಾನವಾಗಿ ವಿಭಾಳಿಗೆ ಗುರುತು ಹತ್ತತೊಡಗಿತು. "ಅರೆ! ನೀನು ಶಂಕ್ರನ ಹೆಂಡ್ತಿ ಜ್ಯೋತಿಯಲ್ವಾ! ಗುರುತೇ ಸಿಗದಂಗಾಗಿದ್ದೀಯಲ್ಲಾ!" ಎನ್ನುತ್ತಾ ವಿಭಾ, ಜ್ಯೋತಿಯ ಮನೆ ತನ್ನ ಮನೆಯ ಪಕ್ಕದ್ದೇ ಆದ್ದರಿಂದ ಆಟೋವೊಂದನ್ನು ಕರೆದು ಜೊತೆಯಲ್ಲಿ ಹೊರಟರು. ಔಪಚಾರಿಕ ಕ್ಷೇಮ ಸಮಾಚಾರಗಳ ಮಾತಾದ ಮೇಲೆ ವಿಭಾ, "ಏನಾಯ್ತು ನಿಂಗೆ? ಡಾಕ್ಟರ್ ಹತ್ರ ಅಷ್ಟೊಂದು ಬೈಯ್ಸಿಕೊಂಡ್ಯಲ್ಲಾ ನೀನು ಓದಿದ ಹುಡ್ಗಿ, ಅಷ್ಟೊಂದು ತಿಳುವಳಿಕೆ ಇದ್ದೋಳು. ಇದೇನು ಹಿಂಗ್ ಮಾಡ್ಕೊಂಡಿದ್ದೀಯಲಾ" ಎಂದು ವಿಚಾರಿಸುತ್ತಾ ಅವಳನ್ನೇ ದಿಟ್ಟಿಸಿ ನೋಡಿದಳು.

"ಎಲ್ಲಾ ನನ್ನ್ ಕರ್ಮ, ಏನಂತಾ ಹೇಳ್ಲಿ ನಾನು, ಇದೆಲ್ಲಾ ಇದ್ದಿದ್ದೇ, ನಡೀರಿ' ಎನ್ನುತ್ತಾ ನಿಟ್ಟುಸಿರು ಬಿಡುವ ಹೊತ್ತಿಗೆ ಮನೆ ಬಂದು. 'ಬರ್ತಿನಿ ಕಣಕ್ಕಾ, ಹೋಗೋ ಮುಂಚೆ ಮನೆ ಕಡೇ ಬಂದು ಹೋಗಿ' ಎನ್ನುತ್ತಾ ಕೈ ಬೀಸಿ, ಅವಳ ಮನೆ ಹೊಕ್ಕು ಮರೆಯಾದಳು.

ಮನೆ ಒಳ ಸೇರಿ ಲಗ್ಗೇಜ್ ಕೆಳಗಿರಿಸಿ 'ಅತ್ತೇ' ಅನ್ನುವಷ್ಟರಲ್ಲಿ ಹೊರಬಂದ ಕಮಲತ್ತೆ ಮಗನ ಕೈ ಕಾಲಿನ ಬ್ಯಾಂಡೇಜ್ ನೋಡಿ ಗಾಬರಿಯಾದರು. "ಇದ್ಯಾಕ್ ಮಗ ಹಿಂಗಾಯ್ತು! ಎಲ್ಲಿ ಬೀಳ್ತು ಮಗ, ಬ್ಯಾಂಡೇಜ್ ಎಲ್ಲಿ ಕಟ್ಟಿಸ್ದೆ?" ಎಂದೆಲ್ಲಾ ಕೇಳುತ್ತಾ ಮೊಮ್ಮಗನನ್ನು ತಬ್ಬಿಕೊಂಡರು. ಕುಳಿತುಕೊಂಡು ಸುಧಾರಿಸಿಕೊಳ್ಳುತ್ತಾ ಮಗ ಬಿದ್ದ ಕತೆಯನ್ನು ಸವಿಸ್ತಾರವಾಗಿ ಹೇಳಿದ ಬಳಿಕ ವಿಭಾ ಜ್ಯೋತಿಯನ್ನು ನೋಡಿ ತನಗಾದ ಗಾಬರಿಯನ್ನು ಹೇಳುತ್ತಾ,

"ಅಲ್ಲ ಕಣತ್ತೆ, ಆ ಶಂಕ್ರನೆಡ್ತಿ ಜ್ಯೋತಿ ಅದ್ಯಾಕ್ ಹಂಗಾಗವ್ಳೆ? ಡಾಕ್ಟ್ರು ವಸಿ ಬೈಯ್ಲಿಲ್ಲ ಅವ್ಳ್ಗ. ಈ ಕಾಲ್ದಲ್ಲೂ ಹಿಂಗ್ ಮಾಡ್ಕೋಂಡಾರಾ ಯಾರಾದ್ರೂ! ಆರನೇ ಅಬಾರ್ಷನ್ ಎಂದ್ರೆ ಏನು ತಮಾಷೆಯಾಟನಾ? ಆ ಶಂಕ್ರಂಗಾದ್ರೂ ಗೋತ್ತಾಗ್ಬಾರಾದ? ಆಪರೇಷನ್ ಮಾಡಿಸ್ಕೊಳ್ದೆ ಹಿಂಗ್ ಮಾಡ್ಕೊಂಡವಲ್ಲಾ ಆ ದಡ್ಡ್ ಜನಗಳು" ಎಂದಳು.

ವಿಭಾಳ ಮಾತು ಕೇಳಿದ ಕಮಲತ್ತೆ ನಿಟ್ಟುಸಿರು ಬಿಡುತ್ತಾ, "ಆಯ್ಯೊ ಮಗಾ ಅದೊಂದ್ ದೊಡ್ಡ್ ಕತೆ. ನಾನು ಶಂಕ್ರಂಗೆ ಹೇಳಿ ಹೇಳಿ ಸಾಕಾದೆ. ಮೊದ್ಲು ಅವ್ಳಿಗೊಂದು ಆಪ್ರೇಷನ್ ಮಾಡ್ಸು, ಆಮೇಲೆ ಎಷ್ಟಾದ್ರೂ ಅವ್ಳತ್ರ ಜಗ್ಳ ಕಾಯ್ಕೋ ಅಂತ", ಅದಕ್ಕವ್ನು "ಆಪ್ರೇಷನ್ ಮಾಡ್ಸುದ್ರೆ ಈ ಬಡ್ಡೀನಾ ಹಿಡಿಯಕ್ಕಾದದಾ ದೊಡ್ಡವ್ವ, ಅನುಭವಿಸ್ಲಿ ಬಿಡು ಅಂದ. ನಾನಿನ್ನೇನ್ ಹೇಳ್ಲಿ. ನೀನೇ ಕಂಡಿದೀಯಲ್ಲಾ ಅವರಿಬ್ರನ್ನು ಮದ್ವೆಯಾದಾಗಿಂದ" ಎಂದ್ರು. ಕಮಲತ್ತೆಯನ್ನೇ ಸ್ವಲ್ಪ ಹೊತ್ತು ಮೂಕವಾಗಿ ದಿಟ್ಟಿಸಿದ ವಿಭಾಳಿಗೆ 'ಕಮಲತ್ತೆ ಮತ್ತು ಕುಮಾರಣ್ಣ ಇರ್ದೆ ಹೋಗಿದ್ರೆ ಈ ಮನೆ ತೋಟ ಎಲ್ಲಾ ಪಕ್ಕದ್ಮನೆ ಶಂಕ್ರಂಗೆ ಮಾರಿಕೊಳ್ಬೇಕಿತ್ತಲ್ಲಾ' ಅನಿಸಿತು. ಶಂಕ್ರನ ನೆನಪಾದಾಗ ಹತ್ತು ವರ್ಷಗಳ ಹಿಂದೆ ಶಂಕ್ರನ ಮದುವೆಗೆ ಕಮಲತ್ತೆಯೊಡಗೂಡಿ ಹೋಗಿದ್ದು ನೆನಪಾಗುತ್ತಾ ಹೋಯಿತು.

*** *** ***

"ಬೇಗ ಬೇಗ... ಬಸ್ನಾಗ್ಲೇ ಬಂದ್ ನಿಂತಿದೆ. ಲೇಟಾದ್ರೆ ಆ ಊರಿಗೋಗೋಗಂಟ ನಿಂತ್ಕೋಂಡ್ ಹೋಗಬೇಕು. ತಾಳಿ ಕಟ್ಟೋ ಹೊತ್ಗೆ

ಹೋಗ್ಬಾರ್ದಾ.. ಲೇಟಾಗೋದ್ರೆ ಬರಿ ಊಟಕ್ಕೋದಂಗಾಯ್ತದೆ' ಎನ್ನುತ್ತ ಅವಸವಸರವಾಗಿ ಕಮಲತ್ತೆ ವಿಭಾಳನ್ನ ಹೊರಡಿಸಿ ದಿಬ್ಬಣದ ಬಸ್ ಹತ್ತಿಸಿದ್ದರು. ಮದುವೆಯಿದ್ದದ್ದು ಹುಡುಗಿಯ ಊರಿನ ಒಂದು ಸಣ್ಣ ಛತ್ರದಲ್ಲಿ. ಹುಡುಗನ ಕಡೆಯಿಂದ ಒಂದು ಬಸ್ ಜನ. ಹುಡುಗಿಯ ಕಡೆಯಿಂದ ಒಂದೈವತ್ತು ಜನರಷ್ಟೇ ಇದದ್ದು ಛತ್ರದಲ್ಲಿ. ಸ್ವಲ್ಪ ತಡವಾಗಿ ಮದುವೆಯಾಗುತ್ತಿದ್ದ, ಅಷ್ಟೇನೋ ಓದಿರದ, ಸಾಧಾರಣ ರೂಪದ ಶಂಕ್ರನಿಗೆ ಹೆಣ್ಣು ಸಿಗುವುದು ಕಷ್ಟವಾಗಿ ಕೊನೆಗೆ ಬಡವರ ಮನೆಯ ಹುಡುಗಿಯೊಬ್ಬಳನ್ನು ಎರಡು ಕಡೆಯ ಖರ್ಚನ್ನೆಲ್ಲಾ ತಾನೇ ವಹಿಸಿಕೊಂಡು ಮದುವೆಯ ವ್ಯವಸ್ಥೆ ಮಾಡಿಕೊಂಡಿದ್ದ. ಕಮಲತ್ತೆಯ ಅಭಿಪ್ರಾಯದ ಪ್ರಕಾರ ಅವನು ತನ್ನ ವಯಸ್ಸಿಗೆ ತಕ್ಕ ವಯಸ್ಸಿನ, ತನ್ನ ಮನೆಯ ಕೆಲಸ ಗೊತ್ತಿರುವ ಗಟ್ಟಿ ಹೆಣ್ಣೊಂದ ಹುಡುಕಿ ಮದುವೆಯಾಗದೆ, ಬಡವರಾದರೂ ಅಲ್ಪ ಸ್ವಲ್ಪ ವಿದ್ಯೆ ಕಲಿತಿದ್ದ, ನಾಜೂಕಿನ, ತನಗಿಂತಲೂ ಹದಿನೈದು ವರ್ಷ ಚಿಕ್ಕ ವಯಸ್ಸಿನ ಹುಡುಗಿಯನ್ನು ಮದ್ವೆಯಾಗುತ್ತಿದ್ದ.

ಛತ್ರ ತಲುಪಿದಾಗ ವರನನ್ನು ಧಾರೆಗೆ ನಿಲ್ಲಿಸಲಾಗಿತ್ತು. ಹುಡುಗಿಯನ್ನು ಅವಳ ಸೋದರ ಮಾವ ಕರೆದುಕೊಂಡು ಬಂದು ಧಾರೆಗೆ ನಿಲ್ಲಿಸುತ್ತಿದ್ದಾಗಲೇ ವಿಭಾ ಮೊದಲನೆಯ ಬಾರಿಗೆ ಜ್ಯೋತಿಯನ್ನು ನೋಡಿದ್ದು. ಎತ್ತರದ ನಿಲುವಿನ, ಮೊಣಕಾಲುದ್ದ ಜಡೆಯುಳ್ಳ, ದೊಡ್ಡ ದೊಡ್ಡ ಕಣ್ಣುಗಳ, ಹಾಲಿನ ಕೆನೆ ಬಣ್ಣದ ಹುಡುಗಿ. ಬಹಳ ಆಕರ್ಷಕವಾಗಿ ಕಂಡಳು. ಆದರೆ ಕಣ್ಣೆಲ್ಲಾ ಕೆಂಪಾಗಿ, ಸೋತ ಹೆಜ್ಜೆಗಳೊಂದಿಗೆ ಮಂಟಪ ಸುತ್ತಿ ಅಂತರ್ಪಟದ ಎದುರಿಗೆ ತಲೆ ತಗ್ಗಿಸಿ ನಿಂತ ಅವಳನ್ನು ನೋಡಿ ಯಾಕೋ ವಿಭಾಳಿಗೆ ಕನಿಕರವೆನಿಸಿತ್ತು.

ಮದುವೆ ಶಾಸ್ತ್ರವೆಲ್ಲಾ ಮುಗಿದು ಆರತಕ್ಷತೆಗೆ ನಿಲ್ಲಿಸಿದ್ದ ದಂಪತಿಗಳಿಗೆ ಉಡುಗೊರೆಯ ಲಕೋಟೆ ಕೊಡಲು ಹೋಗುತ್ತಿದ್ದಾಗ ಕಮಲತ್ತೆ ಸುಮ್ಮನಿರದೆ, "ಇದೇನ್ಮಗಾ ಈಡು-ಜೋಡು ಏನೂ ಇಲ್ದಂಗೆ ಈ ಮದ್ವೆ ಮಾಡವ್ರಲ್ಲ. ಒಳ್ಳೆ ಅಕ್ಕಿನೂ ಎಳ್ಳೂ ಬೆರೆಸ್ದಂಗದಲ್ಲಾ ಜೋಡಿ. ಅದೆಂಗ್ಮಗಾ ಅವನ್ಜಕ್ಕಾ ಮನಿಕೊತ್ತಾಳೆ" ಎಂದು ಪಿಸಿ ಪಿಸಿ ನಗಾಡಿದರು. "ನೀನೇನ್ಮನಿಕೋ ಬೇಕಾ, ಬುಡುತ್ತೆ! ಹೆಡ್ತಿ ಅನ್ನಿಸ್ಕೊಂಡ್ಮೇಲೆ ಮನಿಕ್ಕೊಳ್ದೆ ಇನ್ನೇನ್ಮಾಡಳು? ನೀನು ಸುಮ್ನಿರು, ಯಾರಾದ್ರೂ ಕೇಳುಸ್ಕೊಂಡ್ರೆ!' ಎಂದು ಮೆಲ್ಲನೆ ಗದರಿಸಿದಳು ವಿಭಾ.

"ಏನೋ ಕಣವ್ವಾ, ಅನ್ನಿಸಿದ್ದು ಹೇಳ್ದೆ. ನೋಡೋಕೆ ಸುಮಾರಾಗಿದ್ರೂ ಹುಡ್ಗ ಚೆನ್ನಾಗಿ ಗೇಯ್ತಾನೆ. ಹೊಲ, ತೋಟ, ದನ, ಕರ ನಿಗಾ ಇಟ್ಕಂಡ್ ಚೆನ್ನಾಗಿ ಹೂವಿನಂಗೆ ನೋಡಿಕೊಳ್ತಾನೆ ಬುಡು" ಅನ್ನುತ್ತಾ ಕಮಲತ್ತೆ ಮಾತು ಸರಿ ಮಾಡಿಕೊಳ್ಳಲು ಯತ್ನಿಸಿದರು.

ಉಡುಗೊರೆ ನೀಡಿ ಹಾರೈಸಿ, ಊಟ ಮುಗಿಸಿಕೊಂಡು ಹೆಣ್ಣು-ಗಂಡು ಕರೆದುಕೊಂಡು ಹೋದ ಬಸ್ಸಿನಲ್ಲೇ ಮರಳಿ ಹಿಂತಿರುಗಿ ಬಂದು ಊರು ಸೇರಿದ್ದಾಯಿತು. ರಾತ್ರಿ ವಿಭಾ ಹುಡುಗಿಯನ್ನು ಮಾತನಾಡಿಸಿದಾಗ ಮೆಲ್ಲನೆ ತನ್ನ ತಂದೆ ತಾಯಿ ಅಣ್ಣ ಓದಿದ್ದು ಇತ್ಯಾದಿ ವಿವರಗಳನ್ನೆಲ್ಲಾ ಹೇಳಿದಳು. "ಪಿಯುಸಿ ಓದಿದ್ದೀನಿ ಕಣಕ್ಕ ಮುಂದೆ ಓದ್ಬೇಕು ಅಂದ್ಕೊಂಡಿದ್ದೆ, ಅದಕ್ಕೇಲ್ಲಾ ದುಡ್ಡಿಲ್ಲಾ ಅಂತೇಳಿ ನಮ್ಮಪ್ಪ ನನ್ನ ಮದ್ವೆ ಮಾಡಿ ಕಳ್ಸಿದ್ರು" ಎಂದೇಳಿ ಮೌನವಾದಳು.

"ಇಲ್ಲ ಬಿಡಪ್ಪಾ, ಈಗೇನು ಕಮ್ಮಿ ನಿನಗೆ? ಒಳ್ಳೇ ಗಂಡ, ಮನೆ ಸಿಕ್ಕಿದೆ. ಚೆನ್ನಾಗಿ ಸಂಸಾರ ಮಾಡಿಕೊಂಡು ಹೋಗು" ಎಂದೆನ್ನುತ್ತಾ ವಿಭಾ ಜ್ಯೋತಿಗೆ ಸಮಾಧಾನ ಹೇಳಿದಳು.

ಮತ್ತೆ ನಗರಕ್ಕೆ ಹಿಂದಿರುಗಿದ ವಿಭಾ ಗಂಡ, ಮನೆ, ಮಕ್ಕಳು ಕೆಲಸ ಎಂತೆಲ್ಲಾ ಮುಳುಗಿ ಹೋದಳು. ವರ್ಷಕ್ಕೊಂದೋ, ಎರಡೋ ಬಾರಿ ಊರಿಗೆ ಹೋಗಿ ಕಮಲತ್ತೆಯೊಂದಿಗೆ ನೆಂಟರಿಷ್ಟರ ಬಗೆಗೆಲ್ಲಾ ಹರಟೆ ಹೊಡೆದು ನೆಂಟರಿಷ್ಟರ ಮನೆಗೆಲ್ಲಾ ಹೋಗಿಬರುವುದು ನಡೆದೇ ಇತ್ತು. ಹಾಗೇ ನಾಲ್ಕೈದು ವರ್ಷಗಳ ಹಿಂದೆ ಶಂಕರ- ಜ್ಯೋತಿಯ ಮನೆಗೂ ಹೋಗಿದ್ದಳು. ಹುಡುಗಿ ಸ್ವಲ್ಪ ದಪ್ಪವಾಗಿದ್ದಳು. ಮೂರು ವರ್ಷಗಳಲ್ಲಿ ಎರಡು ಮಕ್ಕಳೂ ಆಗಿದ್ದವು. ಮೊದಲಿನಂತೆ ಮೌನಗೌರಿಯಾಗಿರದೆ ಗಂಡ, ಮನೆ ಮಕ್ಕಳು ಎಂದೆಲ್ಲಾ ಹರಟಿದಳು. 'ಮುಂದೆ ಓದ್ಬೇಕು ಅದ್ಕೊಂಡಿದ್ದೆಲ್ಲಾ ಏನ್ಮಾಡ್ದೆ?' ಎಂದಿದಕ್ಕೆ, 'ಅಯ್ಯೋ ಅಕ್ಕಾ ಮನೆ, ತೋಟ, ದನ ಕರ ಮಕ್ಕಳು ನೆಂಟರು ಅಂತ ನೋಡೋದೇ ಆಯ್ತು. ನಮ್ಮೂರ್ಗೆ ಮೂರು ಮೂರು ತಿಂಗಳು ಎರಡು ಬಾರಿ ಬಾಣಂತನಕ್ಕೆ ಹೋಗಿದ್ದೆಷ್ಟೋ ಅಷ್ಟೆ. ಅಲ್ಲಿಗೂ ಹೋಗೋಕೆ ಪುರುಸೊತ್ತಾಗಿಲ್ಲ. ಇನ್ನು ಇವ್ರಿಗೆ ತೋಟ, ಗದ್ದೆ ಬಿಟ್ರೆ ಇನ್ನೇನೂ ಬೇಡ. ನಮ್ಮತ್ತೆ ಮೆತ್ತಗಾಗಿದೆ. ಕೈಲಿ ಕೆಲಸ ಹರಿಯೋದಿಲ್ಲ ಇನ್ನೇನ್ ಮಾಡ್ಲಿ. ಸಾಕು ಓದಿರೋದು, ನನ್ನ ಮಕ್ಕಳ ಓದಿಸ್ಕೊಂಡ್ರಾಯ್ತು ಎಂದು ಸುಮ್ಮನಾದೆ' ಎಂದಿದ್ದಳು.

ಅದಾದ ಬಳಿಕ ಆಗಾಗ ಊರಿಗೆ ಬಂದಾಗ ಅಷ್ಟಿಷ್ಟು ಕಾಣುವುದು ಮಾತನಾಡುವುದು ಇದ್ದೇ ಇತ್ತು ಮಧ್ಯದಲ್ಲಿ ಒಂದೆರಡು ವರ್ಷ ತನ್ನ ಹೊಸ ಮನೆ, ಗೃಹ ಪ್ರವೇಶ ಎಂದೆಲ್ಲಾ ವಿಭಾಳಿಗೆ ಊರಿಗೆ ಬರಲಾಗದೆ ಈಗಲೇ ಜ್ಯೋತಿಯನ್ನು ಕಂಡಿದ್ದು. 'ಏನೋ ಎಲ್ಲಾ ವಿಚಿತ್ರವಾಗಿದೆ, ನಿಧಾನವಾಗಿ ಕಮಲತ್ತೆಯಲ್ಲಿ ವಿಚಾರಿಸಿ ಕೊಂಡರಾಯ್ತು' ಎಂದುಕೊಂಡು ಊಟಕ್ಕೆ ಕರೆದ ಕಮಲತ್ತೆಯನ್ನು ಹಿಂಬಾಲಿಸಿ ಆಡುಗೆ ಮನೆ ಕಡೆ ನಡೆದಳು.

ಮಾರನೇ ದಿನ ಊರಲ್ಲಿ ಎಲ್ಲರ ಮನೆಯಲ್ಲೂ ಹಬ್ಬದ ಗಮಲೋ ಗಮಲು. ಊರಬ್ಬ ಅಂದ್ಮೇಲೆ ಕೇಳಬೇಕೆ? ಮನೆಗೊಂದು ಮರಿ ಕಡಿದು, ಇಲ್ಲವೇ ಚೀಟಿ ಮಾಂಸ ತಂದ್ಕೊಂಡು, ಕೋಳಿ ಕುಯ್ಕೊಂಡು, ನೆಂಟರಿಷ್ಟರನ್ನೆಲ್ಲಾ ಊಟಕ್ಕೆ ಕರೆದು ಊರಿಗೆ ಊರೇ ಹಬ್ಬದ ಸಡಗರದಲ್ಲಿ ಮುಳುಗಿ ಹೋಗಿತ್ತು. ಬೆಳಿಗ್ಗೆಯಿಂದ ಸಂಜೆವರೆಗೆ ಕರೆದವರ ಮನೆಗೆಲ್ಲಾ ಹೋಗಿ 'ಎರಡೇ ಎರಡು ಪೀಸು ಸಾಕು' ಎಂದು ತಿಂದಿದ್ದರೂ ಹಲವಾರು ಮನೆಗಳಲ್ಲಿ ಊಟ ಮಾಡಿದ್ದರಿಂದ ಸಂಜೆಯಾಗುವಷ್ಟರಲ್ಲಿ ವಿಭಾ ಮತ್ತು ಮಕ್ಕಳ ಹೊಟ್ಟೆ ಬಿರಿದೇ ಹೋದಂತಾಗಿತ್ತು. ರಾತ್ರೆ ಮನೆಯಲ್ಲಿ ಮಲಗಿದ್ದಾಗ ಧುತ್ತನೇ 'ಈ ಬಾರಿ ಶಂಕ್ರನ ಮನೆಯಿಂದ ಕರೆಬರಲೇ ಇಲ್ಲವಲ್ಲ' ಎಂದುಕೊಂಡು ಪಕ್ಕದಲ್ಲೇ ಮಲಗಿದ್ದ ಕಮಲತ್ತೆಯನ್ನು ಕೇಳಿದಾಗ 'ಬೆಳಿಗ್ಗೆಗೆ ಹೇಳ್ತೀನಿ, ಸಾಕಾಗದೆ, ಈಗ ಮನಿಕೊಪ್ಪಾ' ಎಂದು ಹೇಳಿದರು.

ಬೆಳಿಗ್ಗೆ ಕಾಫಿ ಮಾಡಿಕೊಟ್ಟು ವಿಭಾಳೊಂದಿಗೆ ಕಮಲತ್ತೆ, "ಹೋದ ತಿಂಗಳು ಶಂಕ್ರನ ಅವ್ವ ಸಣ್ಣಕ್ಕ ತೀರಿಕೊಂಡ್ಳು. ನಿಮಗ್ಯಾರಿಗೂ ಹೇಳಕ್ಕೆ ಆಗ್ಲಿಲ್ಲ. ಅದಿಕ್ಕೆ ಈ ವರ್ಷ ಹಬ್ಬ ಮಾಡಿಲ್ಲ ಅವರ್ಮನೇಲಿ. ಆವಮ್ಮ ಇದ್ದಿದ್ರು ತಾನೆ ಏನು, ಶಂಕ್ರ ಏನು ಹಬ್ಬ ಮಾಡಕ್ಕಾಯ್ತಿತ್ತಾ. ಯಾರ್ಗೂ ಮಕ ತೋರಿಸ್ದಂಗೆ ಮಾಡವ್ಳೆ ಆ ಬಿತ್ರಿ.' ಎಂದು ಹೇಳಿ ನಿಟ್ಟುಸಿರು ಬಿಟ್ಟರು. "ಹೌದಾ ಅತ್ತೆ ನಂಗೊಂದ್ ಮಾತು ಹೇಳ್ಬಾರ್ದಾ ನೀವು ! ಇರ್ಲಿ ಬಿಡಿ ಈಗ್ಲಾದ್ರೂ ಹೋಗಿ ಮಾತಾಡಿಸ್ಕೊಂಡ್ ಬರ್ತೀನಿ ಎನ್ನುತ್ತಾ ಜ್ಯೋತಿ ಮನೆ ಕಡೆಗೆ ನಡೆದಳು.

ಜ್ಯೋತಿ ಮನೆಯ ಹತ್ತಿರ ಹೋದಾಗ ಮುಂಬಾಗಿಲು ಮುಚ್ಚಿತ್ತು. ಬಾಗಿಲು ತಟ್ಟಲೆಂದು ಹೋದರೆ ಮೆಲ್ಲನೆ ತೆರೆದುಕೊಂಡಿತು. ಹಾಲ್‌ನೊಳಗೆ ಅಡಿಯಿಟ್ಟ ವಿಭಾಳಿಗೆ ಕಂಡಿದ್ದು, ಬರಿ ಕತ್ತಲೆಯೇ. ಹಾಲ್‌ನ ಎಲ್ಲಾ ಕಿಟಕಿಗಳು ಮುಚ್ಚಿದ್ದವು. ಮನೆಯೊಳಗೆ ನುಗ್ಗಿ ಒಳಹೋದಾಗೆಲ್ಲಾ ಕತ್ತಲು ಹೆಚ್ಚಾಗುತ್ತಲೇ ಹೋಯಿತು. ಹೋಗುತ್ತಾ, ಹೋಗುತ್ತಾ ಕೊಟ್ಟಿಗೆ ತಲುಪಿದಾಗ ಅಲ್ಲೇ ಮೂಲೆಯಲ್ಲಿದ್ದ ಕುರಿಮರಿಗೆ ಬೇವಿನಸೊಪ್ಪು ಕಟ್ಟುತ್ತಾ ನಿಂತಿದ್ದ ಜ್ಯೋತಿ, ವಿಭಾಳನ್ನು ಕಂಡು 'ಈಗ ಬಂದ್ರಾ ಅಕ್ಕಾ, ಬನ್ನಿ' ಎಂದು ಹಿತ್ತಲಿಗೆ ಕರೆದುಕೊಂಡು ಹೋದಳು. ಬೆಳಕಿನಲ್ಲಿ ಅವಳನ್ನು ನೋಡಿ ವಿಭಾ ಬೆಕ್ಕಸಬೆರಗಾದಳು. ಎಂಥಾ ಅಪ್ಸರೆಯಂತಾ ಹುಡುಗಿ ಹೇಗಾಗಿ ಹೋಗಿದ್ದಳು! ಬಾಚಣಿಗೆ ಕಾಣದ ತಲೆ, ಗುಳಿಬಿದ್ದ ಕಣ್ಣುಗಳು, ಬಾಡಿಹೋದ ಕೆನ್ನೆಗಳು, ಕೈಕಾಲಿಗೆ ಮೆತ್ತಿಕೊಂಡಿದ್ದ ಸಗಣಿ, ಮಣ್ಣೂ. ತುಸುವೇ ಉಬ್ಬಿದ್ದ ಹೊಟ್ಟೆ... 'ಇದೇನ್ ಜ್ಯೋತಿ ನಿನ್ನ ಅವತಾರ? ನಿನ್ನ್ ಗಂಡಂಗೆ ನೀಟಾಗಿರಲ್ಲ ಅಂತ ಬೈಯ್ತಿದ್ದೆ. ಈಗ ನಿಂಗೇನಾಯ್ತು? ಇದ್ದ ಎರಡು ಮಕ್ಳು ಸಾಲ್ದಿತ್ತಾ, ಮತ್ತಿನ್ನೊಂದು ಹೊತ್ಕೊಂಡಿದ್ದೀಯಲ್ಲಾ! ಬುದ್ದಿಗಿದ್ದಿ ಇದೆಯೇನೂ ನಿಂಗ?' ಎಂದು ಬೈಯ್ದಳು. ಜ್ಯೋತಿ ಹೆಚ್ಚು ಮಾತಾಡದೆ. 'ಎಲ್ಲಾ ನನ್ನ ಹಣೆಬರಹ ಅಕ್ಕಾ ಬಿಡಿ. ಬನ್ನಿ ಕಾಫಿ ಮಾಡ್ತೀನಿ' ಎನ್ನುತ್ತಾ ವಿಭಾಳನ್ನು ಅಡುಗೆ ಮನೆಗೆ ಕರೆದೊಯ್ದಳು ಅಡುಗೆ ಮನೆ ಕತ್ತಲೊ ಕತ್ತಲು ಸ್ವಿಚ್ ಹಾಕಿ, ಬಲ್ಬ್ ಉರಿಸಿ ಗ್ಯಾಸ್ ಕತ್ತಿಸಿ ಕಾಫಿಗಿಟ್ಟಳು. ಅಡುಗೆ ಮನೆ ಕಿಟಕಿಗೆ ಕತ್ತರಿಯಾಕಾರಾದಲ್ಲಿ ಎರಡು ಮರದಪಟ್ಟಿ ಹೊಡೆದು ಶಾಶ್ವತವಾಗಿ ಬಂದ್ ಮಾಡಲಾಗಿತ್ತು. ಜ್ಯೋತಿಯ ಬಾಯಿಗೆ ಬೀಗ ಹಾಕಿದಂತಿತ್ತು. ಕೇಳಿದ್ದಕ್ಕೆಲ್ಲಾ 'ಹುಂ, ಇಲ್ಲಾ' ಎನ್ನುವ ಉತ್ತರಗಳು. ಕಷ್ಟದಲ್ಲಿ ಕಾಫಿ ಕುಡಿದು, 'ಬರ್ತಿನಿ ಕಣೆ, ನಮ್ಮೂರಿಗೆ ಬಂದಾಗ ಮನೆಗೆ ಬಾ' ಎನ್ನುತ್ತಾ ವಿಭಾ ಹಿಂದಿರುಗಿದಳು.

ಮನೆಗೆ ಬಂದು, ಅಡುಗೆ ಮನೆ ಹೊಕ್ಕು, ತಿಂಡಿಗೆಂದು ರೊಟ್ಟಿ ಹಾಕುತ್ತಿದ್ದ ಕಮಲತ್ತೆ ಪಕ್ಕಕ್ಕೆ ಮಣೆ ಎಳೆದು ಕುಳಿತುಕೊಂಡಳು. 'ತೊಗೊ ಚಟ್ನಿಗೊಂದು ಬೆಳ್ಳುಳ್ಳಿ ಬಿಡಿಸು' ಎಂದ ಕಮಲತ್ತೆಯೊಂದಿಗೆ ಬೆಳ್ಳುಳ್ಳಿ ಸಿಪ್ಪೆ ಸುಲಿಯುತ್ತಾ ಮಾತಿಗೆ ಶುರುಮಾಡಿ 'ಅದ್ಯಾಕತ್ತೆ, ಸಣ್ಣಕ್ಕ ಸತ್ತಿದ್ದೇ ಸತ್ತಿದ್ದು, ಇಡೀ ಮನೆಗೆ ಗರ ಬಡ್ದಂಗದಲ್ಲಾ! ಮನೆ ಬಿಕೋ ಅಂತಿದೆ. ಜ್ಯೋತಿಗೇನಾಗದೆ ಹಂಗಾಗವ್ಳಲ್ಲಾ?' ಎಂದಳು.

ಅದಕ್ಕವರು "ಏನಂತ ಹೇಳಾದವ್ವಾ, ಕಿಟಕಿಯಿಂದಾಚೆಗೆ ಏನೂ ನೋಡಬಾರದು ಅಂತ ಎಲ್ಲಾ ಕಿಟಾಕಿನೂ ಮುಚ್ಚಿ ಬಿಟ್ಟವ್ನೆ. ಇವ್ಳ ಅಹಂಕಾರವೆ ಇವ್ಳ ಮುರಿತು ತೊಗೋ. ತಲೇಲೇ ನಡೀತಿದ್ಲು, ಕಿಟಕಿಯಿಂದ ನೋಡೋದು ಜಾಸ್ತಿಯಾಯ್ತು. ಹೊಸಲು ಬೇಲಿ ದಾಟಿದ್ಲು ಇನ್ನೇನಾಯ್ತದೆ? ಶಂಕ್ರಂಗೆ ಗೊತ್ತಾಯ್ತು. ಹಸೀನಂಗಿದ್ದ ಮನ್ಸ ತೋಳವಾಗೋದ. ಅವ್ಳ ಹೊಡ್ದು ಬಡ್ದ. ತಾನೂ ಕೊರಗ್ದ. ತೋಟ ಗದ್ದೆ, ದನ, ಕರಗಳ್ನ ನೋಡೋದು ಬುಟ್ಟ. ಅವರವ್ವ ಅದೇ ಕೊರಗಲ್ಲಿ ಸತ್ತೋದ್ಲು. ಹೆಂಗೋ ಅಕ್ಕ ತಂಗೀರು ಬಂದು ನೋಡಿ ಮಾತಾಡಿ ಎಲ್ಲಾ ರಿಪೇರೀ ಮಾಡಿದ್ದಕ್ಕೆ ಹೆಂಗೋ ಏನೋ ಸಂಸಾರ ಉಳ್ಕಂಡದೆ. ಈಗ ಮಕ್ಳುಮಕ ನೋಡ್ಕೊಂಡ್ ಸುಮ್ನವ್ನೆ" ಎಂದು ಎಲ್ಲವನ್ನೂ ಸಾರಾಂಸ ಮಾಡಿದವರಂತೆ ಹೇಳಿದರು.

'ಜ್ಯೋತೀನ ಕೇಳಿದ್ರಾ ಏನಾದ್ರೂ, ಯಾಕ್ಹಿಂಗ್ ಮಾಡ್ದೆ ಅಂತಾ?' ಎಂದ ವಿಭಾ ಮಾತಿಗೆ ಕಮಲತ್ತೆ, 'ಕೇಳ್ದೆ ಕಣವ್ವಾ, ದೊಡ್ಡವ್ವಾ ಮನೆಗೆ ಬಂದ್ ಇದ್ರಾಯ್ತು? ಸಾವಿರ ಸರಿ ಹೇಳೀದ್ರೂ ಇವು ತಮ್ಮ ಕೊಳಾಕುತನ ಬಿಡ್ಲಿಲ್ಲಾ. ಹತ್ರ ಬಂದ್ರೆ ಬರೀ ಬೆವರು-ಬೀಡಿ ವಾಸ್ನೆ, ನನ್ಜೊತೆ ಕೂತು ಒಂದೂಳ್ಳೆ ಮಾತಾಡ್ಲಿಲ್ಲ. ತಂದು ಹಾಕಿದ್ರೆ ಆಗೋಯ್ತ? ಕಷ್ಟ ಸುಖ ಕೇಳೋದ್ ಬೇಡ್ವಾ? ಮನೆಗೊಂದ್ ಪೇಪರ್ ತರೋಸಕೆ ಒಂದ್ವರ್ಷ ಜಗಳ ಮಾಡ್ದೆ. ದಿನಾ ಇಡೀ ಕೆಲ್ಸ ಮಾಡಿ ಸಂಜೆನೋ ರಾತ್ರಿನೋ ಒಂದ್ ನಿಮಿಷ ಪೇಪರ್ ಹಿಡ್ಕೊಂಡ್ ಓದ್ತಾ ಕೂತ್ರೆ ನಮ್ಮತ್ತೆ ಬಂದು ಲೈಟಾಫ್ ಮಾಡಿ ಹೋಯ್ತಾರೆ. ನಮ್ಮನೇವ್ರು, ಯಾರಾದ್ರೂ ಬಂದ್ರೆ ಸಾಕು ಅವ್ವ ಮಗನ ಮುಖ ಇಷ್ಟು ದಪ್ಪ ಆಯ್ತದೆ. ನಾನು ಎಲ್ಲೂ ಹೋಗಂಗಿಲ್ಲ, ಬರಂಗಿಲ್ಲ, ಏನಾದ್ರೂ ಮಾತಾಡಿದ್ರೆ ಸಾಕು ಅವ್ಳಿಗೆ ಜಂಭ. ಅಹಂಕಾರ ಅಂತೀರಾ ನೀವೆಲ್ಲಾ. ಇವರ್ಗೆ ತಕ್ಕಂಗಿರೋರ್ನೇ ಇವ್ರು ಮದ್ವೆಯಾಗ್ಬೇಕಿತ್ತು. ನಾನೇನು ತಟ್ಟೆ, ಲೋಟಾನಾ ಏನೂ ಕೇಳ್ದಂಗಿರಾಕೆ? ನನಗೇನೂ ಅನ್ನಿಸ್ಬಾರಾದ? ನಂಗನ್ಸಿದ್ದೆಲ್ಲಾ ಮಾತಾಡೋಕೆ ಕೇಳಿಕೊಳ್ಳೋಕೆ. ಅಂಥವರು ಸಿಕ್ಕಿದ್ರು, ಮಾತಾಡ್ದೆ. ಅದ್ಕೇ ಅವ್ವ ಮಗ ನನ್ನ ಕಿತ್ಕೊಂಡು ತಿಂದು ಮನೆತನದ ಮರ್ಯಾದೆ ಅಂತ ನನ್ನ ಮನೇಲೇ ಕೂಡಿ ಹಾಕವ್ರೇ ಇನ್ನೇನ್ ಮಾಡ್ಲಿ. ಮಕ್ಳು ತಬ್ಲಿಗಳಾಯ್ತಾರೆ ಅಂತ ಬದ್ಕಿದೀನಿ ಅಂತಾ ಅಳ್ತಾಳೆ" ಎಂದು ಜ್ಯೋತಿಯೊಡನೆಯ ತಮ್ಮ ಮಾತು-ಕತೆಯನ್ನು ಬಿಚ್ಚಿಟ್ಟರು.

ಇದನ್ನೆಲ್ಲ ಕೇಳುತ್ತಾ ಕುಳಿತ ವಿಭಾಳಿಗೆ ಇದೆಂತಾ ವಿಚಿತ್ರ! ಎಲ್ಲರೂ ತಮ್ಮ ತಮ್ಮ ಮಟ್ಟಿಗೆ ಸರಿ ಅನ್ನಿಸುತ್ತಾರಲ್ಲಾ ಎನಿಸಿ ಮೌನಿಯಾದಳು. ಆದರೂ 'ಆಗ್ಲೇ ನಾಲ್ಕೈದು ವರ್ಷಗಳಾದ್ವಲ್ಲಾ. ಇನ್ನೂ ಶಂಕ್ರಂಗೆ ಅವ್ಳ ಮೇಲೆ ಸಿಟ್ಟು ಹೋಗಿಲ್ವಾ? ಏನೋ ಪಾಪ ನಡೆಯೊ ಕಾಲು ಎಡವಿದೆ, ಮಕ್ಕಳಿಗಾಗಿಯಾದ್ರೂ ಅವನು ಸಮಾಧಾನವಾಗಿರ್ಬಾರ್ದಾ' ಎಂದು ಕೊಳ್ಳುತ್ತಾ ವಿಭಾ 'ನಾಳೆ ಜ್ಯೋತಿ ಕಂಡು ಮಾತನಾಡಿದರಾಯ್ತು' ಎಂದುಕೊಂಡು ಸುಮ್ಮನಾದಳು.

ಮಾರನೇ ದಿನ ಮನೆಯ ಹಿಂದೆಯೇ ಇರುವ ತೋಟದಲ್ಲಿ ಕಮಲತ್ತೆಯೊಂದಿಗೆ ಬೆರಕೆ ಸೊಪ್ಪು ಕುಯ್ಯುತ್ತಾ ಇರುವಾಗ ಪಕ್ಕದ ತೋಟದ ಬೇಲಿಯ ಬಳಿ ಒಗೆದ ಬಟ್ಟೆ ಹರಡುತ್ತಾ ನಿಂತಿದ್ದ ಜ್ಯೋತಿ ಕಾಣಿಸಿದಳು "ಕಮಲತ್ತೆ ನೀವು ಕುಯ್ಯುತ್ತಾ ಇರಿ, ಸ್ವಲ್ಪ ಜ್ಯೋತೀನ ಮಾತಾಡಿಸ್ಕೊಂಡ್ ಬರ್ತೀನಿ" ಎಂದು ವಿಭಾ ಆ ಕಡೆಗೆ ದಾಟಿದಳು. ವಿಭಾಳನ್ನು ಕಂಡ ಜ್ಯೋತಿ "ಅಕ್ಕಾ ಬನ್ನಿ ಒಳೀಕ್ಕೆ, ಟೀ ಇಡ್ತೀನಿ" ಎಂದಾಗ, ವಿಭಾ "ಬೇಡಾ ಇಲ್ಲೇ ಕೂತ್ಕೊಂಡು ಮಾತಾಡೋಣ ಬಾ" ಎನ್ನುತ್ತಾ ಅಲ್ಲೇ ಬದುವಿನ ಮೇಲೆ ಇಬ್ಬರೂ ಕುಳಿತುಕೊಂಡರು. ಅದೂ ಇದೂ ಮಾತನಾಡುತ್ತಾ, ಕೊನೆಗೆ ಹೇಳಬೇಕಾದ್ದನ್ನು ಹೇಳಲೇಬೇಕೆನಿಸಿದವಳಂತೆ, "ಜ್ಯೋತಿ ಇನ್ನೂ ಶಂಕ್ರನಿಗೆ ನಿನ್ನ ಮೇಲೆ ಸಿಟ್ಟು ಹೋಗಿಲ್ವಾ, ಇಷ್ಟು ವರ್ಷದ್ರೂ ಯಾಕಿಂಗೆ ಆಡ್ತಾನೆ? ಮಕ್ಳಿಗೆ ತಾಯಾಗಿ ನೀನು ಬದುಕಿರಬಾರ್ದಾ. ನಿಮ್ಮ ಕಡೆಯಿಂದ ಯಾರಾದ್ರೂ ಬಂದು ನಿನ್ನ ಪರವಾಗಿ ನ್ಯಾಯಾ ಮಾಡ್ಬಾರ್ದಾ?" ಎಂದಳು ವಿಭಾ.

ದೂರಕ್ಕೆ ದೃಷ್ಟಿನೆಟ್ಟಿದ್ದ ಜ್ಯೋತಿ ಕಣ್ಣು ಮಿಟುಕಿಸದೇ 'ನಾನೇನು ಯಾರೂ ಮಾಡ್ಬಾರ್ದಾ ತಪ್ಪು ಮಾಡಿದ್ನಾ ಅಕ್ಕಾ? ಒಂದಿನ ನನ್ನ ಕಷ್ಟ ಸುಖ ಕೇಳದ ನನ್ನ ಗಂಡ ಎಷ್ಟೇ ಒಡವೆ, ವಸ್ತ್ರ ತಂದು ಸುರಿದ್ರೂ ತಾನೇ ಏನು?.... ನಾನೇನೂ ಮಾತನಾಡಬಾರದು, ಏನೂ ಕೇಳಬಾರದು, ತಂದು ಹಾಕೋದ ಬೇಯ್ಸಿಕೊಂಡು, ಮನೆ ಜೀತ ಮಾಡ್ಕೊಂಡು, ಹೇಳ್ದಂಗೆ ಕೇಳ್ಕೊಂಡು ಮಕ್ಳು ಸಾಕ್ಕೊಂಡು ಬಿದ್ದಿರು' ಅಂದ್ರೆ ಹೆಂಗಿರೋದು ಹೇಳಿ... ನಾನೂ ಪಿಯೂಸಿಗಂಟ ಓದಿದ್ದೆ. ಅಲ್ಪಸ್ವಲ್ಪ ಪ್ರಪಂಚ ಗೊತ್ತಿತ್ತು. ಓದೋ ಚಟ ಬೇರೆ. ಬಡತನ ಅನ್ನೋ ಒಂದೇ ಕಾರಣಕ್ಕೆ ಮುಂದೆ ಓದಿಸ್ದೆ ನಮ್ಮಪ್ಪ ಸಿಕ್ದವನಿಗೆ ನನ್ನ ಗಂಟಾಕ್ದ... ಬಂದದ್ದನ್ನೆಲ್ಲಾ ನೀಸ್ದೆ, ನಾನೇನೂ ಹೇಳಿದ್ರೂ ಯಾರೂ ಈ ಮನೇಲಿ ಒಪ್ಪದೇ ಇಲ್ಲ. ಇವಳೇಳಿದ್ದನ್ನೆಲ್ಲ ಏನ್ ಕೇಳೋದು? ಅಪ್ಪನ ಮನೇಲಿ ತಿನ್ನೋಕೆ ಗತಿಯಿಲ್ಲ. ಈಗಿವ್ಳ ಕ್ಯಾಣ ನೋಡು... ಅನ್ನೋ ಮಾತು. ಹೇಗೆ ಸಹಿಸ್ಕೊಳದು? ನನಗೆ ಬೇಕಾದ್ದು ಕೊಡದೇ, ಒಡವೆ ವಸ್ತ್ರ ಕೊಟ್ರೂ ಅದ್ಯಾರಿಗೆ ಬೇಕು?" ಎಂದು ಉಸಿರುಗಟ್ಟಿದಂತೆ ನಿಲ್ಲಿಸಿ ನಿಲ್ಲಿಸಿ ಮಾತಾಡುತ್ತಾ ಹೋದಳು.

ವಿಭಾಳಿಗೆ ಅಚ್ಚರಿಯಾಯಿತು. ಜ್ಯೋತಿಯನ್ನು ಬೆರಗಿನಿಂದ ನೋಡುತ್ತಾ ಕೆದಕಲು, "ಇನ್ನೇನು ತಾನೆ ಬೇಕಿತ್ತು ನಿಂಗೇ, ಒಂದು ಭದ್ರತೆ, ಬದ್ಕಾಟ ಎಲ್ಲಾ ಇತ್ತಲ್ಲ?" ಎಂದು ಕೇಳಿದಳು. 'ಹೌದು ಅಕ್ಕಾ, ಶಂಕ್ರಂಗೆ ಎಲ್ಲಾ ಇದೆ, ಆದ್ರೆ ಮಾತಾಡೋದೇ ಗೊತ್ತಿಲ್ಲ, ಶುದ್ಧ ವರಟ, ಒಂದಿನ ಒಂದೊಳ್ಳೆ ಮಾತಾಡ್ಲಿಲ್ಲ. ಒಂದೊಳ್ಳೆ ಸೀರೆ ಉಟ್ರೂ ನಿಂತು ನೋಡ್ಲಿಲ್ಲ. ಸುಸ್ತಾಗಿ ದಣಿದು ಮಲಗಿದ್ರೂ ಏನೂಂತ ಕೇಳ್ಲಿಲ್ಲ, ಹುಷಾರಿಲ್ದಿದ್ರೂ ಒಂದು ಆಸ್ಪತ್ರೆಗೆ ಕರ್ಕೊಂಡು ಹೋಗ್ಲಿಲ್ಲ, ದುಡ್ಡು ಕೊಟ್ಟು ನೀನೇ ಹೋಗ್ಬಾ ಅಂತಿದ್ದ. ರಾತ್ರೆ ಹೊತ್ತು ಬಂದು ಸಮಾಧಾನ, ಪ್ರೀತಿಯ ಮಾತಿಲ್ಲ. ಎಳಕೊಂಡು ತೀಟೆ ತೀರಿಸಿಕೊಳ್ಳೋದಷ್ಟೇ ಅವನಿಗೆ ಗೊತ್ತಿರೋದು... ಮತ್ತಿಳಿದ ಮೇಲೆ ನನ್ನ ತಳ್ಳಿ ಬೆನ್ನು ತಿರುಗಿಸಿ ಮಲಗ್ತಾನೆ. ಎಷ್ಟೇ ಮಾತಾಡಿಸಿದ್ರೂ 'ಹುಂ ಇಲ್ಲ, ಉಹುಂ ಇಲ್ಲ'. ಕೇಳಿದ್ರೆ 'ನಾನಿರೋದೆ ಹಿಂಗೆ ಬೇಕಿದ್ರೆ ಇರು ಇಲ್ದಿದ್ರೆ ದಾಟಕೋ!' ಅಂತಿದ್ದ.... ಹೇಳಕ್ಕಾ ಇದಕ್ಕೆಲ್ಲಾ ಏನಾದ್ರೂ ಖರ್ಚಾದದಾ? ಇದನ್ನೆಲ್ಲ ಹೇಳಕ್ಕೋದ್ರೆ 'ನಿಂಗೆ ಹುಚ್ಚು ಸುಮ್ನೆ ಬಿದ್ಕೋ' ಅನ್ನೋನು. ನನ್ನ ನಿರಾಶೆ ದುಃಖ ಎಲ್ಲಾ ಅವನ್ಮೇಲೆ ತೀರ್ಸೋಕೆ ಶುರು ಮಾಡ್ದೆ. ಅವನಕ್ಕ ತಂಗಿ ಯಾರನ್ನೂ ನೋಡ್ಲಿಲ್ಲ, ಅವರವ್ವನ ನೋಡ್ಲಿಲ್ಲ, ನನ್ನ ನಾಲಿಗೇನೂ ಕತ್ತರಿಯಾಗ್ತಾ ಹೋಯ್ತು. ಒಂದಿನ ಹೀಗೆ ಬೈಯ್ದುಕೊಳ್ಳುತ್ತಾ ಬಟ್ಟೆ ಒಗಿತಾ ಇದ್ದೆ "ಗಂಡನ ಮೇಲಿನ ಸಿಟ್ಗೆ ಆ ಬಟ್ಟೆ ಏನ್ಮಾಡದೂ!" ಅಂದ್ರು ಯಾರೋ. ನೋಡಿದ್ರೆ ಅವ್ನು ಬೇಲಿ ಪಕ್ಕದ ಮರಕ್ಕೆ ಒರಗಿ ನಗುತ್ತಾ ನಿಂತಿದ್ದ. ನನಗೂ ನಗು ಬಂತು "ನಿಂಗೂ ಹೆಡ್ತಿ ಬರಲಿ ನೋಡ್ತಿನಿ ಹೆಂಗಿರಿಸಿಕೋಳ್ತೀಯಾ ಅಂತಾ" ಅಂದೆ. ಅದಕ್ಕವನು 'ಹೆಂಗಿರಿಸ್ತೀನಿ, ಹೇಳ್ಲಾ?' ಎಂದು ಹತ್ರ ಬಂದ. ಅಷ್ಟೇ... ಮುಂದೆ ನನ್ನ ಮೈಮೇಲಿನ ಪ್ರಜ್ಞೆ ನನಗೆ ಕಳೆದು ಹೋಯ್ತು. ಒಂದಿಷ್ಟು ದಿನ ನಾನು ನಾನಾಗಿರಲಿಲ್ಲ. ಲೋಕವೆಲ್ಲಾ ಮರೆತು ಹೋಯ್ತು. ಗಂಡ ಮನೆ ಮಕ್ಕಳು ಕಾಣದಾದ್ರು.... ಒಂದಿನ ಶಂಕ್ರಂಗೆ ಗೊತ್ತಾದಾಗ ನಂಗೆ ಪ್ರಜ್ಞೆ ಬಂತು. ಆ ದಿನ ಶಂಕ್ರ ಎಲ್ಲಾ ಮುಗಿಸಿ ಬಿಟ್ಟ.. ರಾಕ್ಷಸಾವತಾರ ಅಂದ್ರೆ ಏನೂಂತ ಅವತ್ತೇ ನನಗೆ ಗೊತ್ತಾದದ್ದು...." ಎಂದು ಬಿಕ್ಕಳಿಸಲು ಪ್ರಾರಂಭಿಸಿದಳು.

ಇದನ್ನೆಲ್ಲ ಕೇಳುತ್ತಾ ವಿಭಾ ಕಲ್ಲಾಗಿ ಕೂತಿದ್ದಳು. ನಂತರ ಸಾವರಿಸಿಕೊಂಡು, "ಸರಿ, ಎಲ್ಲಾ ಸೇರಿ ನ್ಯಾಯ ಪಂಚಾಯ್ತಿ ಮಾಡಿ ಬಿಡಿಸಿದ್ರಲ್ಲಾ, ಆಮೇಲಾದ್ರೂ ಶಂಕ್ರ ಸಮಾಧಾನವಾಗ್ಲಿಲ್ಲವಾ?" ಎಂದು ಕುತೂಹಲದಿಂದ ಕೇಳಿದಳು.

ಜ್ಯೋತಿ ಮತ್ತೆ ಬಿಕ್ಕಳಿಸುತ್ತಾ "ಇದಕ್ಕೇ ಅಲ್ವಾ ನೀನು ಅವನತ್ರ ಹೋಗಿದ್ದು ಅನ್ನುತ್ತಾ ನನ್ನ ಮತ್ತೆ ಮತ್ತೆ ಬಸಿರು ಮಾಡ್ತಾನೇ ಹೋದಾ. ಆದ ಬಸ್ರನ್ನ ತೆಗಿಸ್ತಾನೇ ಹೋದ. ಬರೀ ಮಾತ್ರೆ ನುಂಗಿ ಕಳೆದದ್ದೂ ಎಷ್ಟೋ ದಿನ ಇದೆ. ಯಾವ್ದಾದ್ರೂ ಜೈಲು ನಂಗೆ ಶಿಕ್ಷೆ ಕೊಟ್ಟಿದ್ರೂ ಇಷ್ಟರಲ್ಲೇ ಮುಗಿದು ಹೋಗ್ತಿತ್ತು. ನನಗೂ ಸಾಕಾಗಿ ಹೋಗಿದೆ ಅಕ್ಕಾ. ಈಗ ನಾನೂ ಗಟ್ಟಿ ಮನಸು ಮಾಡಿದ್ದೀನಿ. ಏನೇ ಬಂದ್ರೂ ಈ ಬಾರಿ ಅಬಾರ್ಷನ್ ಮಾಡಿಸ್ಕೊಳಲ್ಲಾ, ಇರೋ ಎರಡು ಮಕ್ಳ ಜೊತೆಗೆ ಇದನ್ನೂ ಸಾಕ್ತಿನಿ. ಹೆರಿಗೆಯಾದ ಮೇಲೆ ಆಪರೇಶನ್ ಕೂಡಾ ಮಾಡಿಸ್ಕೊಳ್ತೀನಿ. ಶಂಕ್ರ ಹೆಚ್ಚು ಮಾತಾಡಿದ್ರೆ ಮನೆ ಮಕ್ಳು ಎಲ್ಲಾ ಬಿಟ್ಟು ನಮ್ಮಪ್ಪನ ಮನೆಗೆ ಹೋಗಿ ಬಿಡ್ತಿನಿ. ಅದ್ಹೇಗೆ ನಾನಿಲ್ದೆ ಎಲ್ಲಾ ನಿಭಾಯಿಸ್ತಾನೆ ಇವ್ನು, ನೋಡ್ತೀನಿ.ಇಲ್ಲಿ ಮನೆ, ಜಮೀನು ಅಂತ ಗೆಯ್ಯೊದನ್ನ ನಾನು ಯಾರ್ದಾದ್ರು ಮನೆ ಕೆಲ್ಸಮಾಡಿದ್ರೂ ನಾನು ಬದ್ಕಾಕಾಗೊಷ್ಟು ನಂಗೆ ಸಿಗೋಲ್ವ? ನಾನು ಮಾಡಿದ್ದು ತಪ್ಪು ಅನ್ನೋದಾದ್ರೆ ಅದಕ್ಕೆ ಬೇಕಾದಷ್ಟು ನಾನು ಅನುಭವಿಸಿದೀನಿ. ಇನ್ನು ನಾನ್ಯಾರಿಗೂ ಕೇರ್ ಮಾಡೋದಿಲ್ಲ". ಎಂದು ಏರಿದ ದನಿಯಲ್ಲಿ ದೃಢ ನಿಶ್ಚಯ ಮಾಡಿದಂತೆ ಹೇಳುತ್ತಾ ಹೋದಳು.

ವಿಭಾಳಿಗೂ ದುಃಖ ಉಮ್ಮಳಿಸಿ ಬಂದಂತಾಗಿ ಆವಳ ಕೈಗಳೆರಡನ್ನೂ ಹಿಡಿದುಕೊಂಡಾಗ ಜ್ಯೋತಿಯ ಕೈ ಹಿಡಿತ ಬಿಗಿಯಾಗುತ್ತಾ ಹೋಯಿತು. *



**(ಮೈಸೂರಿನಲ್ಲಿ ವಾಸಿಸುವ ಸಮತಾ ಕೊಡಗಿನ ಗ್ರಾಮೀಣ ಶಾಲೆಯೊಂದರಲ್ಲಿ ಶಿಕ್ಷಕಿಯಾಗಿ ಕೆಲಸ ಮಾಡುತ್ತಾ ಸೃಜನಶೀಲ ಬರಹಗಳಲ್ಲೂ ತೊಡಗಿಕೊಂಡಿದ್ದಾರೆ)**

## ಪತ್ರಿಕೆಗೆ ಬರಹ-ಪುಸ್ತಕಗಳನ್ನು ಕಳಿಸುವುದು ಬೇಡ

'ಹೊಸ ಮನುಷ್ಯ' ಪೂರ್ಣ ಪೂರ್ವನಿಯೋಜನೆಯೊಂದಿಗೆ, ಪ್ರಧಾನವಾಗಿ ಆಹ್ವಾನಿತ ಬರಹಗಳನ್ನೊಳಗೊಂಡ ಪತ್ರಿಕೆಯಾಗಿರುವುದರಿಂದ ದಯವಿಟ್ಟು ಯಾರೂ ಸ್ವ ಇಚ್ಛೆಯಿಂದ ಪ್ರಕಟಣೆಗಾಗಿ ಕವನ-ಕಥೆ ಸೇರಿದಂತೆ ಯಾವುದೇ ಬರಹವನ್ನು ಅಥವಾ ಅವಲೋಕನಕ್ಕಾಗಿ ಪುಸ್ತಕಗಳನ್ನು ಕಳಿಸಬಾರದೆಂದು ಕೋರುತ್ತೇವೆ. ಅವಲೋಕನಕ್ಕಾಗಿ ಪುಸ್ತಕಗಳನ್ನು ಪತ್ರಿಕೆಯೇ ಆಯ್ದು ಸಂಬಂಧಪಟ್ಟವರಿಂದ ತರಿಸಿಕೊಳ್ಳುವುದು.

ಪತ್ರಿಕೆಯಲ್ಲಿನ ಲೇಖನಗಳಿಗೆ ಪ್ರತಿಸ್ಪಂದಿಸಬಯಸುವವರು, ತಮ್ಮ ಪ್ರತಿಕ್ರಿಯೆಗಳನ್ನು ಸಂಕ್ಷಿಪ್ತವಾಗಿ-ಸಾಮಾನ್ಯ ಸಂದರ್ಭಗಳಲ್ಲಿ ನೂರು ಪದಗಳನ್ನು ಮೀರದಂತೆ-ಆಯಾ ತಿಂಗಳ ೨೦ರೊಳಗಾಗಿ ನಮಗೆ ತಲುಪುವಂತೆ ಬರೆದು ಕಳಿಸಬಹುದು/ಮೇಲ್ ಮಾಡಬಹುದು-ಸಂ.

ಕರ್ನಾಟಕ ಏಕೀಕರಣದ ಓರ್ವ ಪ್ರಮುಖರೂ, ಹಿರಿಯ ಲೇಖಕರೂ, ನ್ಯಾಯವಾದಿಗಳೂ ಆಗಿದ್ದ ಕೋ. ಚೆನ್ನಬಸಪ್ಪ ಅವರ ನಿಧನಕ್ಕೆ 'ಹೊಸ ಮನುಷ್ಯ' ತನ್ನ ತೀವ್ರ ಸಂತಾಪವನ್ನು ಸೂಚಿಸುತ್ತದೆ.-ಸಂ.

# ನವಿಲುಗರಿ

## ನನ್ನೂರು.....



ಒಂದೊಮ್ಮೆ ನನ್ನೂರು
ನನ್ನ ಹಾಗಯೇ ಇತ್ತು
!ಪಿಳಿ ಪಿಳಿ ಕಣ್ಣು ಕುಲು ಕುಲು ನಗು
ತಿಪ್ಪ ತಿಪ್ಪ ಹೆಜ್ಜೆ ಉಗ್ಗುತಿತ್ತು ಹಿಗ್ಗುತ್ತಿತ್ತು...

ನದಿಯಲ್ಲಿ ನೀರಿತ್ತು ಬಿದಿರಿನ ಮೆಳೆ ಇತ್ತು
ಕಣಗಿಲ ಕೋಗಿಲ ಹೂವಿತ್ತು ಹಾಡಿತ್ತು
ಕರುಳಿನ ಕರೆಯಿತ್ತು

ಈಗಲೋ.ಮರಗಳಿಗೆ  ಹೆಗಲಿಲ್ಲ
ಹಾವಿಗೆ ತಾವಿಲ್ಲ ಗುಡ್ಡವು ಜರಿದಿದೆ
ಝರಿಯೆಲ್ಲ ಸೊರಗಿದೆ

ಕೊಳಕೆಲ್ಲ ಸುರಿದಿದೆ ಹುಳುಕೆಲ್ಲ ತೋರಿದೆ
ಕಾಳಗ ನಡೆದಿದೆ ಬಳಗವು ಒಡೆದಿದೆ

ಫಳಫಳ ಹೊಳೆದಿದೆ ಥಳುಕಿದೆ ಬಳುಕಿದೆ
ಬೆಡಗಿದೆ ಬೆರಗಿದೆ ಝುಣ ಝುಣ ಕುಣಿದಿದೆ

ವೇಗಕೆ ಒಲಿದಿದೆ ಸೋಗನು ತಳೆದಿದೆ
ದರ್ಪವ ಸಹಿಸಿದೆ ಭೋಗವು ಮೆರೆದಿದೆ

ಸದಾ ಕೆಮ್ಮು –ದಮ್ಮು
ನನಗಿರುವಂತೆಯೇ.....!!



**–ಸವಿತಾ ನಾಗಭೂಷಣ**

## ಬದುಕ ಬಗೆ



ಬೆಳಕ ಬೊಗಸೆಯಲ್ಲಿ ಜೀವತಳೆದಂತೆ
ರೂಪ ಪಡೆಯುತ್ತಿತ್ತು ಚೆರ್ರಿಮರ ಒಂದು ಬೆಳಗು.

ಆ ಬೆಳಕೇ ಮರದ ಬುಡಕ್ಕೆ ಒದ್ದುಕೊಂಡ ಕಲ್ಲಿನ ಉಸಿರಾಗಿ
ಆಗ ಕಲ್ಲು ಕೆಂಪಾಗಿ, ಇದೆಲ್ಲವ ನೋಡುತ್ತ ಮರದ ಹಣ್ಣು
ಕೆಂಪಗಾಗಿತ್ತು,
ಕಾಲವೇ ಕಾಲವನ್ನು ಪ್ರತಿಧ್ವನಿಸುವಂತೆ
ಮರದ ತುಂಬ ಪಿಕಳಾರದ ಕಿಚಕಿಚ ಸದ್ದಾಡಿತ್ತು.

ರಕ್ತಹನಿಯೋ ಕೆಂಪುಹಣ್ಣು ಹಕ್ಕಿಯಾಸೆಯೋ, ಮರದ ಆಸೆಯೋ
ತಿಳಿಯದಂಥ ಹರಿಗಡಿಯದ ನಂಟು ಹಕ್ಕಿಗೂ –ಮರಕ್ಕೂ ಬೆಳೆದು,
ಮರದ ಗೆಲ್ಲು ತೂಗೋ ಜೋಲಿಯಾಗಿ
ಎಲೆಗಳೆಲ್ಲ ನೇವರಿಸೋ ಬೆರಳಾಗಿ
ಹಕ್ಕಿಗೂಡ ಕಾವಲ್ಲಿ ರೆಕ್ಕೆ ತಳೆಯಿತು ಮರದ ಹಾಡು.
ಇದನ್ನು ನೋಡಿ ಮರದ ಬುಡದ ಕಲ್ಲ ಬಯಕೆಯೂ ಬಸುರಾಗಿ
ಒಂದು ದಿನ ಕಲ್ಲ ಮೇಲರಳಿತು ಬಿಳಿಯ ಹೂವು ಕಲ್ಲಿನೆದೆಗೇ ಆತು
ಕರಗುವಂತೆ ಕಲ್ಲೆದೆಯೂ.

ಹಕ್ಕಿಗೂಡ ಕಾವಲ್ಲಿ ಮರದ ಹಾಡು ರೆಕ್ಕೆತಳೆವ ಊರಲ್ಲಿ
ಕಲ್ಲಲ್ಲಿ ಹೂವರಳುತ್ತದೆ, ಆಗೆಲ್ಲ
ದೇಹದೊಳಗೆ ಆತ್ಮ ಕಾಲಿಳಿಬಿಟ್ಟು ತೂಗಿಕೊಳ್ಳುತ್ತದೆ.

**–ತೇಜಶ್ರೀ**

## ಆಸ್ಪತ್ರೆಯ ಕಿಟಕಿಯಲ್ಲಿ ಹಣಕಿದ ಸಾವು

ಅತ್ತೆ ಒಳಗಿದ್ದಾರೆ
ಅವರೊಳಗೆ ಏನಿದೆಯೋ
ಸುತ್ತ ನಿಂತವರ ಎದೆಯಲ್ಲೆಲ್ಲ
ಡೆಟಾಲಿನ ಆಂಟಿಸೆಪ್ಟಿಕ್ ವಾಸನೆ

ಬೆಳಕು ಕತ್ತಲೆಯ ಮುಟ್ಟಿತು
ಎನ್ನುವಂತಿಲ್ಲ ಈ ಗಾಢಾಂಧಕಾರದ
ಕಪ್ಪು ಆಕಾಶದ ವಿಸ್ತಾರದ
ಆಸ್ಪತ್ರೆಯಲಿ

ನಕ್ಷತ್ರಗಳು ಮಿನುಗುತ್ತಿವೆ
ಮೂಲೆಯ ಮಲ್ಲಿಗೆ ಗಿಡದಲಿ
ಪುಟ್ಟ ಹೂವಿಗೂ ದವಾಖಾನೆಯ ವಾಸನೆ

ಬೆಳಕು ಗಂಜಿಯಾಗಿ ಇಳಿದಿದೆ
ಖಂಡ ಖಂಡವಿದೆಕೊ
ಮಾಂಸವಿದೆಕೊ
ಗುಂಡಿಗೆಯಲಿ ಬಿಸಿ ರಕ್ತವಿದ್ದರೆ
ಅದನ್ನೂ ಕೋ ಓ ಸಾವಿನ ದೇವತೆಯೇ
ಎಂದು ಮೊಗೆಮೊಗೆದು

ಧಮನಿಗಳಲ್ಲಿ ಹರಿಯುವ ಬಿಸಿರಕ್ತದ
ಒಳಗೆ ತಣ್ಣನೆಯದೊಂದು ಮಿಡತೆಯ ಹಾರಾಟದ ಧ್ವನಿ
ಟ್ಯೂಬ್‌ಲೈಟಿಗೆ ಮುತ್ತಿಕೊಂಡ ಹುಳಗಳು
ಕ್ಯಾಂಟೀನಿನಲಿ ಬಿಸಿ ಓಗರದ ವಾಸನೆ.. ..



ಚಿತ್ರಗಳು ವಿಜಯಶ್ರೀ ಪಾಲಾಡಿ



–ಆರ್. ತಾರಿಣಿ ಶುಭದಾಯಿನಿ

## ಜೀವ–ಜಾಲದ ಸಗ್ಗ

ಒಡಲಲ್ಲಿ ಮಿಡಿದಾಡುವ ಜೀವ
ಕೈಕಾಲು ಬಡಿದು ಒದ್ದು ಪುಳಕ್ಕೆಂದು
ಹೊರಳಿದಾಗ, ತಾಯಿ ಜೀವದ ಹಿಗ್ಗು!

ಹೀಗೊಂದು ಕುಡಿ ಒಡಲಲ್ಲಿ
ಚಿಗುರಿ, ಅರಳಿದ ಪುಟ್ಟ ಕಂಗಳ
ನಗು–ಅಳುವಿನ ಜೀವ
ಅಮ್ಮನ ಕೈಸೋಕಿದಾಗ ಅದು ಸಗ್ಗ!

ಕಣ್ಣ ರೆಪ್ಪೆಯೊಳಗಿಟ್ಟು ಕಾಯ್ದು
ಅಮೃತವನೆರೆದು
ಭುವಿಯ ಭಾಗ್ಯವೆಲ್ಲಾ
ಮಗುವಾಗಿ, ಮಡಿಲ
ಸೇರಿದೆಯೆಂದು ಹಿಗ್ಗುವ ತಾಯಿ
ಅಮ್ಮನ ವಿಶ್ವವಾಗಿ



ಅಮ್ಮನಿಲ್ಲದ ಜಗತ್ತು ಊಹೂಂ
ಪಾತಾಳ, ಭೂಮಿ ಆಕಾಶ
ಎಲ್ಲವೂ ಅಮ್ಮನ ಕಣ್ಣೊಳಗೆ
ಕೊನೆಯಿರದ ಪ್ರೀತಿಯ ಜಗತ್ತು
ಜೀವಜಾಲದ ಪೊರೆಯುವ ಮಸಲತ್ತು

**–ಅರುಂಧತಿ**



# ‘ಮಲೆಗಳಲ್ಲಿ ಮದುಮಗಳು’ವಿನಲ್ಲಿ ಗಂಡು – ಹೆಣ್ಣಿನ ಸಂಬಂಧ

– ಡಾ. ಸಬಿತಾ ಬನ್ನಾಡಿ



ಗಂಡು ಹೆಣ್ಣಿನ ಸಂಬಂಧ ಅಂದ ತಕ್ಷಣವೇ ‘ಕಲಿತ’ ನಮ್ಮೆಲ್ಲರ ತಲೆಯೊಳಗೂ ಒಂದು ‘ಆದರ್ಶ’ ಚಿತ್ರಣ ಬೇಕಿದ್ದೋ ಬೇಡದೆಯೋ ಕುಳಿತು ಬಿಡುತ್ತದೆ. ಒಂದೋ ರೂಕ್ಷವಾದ, ಇಲ್ಲವೇ ಕುಸುರಿ ಕೆಲಸ ಮಾಡಿದ ಎರಡು ಚಿತ್ರಗಳು ನಮ್ಮೊಳಗನ್ನು ಆವರಿಸಿಕೊಳ್ಳುತ್ತವೆ. ಕುಸುರಿಗೆಲಸ ಮಾಡಲು ಬೇಕಾದ ಸಲಕರಣೆಗಳು ಬೇರೆ ಬೇರೆ ಓದಿನ, ಅನುಭವದ ಹಿನ್ನೆಲೆಯಲ್ಲಿ ರೂಪುಗೊಂಡಿರುತ್ತವೆ. ಕುವೆಂಪು ಬದುಕಿನುದ್ದಕ್ಕೂ ಧ್ಯಾನಿಸಿದ ಹಲವು ಸಂಗತಿಗಳಲ್ಲಿ ಈ ಗಂಡು – ಹೆಣ್ಣಿನ ಸಂಬಂಧಗಳ ಇಕ್ಕಟ್ಟು, ಬಿಕ್ಕಟ್ಟು ಮತ್ತು ಒಕ್ಕಟ್ಟುಗಳು ಬಹಳ ಪ್ರಧಾನವಾದುದು. ಮುಖ್ಯವಾಗಿ ಗಂಡು ಹೆಣ್ಣಿನ ಪ್ರೀತಿ, ಪ್ರೇಮದ ಸಂಬಂಧಗಳ ಹಿನ್ನೆಲೆಯಲ್ಲಿ ಇದನ್ನು ಗಮನಿಸಬಹುದು.

ಅಕ್ಕಮಹಾದೇವಿ “ಕಾಯದ ನುಂಪನೊಬ್ಬ ಬಯಸಿದರೆ ಅವನಿಗೆ ಮಾಂಸವ ಬೆಲೆ ಮಾಡಿ ಕೊಡುವೆನು” ಅನ್ನುತ್ತಾಳೆ. ಆದರೆ “ಎನ್ನ ಪ್ರಾಣದೊಡೆಯಂಗೆ ಎನ್ನ ಹೃದಯವ ಸೂರೆಗೊಡುವೆನು” ಎಂದೂ ಹೇಳುತ್ತಾಳೆ. ಪುರುಷನನ್ನು ಪುರುಷ ರತ್ನಾ ಎಂದವಳೂ ಇವಳೆ, ಸಾವ ಕೆಡುವ ಗಂಡರನ್ನೊಯ್ದು ಒಲೆಯೊಳಗಿಕ್ಕು ಎಂದವಳೂ ಇವಳೇ. ಇವೆಲ್ಲವೂ ಒಂದು ಖಚಿತದಲ್ಲೇ ರೂಪುಗೊಂಡ ಮಾತುಗಳೇ. ಆ ನಿಲುವುಗಳು ಗಂಡು ಹೆಣ್ಣಿನ ಸಂಬಂಧವನ್ನು ತಿಳಿಯುವ ಪ್ರಕ್ರಿಯೆಯ ಬೆಳಕಿಂಡಿಗಳಂತೆ ಒದಗಿ ಬರುತ್ತವೆ. ಕುವೆಂಪು ಕಥನಗಳನ್ನು ನೋಡಲು ನೋಟವೊಂದನ್ನು ಒದಗಿಸುತ್ತವೆ. ಒಂದು ರೀತಿಯಲ್ಲಿ ಮಲೆಗಳಲ್ಲಿ ಮದುಮಗಳು ಕುವೆಂಪು ಚಿಂತನೆಯ ಅಂತಿಮ ಥೀಸಿಸ್ ಕೂಡ ಹೌದು. ಸಂಸ್ಕೃತ ಕಾವ್ಯಮೀಮಾಂಸೆಯ ‘ಅವಿಚಾರಿತ ರಮಣೀಯ’ ಮತ್ತು ‘ವಿಚಾರಿತ ಸುಂದರ’ವನ್ನು ಕೆ.ವಿ.ನಾರಾಯಣ ಅವರು ‘ಕುವೆಂಪು ವೈಚಾರಿಕತೆ’ಯ ಕುರಿತ ಲೇಖನದಲ್ಲಿ ನೆನಪಿಸುತ್ತಾರೆ. ಅವಿಚಾರಿತ ರಮಣೀಯ ಲೋಕದೊಳಗಿಂದ ಹೊಮ್ಮಿದ ಕುವೆಂಪು, ಆ ಅವಿಚಾರಗಳನ್ನು ಎದುರುಗೊಳ್ಳುವುದು ಹೇಗೆ ಎಂಬುದನ್ನು ಗಂಭೀರವಾಗಿ ಚಿಂತಿಸುತ್ತಾ ಹೋದುದರ ಫಲವಾಗಿ ‘ವಿಚಾರಿತ ಸುಂದರ’ ಹೂವಯ್ಯ ಉದಿಸುತ್ತಾನೆ. ಹೆಣ್ಣು ಗಂಡಿನ ಸಾಂಗತ್ಯದ ಬಿರುಕುಗಳನ್ನೆಲ್ಲಾ ಸೀತೆ – ಹೂವಯ್ಯರು ಮನಸ್ಸು, ದೇಹಗಳನ್ನು ಬೇರೆ ಮಾಡಿ ರೂಪಿಸಿಕೊಂಡ ಆದರ್ಶೀಕೃತ ಪಾತಳಿಯಲ್ಲಿ ಸಮಾಧಿಮಾಡಿ ಗೆದ್ದುಕೊಳ್ಳಬಲ್ಲರು ಎಂದು ನಂಬಿದ ಕುವೆಂಪು ‘ಮಲೆಗಳಲ್ಲಿ ಮದುಮಗಳು’ ಬರೆವ ಹೊತ್ತಿಗೆ, ಅದನ್ನು ಪುನರ್ ಪರಿಶೀಲಿಸಲು ತೊಡಗುತ್ತಾರೆ. ಆಗ ಅವರಿಗೆ ಆ ಅವಿಚಾರಿತ ರಮಣೀಯ ಲೋಕದೊಳಗೂ ಹರಿಯುತ್ತಿರುವ ತಿಳಿಜಲದ ಧಾರೆ ಗೋಚರಿಸುತ್ತದೆ. ಅಂದರೆ, ಅದೇ ಲೋಕದೊಳಗೆ ಅದೇ ಲೋಕದ ಬಿರುಕುಗಳನ್ನೂ ಮೀರಿದ, ಆದರೆ ನಮ್ಮ ಕಣ್ಣು ‘ಕಾಣದಿದ್ದ’ ಸಂಗತಿಗಳು ‘ಕಾಣ’ತೊಡಗುತ್ತವೆ. ಈ ಕಾರಣಕ್ಕೇ ಇಲ್ಲಿ ಯಾವುದೂ ಮುಖ್ಯವಲ್ಲ, ಯಾವುದೂ ಅಮುಖ್ಯವಲ್ಲ, ನೀರೆಲ್ಲವೂ ತೀರ್ಥ ಎಂಬ ಹೊಳಹು ‘ತಿಳಿವು’ ಆಗಿ ಎದುರು ನಿಲ್ಲುತ್ತದೆ. ಇದರ ಪರಿಣಾಮವೇ ‘ನಾನು ನಿನಗೆ ಏನನ್ನೋ ಹೇಳುತ್ತೇನೆ’ ಎಂಬುದು ಬದಿಗೆ ಸರಿದು, ‘ನಾವೆಲ್ಲರೂ ನಮಗಾಗಿ ಏನನ್ನೋ ಹೇಳಿಕೊಳ್ಳೋಣ’ ಎಂಬ ನಡೆ ಶುರುವಾಗುತ್ತದೆ.

‘ಮಲೆಗಳಲ್ಲಿ ಮದುಮಗಳು’ವಿನುದ್ದಕ್ಕೂ ಹೆಣ್ಣು ಗಂಡುಗಳ ನಡುವಿನ ದೈಹಿಕ ವ್ಯಾಪಾರಗಳ ವಿವರಗಳು ಯಾವ ಕೊಂಕು ಕೊಸರು ಇಲ್ಲದೆ ತೆರೆಯುತ್ತಾ ಹೋಗುತ್ತದೆ. ಹೀಗೆ ತೆರೆಯುವುದರ ಹಿಂದೆ ಹೆಣ್ಣು –ಗಂಡು ಸಂಬಂಧಗಳನ್ನು ನಿರ್ಧರಿಸುತ್ತಿರುವ ಸಂಗತಿಗಳು ಯಾವುವು ಎಂಬುದನ್ನು ಅರಿಯುವ ಕುತೂಹಲದ ಕಣ್ಣುಗಳಿವೆ. ಅದು ಮನೋ ವ್ಯಾಪಾರವೇ? ದೇಹ ವ್ಯಾಪಾರವೇ? ಅಥವಾ ಇವೆರಡೂ ಬೇರೆ ಬೇರೆಯದೇ? ದೇಹವು ಮನಸ್ಸನ್ನು ಆವರಿಸಿಕೊಳ್ಳುವ ಪರಿಯಿಂದ ಬಿಡುಗಡೆ ಹೊಂದುವುದು ಶ್ರೇಷ್ಠ ಸಂಗತಿಯೇ? ಇದನ್ನು ಯಾರ್‍ಯಾರು ಹೇಗ್ಹೇಗೆ ಎದುರುಗೊಳ್ಳುತ್ತಾರೆ? ಈ ಚೌಕಟ್ಟುಗಳನ್ನೆಲ್ಲಾ ಯಾರು ಯಾಕೆ ಹಾಕುತ್ತಾರೆ? ಚೌಕಟ್ಟುಗಳನ್ನು ಶಿರಸಾ ಪಾಲಿಸಿಕೊಂಡೇ ಜನ ಸದಾ ವ್ಯವಹರಿಸುತ್ತಾರೆಯೇ? ಎಂಬೆಲ್ಲಾ ಪ್ರಶ್ನೆಗಳು ಇಲ್ಲಿವೆ. ಆದರೆ, ಒಂದಂತೂ ನಿಜ. ಈ ಕಾದಂಬರಿಯಲ್ಲಿ ಸ್ಪಷ್ಟವಾಗುವ ಒಂದು ನಿಲುವು ಏನೆಂದರೆ ದೇಹ ಮನಸ್ಸುಗಳ ಬೆಸುಗೆಯೂ ಒಂದು ಘನತರ ಸಾಧನೆಯೇ. ಘನತರ ಸಾಧನೆಗಾಗಿ ದೈಹಿಕ ಒಡನಾಟದ ಅನುಭವಗಳನ್ನು ನಿರಾಕರಿಸಬೇಕಿಲ್ಲ ಎಂಬುದು. ಅದಕ್ಕಾಗಿ ಎಲ್ಲ ಚೌಕಟ್ಟುಗಳನ್ನು ದಾಟಿ ನೋಡುವ ಮಹತ್ತು ಇಲ್ಲಿದೆ.

**ಕುವೆಂಪುಗೆ ಹೆಣ್ಣು ಗಂಡಿನ ಸಂಬಂಧ ಎಂಬುದು ಸಹಜೀವನ, ಸಹಭಾಗಿತ್ವ, ಸಮನ್ವಯ, ಸಮ್ಮಿಲನ ಮತ್ತು ಆ ಮೂಲಕ ಒಂದು ಪೂರ್ಣದೃಷ್ಟಿ. ಹೆಣ್ಣು ಗಂಡನ್ನು ಅನುಸರಿಸುವ ಸಹವರ್ತಿ ಎಂಬ ನೆಲೆಯನ್ನು ದಾಟುವ ಕುವೆಂಪು ಇದನ್ನೆಲ್ಲಾ ಕಂಡುಕೊಳ್ಳುತ್ತಾ ಹೋಗುತ್ತಾರೆ. ಇಡೀ ಕಾದಂಬರಿ ಹೆಣ್ಣು ಗಂಡುಗಳ ಮನೋನೆಲೆ ವಿಸ್ತರಿಸಿದಂತೆಲ್ಲಾ ಅವರ ಅನುಭವದ ಅನುಭೂತಿಯಲ್ಲಿ ವ್ಯತ್ಯಾಸವಾಗುತ್ತಾ ಹೋಗುವುದನ್ನು ಹೇಳುತ್ತದೆ. ಒಂದು ಸಾಧಾರಣ ಮನಸ್ಥಿತಿಯಲ್ಲಿ ಅದೊಂದು ಶುದ್ಧ ದೈಹಿಕ ವ್ಯಾಪಾರ. ಅನಿವಾರ್ಯ ನಿಸರ್ಗ ಸಹಜ ಘಟನೆ. ಈ ಅಂಶವನ್ನು ಲೇಖಕರು ಜೊತೆಗೂಡಿಸುವ ಕ್ರಮ ಅಸದೃಶ.**

ಕುವೆಂಪುಗೆ ಹೆಣ್ಣು ಗಂಡಿನ ಸಂಬಂಧ ಎಂಬುದು ಸಹಜೀವನ, ಸಹಭಾಗಿತ್ವ, ಸಮನ್ವಯ, ಸಮ್ಮಿಲನ ಮತ್ತು ಆ ಮೂಲಕ ಒಂದು ಪೂರ್ಣದೃಷ್ಟಿ. ಹೆಣ್ಣು ಗಂಡನ್ನು ಅನುಸರಿಸುವ ಸಹವರ್ತಿ ಎಂಬ ನೆಲೆಯನ್ನು ದಾಟುವ ಕುವೆಂಪು ಇದನ್ನೆಲ್ಲಾ ಕಂಡುಕೊಳ್ಳುತ್ತಾ ಹೋಗುತ್ತಾರೆ. ಇಡೀ ಕಾದಂಬರಿ ಹೆಣ್ಣು ಗಂಡುಗಳ ಮನೋನೆಲೆ ವಿಸ್ತರಿಸಿದಂತೆಲ್ಲಾ ಅವರ ಅನುಭವದ ಅನುಭೂತಿಯಲ್ಲಿ ವ್ಯತ್ಯಾಸವಾಗುತ್ತಾ ಹೋಗುವುದನ್ನು ಹೇಳುತ್ತದೆ. ಒಂದು ಸಾಧಾರಣ ಮನಸ್ಥಿತಿಯಲ್ಲಿ ಅದೊಂದು ಶುದ್ಧ ದೈಹಿಕ ವ್ಯಾಪಾರ. ಅನಿವಾರ್ಯ ನಿಸರ್ಗ ಸಹಜ ಘಟನೆ. ಈ ಅಂಶವನ್ನು ಲೇಖಕರು ಜೊತೆಗೂಡಿಸುವ ಕ್ರಮ ಅಸದೃಶ. ಓದುಗರಿಗೆ ತಿಮ್ಮಪ್ಪ ಹೆಗ್ಗಡೆಯನ್ನು ಪೂರ್ತಿ ಪರಿಚಯಿಸುವ ಪೂರ್ವದಲ್ಲೇ ತರುವ ಹಂದಿದೊಡ್ಡಿಯ ವರ್ಣನೆಯನ್ನು ಈ ಹಿನ್ನೆಲೆಯಲ್ಲಿ ಗಮನಿಸಬೇಕು. ಅಲ್ಲಿನ ಪ್ರಾಯದ ಸಲಗದ ವರ್ತನೆಯೂ, ತಿಮ್ಮಪ್ಪ ಹೆಗ್ಗಡೆಯ ವ್ಯಕ್ತಿತ್ವವೂ ಒಂದರೊಡನೊಂದು ಬೆರೆತು ಹೋಗುತ್ತದೆ. ಪಶುತನ ಮನುಷ್ಯರಲ್ಲಿಲ್ಲವೆಂದಲ್ಲ ಎಂಬುದಕ್ಕೆ ಅವನ ವರ್ತನೆಗಳು ನಿದರ್ಶನಗಳಾಗುತ್ತವೆ. ಇದರಲ್ಲೊಂದು ಒರಟು ಮುಗ್ಧತನವೂ ಇರುವಂತಿದೆ. ಇಲ್ಲಿ ಅವನ ಸಮಸ್ಯೆಯೇನೆಂದರೆ, ಹಂದಿಗಳಿಗೆ ಸಾಮಾಜಿಕತೆ ಎಂಬುದೊಂದಿಲ್ಲ. ತಿಮ್ಮಪ್ಪನಿಗೆ ಅದಿದೆ. ಹೀಗಾಗಿ ಅವನೊಂದು ಮದುವೆಯಾಗಬೇಕಿದೆ. ಆದರೆ, ಅವನನ್ನು ಮದುವೆಯಾಗುವವಳು ಸಿಗುವುದಕ್ಕೆ ತೊಡಕಿದೆ. ಹೀಗಿದ್ದೂ ಕೊನೆಯಲ್ಲಿ ಅವನನ್ನು ಮೆಚ್ಚುವ ಹಂತ ತಲುಪುವ ಲಕ್ಕಮ್ಮನನ್ನು ಗಮನಿಸಿದರೆ, ಆಕೆಯ ಬಗ್ಗೆ ಮರುಕ ಎನಿಸಿದರೂ ದೈಹಿಕ – ಹೊಟ್ಟೆ ಮತ್ತು ಕಾಮಗಳೆಂಬ ಹಸಿವುಗಳಾಚೆಗೆ ಯೋಚಿಸುವ ಮನೋನೆಲೆಯನ್ನು ಆಕೆ, ಆತ ತಲುಪಿಲ್ಲವಾದ್ದರಿಂದ ಅವರಿಗೆ ಅದೊಂದು ಮಹತ್ ಸಮಸ್ಯೆಯಾಗಲಿಕ್ಕಿಲ್ಲ ಎಂಬ ಸೂಚನೆಯೂ ಅಲ್ಲಿದೆ.

ಸಿಂಬಾವಿ ಹೆಗ್ಗಡೆಯನ್ನು ಮದುವೆಯಾಗಲು ಚಿನ್ನಮ್ಮ ತಯಾರಿಲ್ಲದೇ ಇರುವುದೂ ಇದೇ ಕಾರಣಕ್ಕೆ. ಅವಳ ಮನೋನೆಲೆಯ ಸ್ತರ ಬರೀ ಜೀವನವನ್ನಲ್ಲ, ಸಹ ಜೀವನವನ್ನು ಬಯಸುತ್ತಿದೆ. ಕೊನೆಗೂ ಆತನನ್ನೇ ಮದುವೆಯಾಗಬೇಕೆಂದರೆ ಚಿನ್ನಮ್ಮ ಸಾವಿಗೂ ತಯಾರು. ಆದರೆ ಅದೇ ಸಿಂಬಾವಿ ಹೆಗ್ಗಡೆಯನ್ನು ಮದುವೆಯಾಗಲು ತಯಾರಿರುವ ಮಂಜಮ್ಮನಿಗೆ ಅದೊಂದು ಸಮಸ್ಯೆಯಲ್ಲ. ಯಾಕೆಂದರೆ, ಅವಳಿಗೆ ಅದೊಂದು ಜೀವನೋಪಾಯ. ಅಲ್ಲಿ ಅವಳು ಸುಖವಾಗಿರುತ್ತಾಳಾ / ಬಿಡುತ್ತಾಳಾ ಎಂಬುದು ಬೇರೆ ವಿಚಾರ. ಆಸ್ತಿವಂತ ಸಿಕ್ಕಿದರೆ ಜೀವನ ಸುಧಾರಿಸುತ್ತದೆ ಎಂಬ ಚೌಕಟ್ಟಿಗೆ ಆಕೆ (ಹಲವರಂತೆ) ಬಂಧಿತಳು.

ಹಾಗೆಯೇ ಇನ್ನೊಂದು ಮನೋನೆಲೆಯಿದೆ. ಅದು ರಂಗಮ್ಮನದು. ಅವಳು ಸತಿ ಪತಿ ಸಂಬಂಧ ದೈವಿಕವಾದುದು ಎಂದು ಭಾವಿಸುತ್ತಾಳೆ. (ಅವಳು ನಮಗೆ ಪರಿಚಿತಳಾಗುವ ಮೊದಲು ಶಂಕರ ಹೆಗ್ಗಡೆ ಪರಿಚಯವಾಗುವುದು ಕೂಡ ಆಕಸ್ಮಿಕ ಇರಲಿಕ್ಕಿಲ್ಲ!) ಹೀಗಾಗಿ ಅವಳಿಗದೊಂದು ಜನ್ಮ ಜನ್ಮಾಂತರ ಸಂಬಂಧವಾಗಿ ವಿಚಿತ್ರ ಅನುಭವಗಳಾಗಿ ಅಪರೂಪದ ಸಾವು ಸಂಭವಿಸಿ, ಉಳಿದವರಿಗೆ ಅದೊಂದು ಪುಣ್ಯಸಂಭವವಾಗಿ ಕಾಣುತ್ತಿರುತ್ತದೆ. ಇದೆಲ್ಲದರಾಚೆಗೆ ಕುವೆಂಪು ಮಂಡಿಸುತ್ತಿರುವುದೇನು? ಕುವೆಂಪುಗೆ ಹೆಣ್ಣು ಗಂಡು ಸಂಬಂಧ ಎಂಬುದು ಮನೋದೈಹಿಕ ಸಮ್ಮಿಲನದ ಅನುಭೂತಿ. ಅದೊಂದು ಆಗುವಿಕೆಯೇ ಹೊರತು ಕೇವಲ ಇರುವಿಕೆಯಲ್ಲ. ಈ ಕಾರಣದಿಂದಲೇ ಇದನ್ನು ತಮ್ಮ ಅರಿವಿಲ್ಲದೇ ಸಾಧಿಸಿದ ಐತ – ಪೀಂಚಲು ಮುಕುಂದಯ್ಯನ ಕಣ್ಣಿಗೆ ಶಿವ – ಶಿವಾಣಿಯರಾಗಿ ಕಾಣುತ್ತಾರೆ. ಹಮ್ಮಿಲ್ಲದ, ಪರಸ್ಪರತೆಯಲ್ಲಿ ಬೆಸೆದುಕೊಂಡಿರುವ ಇವರ ಇರುವಿಕೆಯಲ್ಲೂ ಒಂದು ಮಹತ್ ಇದೆ. ಆದ್ದರಿಂದ ಅದು ಆಗುವಿಕೆಯಾಗಿ ಪರಿವರ್ತನೆಯಾಗುತ್ತದೆ.

ಇದಕ್ಕೆ ಯಾವ ಚೌಕಟ್ಟುಗಳೂ ಇಲ್ಲ. ತನ್ನ ಜೀವದ ಒಂದು ಭಾಗವೇ ಆದ ಐತನನ್ನು ಪೀಂಚಲು ಎಂದೂ ವಂಚಿಸುವುದಿಲ್ಲ. – ಒಂದು ವೇಳೆ ಅವಳನ್ನು ಮುಕುಂದಯ್ಯ ಬಯಸಿ, ಅದನ್ನು ಒಪ್ಪಿಕೊಂಡರೂ – ಎಂಬ ಅಪರೂಪದ ಚಿತ್ರಣವೊಂದನ್ನು ಕುವೆಂಪು ನೀಡುತ್ತಾರೆ. ಅಂದರೆ, ಇದೊಂದು ದೇಹ ವ್ಯಾಪಾರ ಮೀರಿದ ಸಂಗತಿ ಎಂಬಂತೆ.

ಅತ್ಯಂತ ಸಾಮಾನ್ಯಳಾಗಿ ಬದುಕುವ, ಪ್ರಕೃತಿಯ ಒಂದಂಗವೋ ಎಂಬಂತೆ ಇರುವ ತಿಮ್ಮಿಗೂ ಕೂಡ ಸೂರ್ಯೋದಯದ ದೃಶ್ಯದ ಸೌಂದರ್ಯಾನುಭವವಾಗಬಲ್ಲುದು ಎಂದು ಚಿತ್ರಿಸುವ ಕುವೆಂಪು, ಗುತ್ತಿ ತಿಮ್ಮಿಯರಲ್ಲೂ ಅವರ ವ್ಯಕ್ತಿತ್ವದ ಸಾಮಾನ್ಯತೆಯಾಚೆಗಿನ ಸಂಗತಿಯನ್ನು ಗುರುತಿಸುತ್ತಾರೆ. ಇದು ಗುತ್ತಿ ತಿಮ್ಮಿಯರ ಸಂಬಂಧವನ್ನು ಬೆಸೆಯುತ್ತದೆ. ವಿವಾಹಪೂರ್ವದ ಕಾಡಿನ ಏಕಾಂತದಲ್ಲಿ ಗುತ್ತಿಯೊಂದಿಗಿದ್ದಾಗ ಅವಳು ಪೂರ್ವಸ್ಮರಣೆಯೊಂದಕ್ಕೆ ಹೋಗುತ್ತಾಳೆ. ಈ ಹಿಂದೆ ಬಚ್ಚ ತನಗೆ ಮಾಡಿದ್ದನ್ನೇ ಈಗ ಇವನೂ ಮಾಡಿಯಾನು ಎಂದು ನಿರೀಕ್ಷಿಸುವ ತಿಮ್ಮಿ ಬಚ್ಚನನ್ನು ಮದುವೆಯಾಗಲೊಲ್ಲದವಳು! ತಿಮ್ಮಿಗಾಗಿ ಎಲ್ಲ ಅಪಾಯಗಳನ್ನು ಎದುರು ಹಾಕಿಕೊಳ್ಳುವ ಗುತ್ತಿ ಅಂತಹ ಅಪಾಯವೊಂದರ ವಿಷಮ ಸ್ಥಿತಿಯಲ್ಲಿ ಇರುವಾಗಲೂ ಗುಡಿಸಲಿನ ಏಕಾಂತದಲ್ಲಿ ಕೇಳಿಸುವ ಹೆಜ್ಜೆ ಸಪ್ಪಳ ಪುಟ್ಟಿಯದಿರಬಹುದು ಎಂದು ಊಹಿಸುತ್ತಾ ಅವಳನ್ನು ಬಯಸುತ್ತಾನೆ! ಈ ವಿವರಣೆಗಳೆಲ್ಲವೂ ಅತ್ಯಂತ ಸಹಜವೆಂಬಂತೆ ಬರುತ್ತವೆ. (ಇಲ್ಲಿ ಸರಿ ತಪ್ಪುಗಳ ವಿವೇಚನೆಗೆ ಕುವೆಂಪು ಹೋಗುವುದಿಲ್ಲ.) ಇವರಿಬ್ಬರೂ, ಒಬ್ಬರಿಂದ ಇನ್ನೊಬ್ಬರು ಪಡೆಯುವ ದೈಹಿಕ ಸಾಂಗತ್ಯಗಳಾಚೆಯ ಸಹಜೀವನವೊಂದನ್ನು ದಂಪತಿಗಳಾಗಿ ಪಡೆಯ ಬೇಕೆಂಬ ಉತ್ಕಟೇಚ್ಛೆಯಿಂದ ಬಂಧಿತರು ಎಂಬುದನ್ನು ರುದ್ರ ಭೀಕರ ಸನ್ನಿವೇಶದಲ್ಲೂ ತಿಮ್ಮಿ ಒಂಟಿಯಾಗಿ ಮನೆಬಿಟ್ಟು ಬರುವ ಸಂದರ್ಭದ ತೀವ್ರತೆಯಲ್ಲಿ ಕಾಣಬಹುದಾಗಿದೆ. ಮುಕುಂದಯ್ಯ ಚಿನ್ನಮ್ಮರೂ ಕೂಡ ಚೌಕಟ್ಟುಗಳನ್ನು ಮೀರಿ ವರ್ತಿಸುವ, ಎದುರಿಸುವ ಸಾಹಸಕ್ಕೆಳಸುವಲ್ಲಿಯೂ ಇದನ್ನು ಗಮನಿಸಬಹುದಾಗಿದೆ. ಹಾಗಿದ್ದೂ ಇವೆಲ್ಲವನ್ನು ಸಾಧಿಸಲು ವಿಶೇಷವಾದ ಜ್ಞಾನ ಬೇಕಿಲ್ಲ. ತಮ್ಮ ಸಹಜೀವಿಗಳೊಂದಿಗೆ ಮಾನವೀಯ ತುಡಿತ ಇದ್ದರೆ ಸಾಕು, ಸುಖ ಅರಸುವುದಕ್ಕಿಂತ, ಅನುಭವಿಸುವ ಅರಳಿದ ಮನಸ್ಸು ಸಾಕು ಎಂಬ ಸೂಚನೆಯನ್ನು ಕುವೆಂಪು ನೀಡಿದಂತೆ ಭಾಸವಾಗುತ್ತದೆ. ಯಾಕೆಂದರೆ, ಇವರಾರೂ ಬಾಹ್ಯಜ್ಞಾನದಿಂದ ವಿಶೇಷವಾಗಿ ಪ್ರಭಾವಿತರಲ್ಲ. ಆದರೆ ಇಲ್ಲೊಂದು 'ಆಗುವಿಕೆ' ಸಂಭವಿಸಿದೆ. ಇದನ್ನು ಸ್ಪಷ್ಟ ಪಡಿಸಿಕೊಳ್ಳಬೇಕೆಂದರೆ, ಈ ಕಾದಂಬರಿಯಲ್ಲಿ ಹೆಣ್ಣುಗಂಡಿನ ಸಂಬಂಧವು ಕೇವಲ ಇರುವಿಕೆಯಷ್ಟೇ ಆದಾಗ ಏನಾಗುತ್ತದೆ ಎಂಬುದನ್ನು ಗಮನಿಸಬೇಕು. ಕೆಲವರಿಗೆ ಅದು ಬದುಕಿಗೆ ಒಂದು ಸಾಧನವಾಗಿರುತ್ತದೆ. ಅಂತಕ್ಕ, ನಾಗತ್ತೆ, ಕಾವೇರಿ ಮೊದಲಾದವರಲ್ಲಿ ಇದನ್ನು ಕಾಣಬಹುದು. ಇವರೆಲ್ಲರೂ ನಂಬಿಕೆ ದ್ರೋಹದ ಮಹಾಪರ್ವವೊಂದನ್ನು ಸೂಚಿಸುತ್ತಾರೆ. ಹಾಗೆಯೇ ಕೇವಲ ಇರುವಿಕೆಯಾದಾಗ ಅದೊಂದು ವ್ಯಸನವೂ ಆಗಿರುತ್ತದೆ. ಚೀಂಕ್ರ, ತಿಮ್ಮಪ್ಪ, ಭರಮೈ ಹೆಗ್ಗಡೆ ಮೊದಲಾದವರಲ್ಲಿ ಇದನ್ನು ಕಾಣಬಹುದು. ಇನ್ನು ಕೆಲವರಿಗೆ ಅದೊಂದು ಜೀವನ ಅಷ್ಟೇ. ಶಂಕರ ಹೆಗ್ಗಡೆಯನ್ನು ಈ ಹಿನ್ನೆಲೆಯಲ್ಲಿ ನೋಡಬಹುದು. ಅವರ ಜೀವನದಲ್ಲಿ ಯಾವುದೇ ಏರುಪೇರೂ ಇಲ್ಲ, ಸ್ವಾದವೂ ಇಲ್ಲ.

ಗಂಡು ಹೆಣ್ಣಿನ ಸಂಬಂಧ 'ಆಗುವಿಕೆ' ಆದಾಗ ಅದೊಂದು ಕೊನೆಯಿಲ್ಲದ ರೋಮಾಂಚನವೆನಿಸಿಕೊಳ್ಳುತ್ತದೆ. ಪೀಂಚಲು ಮತ್ತು ಐತರಲ್ಲಿ ಇದನ್ನು ಕಾಣಬಹುದು. "ಅವರ ಸಂಬಂಧ ಇನ್ನೂ ಬಹುವಚನಕ್ಕೇರುವಷ್ಟು ಕೃತಕವೂ ದೂರವೂ ಆಗಿರಲಿಲ್ಲ." ಎನ್ನುತ್ತಾರೆ ಕುವೆಂಪು. ಗುತ್ತಿ ತಿಮ್ಮಿಯರದ್ದೂ ಇಂತದೇ ಆಗುವಿಕೆ. ಹುಲಿಕಲ್ಲು ನೆತ್ತಿಯಲ್ಲಿ ಕುರ್ಕನೊಂದಿಗೆ ಕಾದಾಡಿ ಹುಲಿಯ ಗಾಯಗೊಂಡಾಗ ಕನಲಿದ ಗುತ್ತಿ, 'ಎಲ್ಲಾ ನಿನ್ನಿಂದಲೇ ಆಗಿದ್ದು, ಸನಿಮುಂಡೆ' ಎಂದು ಅಕಾರಣವಾಗಿ ತಿಮ್ಮಿಯನ್ನು ಬೈಯುತ್ತಾನೆ. ಮೊದಲಿಗೆ ಆಘಾತಗೊಂಡರೂ ಚೇತರಿಸಿಕೊಂಡ ತಿಮ್ಮಿ ಥಟ್ಟನೆ, 'ನಾನಲ್ಲ ಸನಿಮುಂಡೆ, ನೀನೇ ಸನಿಮುಂಡೆಗಂಡ' ಎಂದು ತಿರುಗೇಟು ಕೊಡುತ್ತಾಳೆ. ಅವಾಕ್ಕಾದ ಗುತ್ತಿ, "ನಾನು ಇವಳಿಗೆ ಅಧೀನವಾಗದಿದ್ದರೆ ಇವಳು ನನಗೆ ಅಧೀನವಾಗುವ ಚೇತನವಲ್ಲ." ಎಂಬುದನ್ನು ಕಂಡುಕೊಳ್ಳುತ್ತಾನೆ. ಇಷ್ಟಾಗಿಯೂ ಇದು ಚೌಕಟ್ಟುಗೊಳಗಿನ ಲೋಕಕ್ಕೆ ಪುರಸ್ಕೃತ ಎಂದು ಹೇಳುವಂತಿಲ್ಲ. ಕಂಡುಕೊಳ್ಳುವಿಕೆ ಎಲ್ಲರಿಗೂ ಸಾಧ್ಯ ಎನ್ನುವಂತಿಲ್ಲ. ಐತ, ಪೀಂಚಲುವಿನ ಜೊತೆ ಸದಾ ಇರುವುದು ದೊಡ್ಡವರಿಗೆ ಮಾತ್ರವಲ್ಲ, ಕಾಡು, ತಿಮ್ಮುವಿನಂತ ಚಿಕ್ಕ ಹುಡುಗರಿಗೂ ತಮಾಷೆಯ ಸಂಗತಿಯಾಗುವುದನ್ನು ನೆನಪಿಸಿಕೊಳ್ಳಬಹುದು. ಹೌದು, ಆಗುವಿಕೆ ಸಂಭವಿಸಬೇಕಾದರೆ ಸಮಾನ ಪಾತಳಿಯ ಮನೋನೆಲೆಗಳು ಜೊತೆಗೆ ಸೇರಬೇಕಾಗುತ್ತದೆ. ಆಗ ಮಾತ್ರ ಅದು ಒಕ್ಕಟ್ಟು, ಇಲ್ಲವೆಂದರೆ ಬಿಕ್ಕಟ್ಟು ಎಂಬ ವಾಸ್ತವವನ್ನು ಈ ಕಾದಂಬರಿ ಕಾಣಿಸುತ್ತದೆ.



**(ತರೀಕೆರೆಯ ಸರ್ಕಾರಿ ಪ್ರ.ದ. ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕಿಯಾಗಿರುವ ಲೇಖಕಿ ಸಬಿತಾ ಬನ್ನಾಡಿ ಕನ್ನಡದ ಬಹು ಭರವಸೆಯ ವಿಮರ್ಶಕಿ ಮತ್ತು ಕವಯತ್ರಿಯೂ ಹೌದು)**

**೩ನೇ ಪುಟದಿಂದ)**

ಜಿಜ್ಞಾಸೆಯ ಭಾಗವೂ ಹೌದು. ಅಂತೆಯೇ, ಅದು ಶ್ರೇಷ್ಠತೆಯ ಬಗೆಗಿನ ಅವರ ಆಶಯವೂ ಹೌದು.ಇಂದು ಭಾರತವೂ ಸೇರಿದಂತೆ ಇಡಿಯ ಜಗತ್ತು ಪ್ರಜಾತಂತ್ರಕ್ಕೆ ಸಂಬಂಧಿಸಿದ ಒಂದು ದೊಡ್ಡ ಸಂಕಟವನ್ನು ಎದುರಿಸುತ್ತಿದೆ. ಪ್ರಜಾತಂತ್ರ ಒಳಗೊಳ್ಳುವ ಮೌಲ್ಯಗಳು ಹಾಗೂ ಈ ಮೌಲ್ಯಗಳನ್ನು ವಾಸ್ತವಗೊಳಿಸುವ ಸಂಘ-ಸಂಸ್ಥೆಗಳು ನಿಧಾನವಾಗಿ; ಆದರೆ ನಿಸ್ಸಂಶಯವಾಗಿ ಕ್ಷೀಣಿಸುತ್ತಿವೆ. ಜಗತ್ತಿನಾದ್ಯಂತ ಪ್ರಜಾತಂತ್ರಕ್ಕೆ ಬಂದೊದಗಿದ ಈ ವಿಪತ್ತನ್ನು ಅರ್ಥ ಮಾಡಿಕೊಳ್ಳಲು ಹಾಗೂ ಈ ವಿಪತ್ತಿನಿಂದ ಪಾರಾಗಲು ನಮ್ಮ ಬೌದ್ಧಿಕ ಚರಿತ್ರೆಯನ್ನು ನಾವು ಮರುಪರಿಶೀಲಿಸುವ ಅಗತ್ಯವಿದೆ. ಈ ಮರುಪರಿಶೀಲನೆಯಲ್ಲಿ ಲೋಹಿಯಾರಂತಹ ಚಿಂತಕರು ನಮಗೆ ಮಹತ್ವದ ಭೂಮಿಕೆಯಾಗುತ್ತಾರೆ. ಪ್ರಜಾತಂತ್ರ ಬಹುಸಂಖ್ಯಾಕವಾದವಾಗುವ ಸಾಧ್ಯತೆಗಳನ್ನು ಸೂಕ್ಷ್ಮವಾಗಿ ಗ್ರಹಿಸಿದ ಚಿಂತಕರಲ್ಲಿ ಲೋಹಿಯಾ ಒಬ್ಬರು ಮಾತ್ರವಲ್ಲ ಫ್ಯಾಸಿವಾದದ ಅಪಾಯಗಳನ್ನು ಅರಿತ ಭಾರತೀಯ ಚಿಂತಕರಲ್ಲಿ ಲೋಹಿಯಾ ಪ್ರಮುಖರು. ವೈಚಾರಿಕ ಸ್ವಾತಂತ್ರ್ಯದ ಹರಣ, ಅಭಿವೃದ್ಧಿಯ ಹೆಸರಿನಲ್ಲಿ ಮೂಲೆಪಾಲಾಗುವ ಸಾಮುದಾಯಿಕ ಅಸ್ಮಿತೆಗಳು, ಜಾಗತೀಕರಣದಿಂದಾಗಿ ರೆಕ್ಕೆ ಪುಕ್ಕ ಪಡೆದುಕೊಂಡ ವಿಶಿಷ್ಟ ಬಗೆಯ ಕಾರ್ಪೋರೇಟ್ ರಾಷ್ಟ್ರವಾದ ಜನಸಮುದಾಯಗಳಲ್ಲಿ ವ್ಯಾಪಿಸಿರುವ ನಿರ್ಲಜ್ಜ ರೂಪದ ಅನುಭೋಗ ಸಂಸ್ಕೃತಿ, ನಾಗರಿಕ ಸಮಾಜವನ್ನು ವ್ಯಾಪಿಸಿರುವ ಹಿಂಸೆ ಮತ್ತು ಅಸಹಿಷ್ಣುತೆ, ಇವೇ ಮೊದಲಾದ ನಮ್ಮ ಕಾಲದ ಈ ಎಲ್ಲ ಅಪಾಯಗಳ ವಿರುದ್ಧದ ಪ್ರಜಾತಾಂತ್ರಿಕ ಹೋರಾಟಕ್ಕೆ ನಮ್ಮನ್ನು ಸಜ್ಜುಗೊಳಿಸಲು ಲೋಹಿಯಾರಂತಹ ಚಿಂತಕರ ವಿಚಾರಗಳು ಅತ್ಯಮೂಲ್ಯವಾದದ್ದು.



**(ಲೇಖಕ ರಾಜಾರಾಮ ತೋಳ್ಪಾಡಿ ಮಂಗಳೂರು ವಿಶ್ವವಿದ್ಯಾಲಯದ ನಿವೃತ್ತ ರಾಜಕೀಯಶಾಸ್ತ್ರ ಪ್ರಾಧ್ಯಾಪಕರು ಮತ್ತು ನಮ್ಮ ಪ್ರಮುಖ ರಾಜಕೀಯ ಚಿಂತಕರು)**

---

**೨ನೇ ಪುಟದಿಂದ)**

ಫೆಬ್ರುವರಿ ಸಂಚಿಕೆಯ ಎಲ್ಲ ಲೇಖನಗಳೂ ಕುತೂಹಲದಿಂದ ಓದಿಸಿಕೊಂಡು ಹೋದವು. ನಿಮ್ಮ ಸಂಪಾದಕೀಯದಲ್ಲಿ ಬರೆದಿರುವಂತೆ 'ಭಾರತ ರತ್ನ'ವನ್ನು ದೇಶದ ಒಂದು ಭಾಗದ ಜನರನ್ನು ಮತಗಳಿಗಾಗಿ ಓಲೈಸುವ ಸಾಧನವನ್ನಾಗಿ ಮಾಡಿಕೊಳ್ಳುವ, ನ್ಯಾಯಾಂಗದ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡುವ ಮೋದಿಯವರ ರಾಜಕಾರಣ ಕರ್ನಾಟಕದಲ್ಲಿ ಮುಖ್ಯಮಂತ್ರಿಯವರ ಅರಣ್ಯರೋದನದ ನಡುವೆಯೂ ನಮ್ಮ ಶಾಸಕರು ನಿಶ್ಚಿಂತೆಯಿಂದ ರೆಸಾರ್ಟುಗಳಲ್ಲಿ ಹಾಯ್ದುಕೊಂಡು, ಮೇಯ್ದುಕೊಂಡು ಇರುವ ದುಃಸ್ಥಿತಿಯ ಬಗ್ಗೆ ಬರೆದಿರುವ ಮಾತುಗಳು ಆಲೋಚನಾರ್ಹವಾದವು. ಇನ್ನು ನಮ್ಮೂರ ಸಾಹಿತಿ ಎಸ್.ಎಲ್ ಭೈರಪ್ಪನವರ ಬಗೆಗಿನ ಟಿಪ್ಪಣಿ ಓದಿದಾಗ ಇವರಿಗೆ ಈಗ ರಾಜಕೀಯದ ಉಸಾಬರಿ ಏಕೆಎಂದು ಆಶ್ಚರ್ಯವಾಯಿತು.

**–ಪ್ರೊ. ಎಚ್. ಸಿದ್ದೇಗೌಡ,** ಚನ್ನರಾಯ ಪಟ್ಟಣ

ಪತ್ರಿಕೆಗೆ ನಾಡಿನ ಎಲ್ಲಾ ಮೂಲೆಗಳ ಓದುಗರಿಂದ ಬಂದಿರುವ ಹುಟ್ಟುಹಬ್ಬದ ಶುಭಾಶಯಗಳು ನಮ್ಮಂತಹ ಓದುಗರಲ್ಲಿ ಆಶಾವಾದ ತಂದಿದೆ. ಜಡ್ಡುಗಟ್ಟಿಸಿಕೊಂಡು ಜನಪರ ಕಾಳಜಿ ಇಲ್ಲದ ಸೋಗಲಾಡಿ ರಾಜಕೀಯದಿಂದ ಮುಂದೆ ಎದುರಿಸಬೇಕಾದ ದುರಂತಗಳನ್ನು ಕಟ್ಟಿಕೊಟ್ಟಿರುವ. ಸಂಪಾದಕರ ಟಿಪ್ಪಣಿ ನಮ್ಮನ್ನು ಆಳುವವರ ಅಂತಹ ಮೂರ್ಖ ಅಜ್ಞಾನವನ್ನು ಚಿತ್ರಿಸಿದರೆ, ಇನ್ನೊಂದು ಲೇಖನ ಮಾಲೆ ಇಂತಹ ತಿಳಿಗೇಡಿಗಳ ಆಡಳಿತದಿಂದ ಈ ಭೂಮಿಗೆ ಬಂದೊದಗಿದ ಆಪತ್ತನ್ನು ಚಿತ್ರಿಸಿ ಓದುಗರ ತಳಮಳ ಹೆಚ್ಚಿಸಿದೆ. ನಾರಾಯಣರೆಡ್ಡಿಯವರ ಸಾವು ಬೇಸಾಯಗಾರರನ್ನು ದುಃಖದಲ್ಲಿ ಮುಳುಗಿಸಿತು. ಹನೂರ ಸರ್ ಅವರ ಚಂದ್ರನತ್ತ ಓದಲು ಉತ್ಸುಕನಾಗಿರುವೆ.

**–ಡಾ. ಚಿಲ್ಕರಾಗಿ, ಸಿ ಬಿ ಕೊಪ್ಪಳ**

ಮಲ್ಲಿಕಾರ್ಜುನ ಹೊಸಪಾಳ್ಯರ 'ಭತ್ತದ ಕಣಗಾಲ' ಲಲಿತ ಪ್ರಬಂಧ ಓದುತ್ತಿದ್ದಂತೆ ನಮ್ಮೂರು ಬ್ಯಾತದಲ್ಲಿನ ನಮ್ಮ ಕಣದ ಬಳಿಗೂ ಪಕೋಡಾ ಮಾರುವ ಅಜ್ಜಿಯೊಬ್ಬಳು ಬರುತ್ತಿದ್ದುದು ನೆನಪಾಗಿ ಆ ಕಾಲದ ಸರಳ ಸುಖಗಳ ಸವಿ ಮನಸ್ಸನ್ನು ಹಾದುಹೋಯಿತು.

**–ಪ್ರೊ. ಬಿ.ಎನ್. ಶ್ರೀರಾಮ,** ಮೈಸೂರು

ಕಳೆದ ಸಂಚಿಕೆಯಲ್ಲಿನ ಎರಡೂ ಶ್ರದ್ಧಾಂಜಲಿ ಬರಹಗಳು ನನ್ನ ಮನ ಕಲಕಿದವು. ಮಧುಕರ ಶೆಟ್ಟಿಯವರ ಅಕಾಲಿಕ ಸಾವಂತೂ ರಾಜ್ಯಕ್ಕಾದ ಬಹುದೊಡ್ಡ ನಷ್ಟ. ಹಾಗೇ ಕೃಷಿ ಋಷಿ ನಾರಾಯಣ ರೆಡ್ಡಿಯವರ ಸಾವು ಕೂಡ. ಈ ಇಬ್ಬರೂ ತಮ್ಮದೇ ರೀತಿಯಲ್ಲಿ ನವ ಕರ್ನಾಟಕವನ್ನು ಕಟ್ಟಬಲ್ಲ ಕನಸು ಕಂಡವರಿಗೆ ಸ್ಫೂರ್ತಿಯಾಗಿದ್ದರು.

**–ಎನ್. ಕೃಷ್ಣಾ ರೆಡ್ಡಿ, ಬೆಂಗಳೂರು**

## ಡಾ. ಎಚ್.ಎಸ್.ಶ್ರೀಮತಿ ಅವರು ಅನುವಾದಿಸಿರುವ

# ಮಹಾಶ್ವೇತಾದೇವಿಯವರ ಕಥಾಸಾಹಿತ್ಯದ ಎರಡು ಸಂಪುಟಗಳು: ಒಂದು ನೋಟ

**–ಡಾ. ಎಚ್.ಎಸ್. ರಾಘವೇಂದ್ರ ರಾವ್**

"ಬುಡಕಟ್ಟಿನವರ ಪಾಲಿಗೆ ಅತ್ಯಂತ ದೊಡ್ಡ ಶತ್ರು ಎಂದರೆ ರಸ್ತೆ"
–ಮಹಾಶ್ವೇತಾದೇವಿ



ಇದು ಪುಸ್ತಕ ವಿಮರ್ಶೆಯೂ ಅಲ್ಲ, ಅನುವಾದದ ವಿಮರ್ಶೆಯೂ ಅಲ್ಲ. ಕಲೆಯ ಬಗ್ಗೆ, ಸಮಾಜದ ಬಗ್ಗೆ ನಮಗಿರುವ ಪರಿಕಲ್ಪನೆಗಳನ್ನೇ ಕತ್ತು ಪಟ್ಟಿ ಹಿಡಿದುಕೊಂಡು ಪ್ರಶ್ನಿಸುವ ಮಹಾಶ್ವೇತಾದೇವಿಯವರು ನಮ್ಮನ್ನು ನಾವೇ ಹೊಸಬೆಳಕಿನಲ್ಲಿ ನೋಡಿಕೊಂಡು, ನಾಚಿ ತಲೆತಗ್ಗಿಸುವಂತೆ ಮಾಡುತ್ತಾರೆ. ನಾವೇ ಕಟ್ಟಿಕೊಂಡಿರುವ 'ಕಂಫರ್ಟ್ ಜೋನ್'ಗಳಿಂದ ಹೊರಬರುವಂತೆ ಮಾಡುತ್ತಾರೆ. ಕಲ್ಕತ್ತಾ ನಗರದ ಮಧ್ಯಮವರ್ಗದಲ್ಲಿ ಬೆಳೆದು ಬುಡಕಟ್ಟು ಜನಾಂಗಗಳ ಬದುಕಿನ ಭಾಗವೇ ಆದ ಈ ಲೇಖಕಿ 'ಅಪವರ್ಗೀಕರಣ'ದ(ಡಿ–ಕ್ಲಾಸಿಫಿಕೇಶನ್) ಅತ್ಯುತ್ತಮ ಮಾದರಿ. ನಮ್ಮ ಅಸಹಾಯಕತೆಯೂ ಹುಸಿಯೆನ್ನುವುದಕ್ಕೆ ಅವರು ಬದುಕಿದ ಬಗೆಯೇ ಸಾಕ್ಷಿಯಾಗಿರುತ್ತದೆ.

ಆಕ್ಟಿವಿಸಂ ಮತ್ತು ಸೃಜನಶೀಲತೆಗಳ ನಡುವಿನ ಸಂಬಂಧಾಂತರಗಳ ಬಗ್ಗೆ, ಒಂದು ಇನ್ನೊಂದರ ಹಾಗೆ ಮರೆಯುತ್ತಿರುವ ದುರಂತದ ಬಗ್ಗೆ ಗಂಭೀರವಾದ ಚರ್ಚೆಯು ಅಗತ್ಯವಾಗಿರುವ ನಮ್ಮ ಕಾಲದಲ್ಲಿ ಮಹಾಶ್ವೇತಾದೇವಿಯವರ ಬದುಕು, ಬರಹಗಳ ಓದು ಹಲವು ಒಳನೋಟಗಳನ್ನು ನೀಡಬಲ್ಲುದು. ಸುಮಾರು ಮೂವತ್ತು ವರ್ಷಗಳಿಂದ ಅವರ ಬರವಣಿಗೆಯ ಅನುವಾದದ ಕೆಲಸದಲ್ಲಿ ತುಂಬು ಕಾಳಜಿಯಿಂದ ತೊಡಗಿಕೊಂಡಿರುವ ಶ್ರೀಮತಿಯವರ ಇತರ ಬರವಣಿಗೆಯ ಹಾಗೆ ಇದು ಕೂಡ ನಿರ್ಲಕ್ಷ್ಯಕ್ಕೆ ಗುರಿಯಾಗಿದೆ. ಮಹಾಶ್ವೇತಾ ದೇವಿಯವರು ನಮ್ಮ ನಾಡಿನ ಅತ್ಯುತ್ತಮ ಲೇಖಕರಲ್ಲಿ ಒಬ್ಬರಾಗಿದ್ದುದು ಮಾತ್ರವಲ್ಲ, ಕೊನೆಯ ಕ್ಷಣದವರೆಗೂ ತಮ್ಮ ನಂಬಿಕೆಗಳಿಗೆ ಅನುಗುಣವಾಗಿಯೇ ಬದುಕಿದರು. ನಮ್ಮಂತಹ ಹತ್ತು ಹಲವು ಬುದ್ಧಿಜೀವಿಗಳ ಲೋಕವಂಚನೆ ಹಾಗೂ ಆತ್ಮವಂಚನೆಗಳಿಗೆ ಕನ್ನಡಿ ಹಿಡಿಯುವಂತೆ ಬದುಕಿದರು.

೧೯೯೩ರಲ್ಲಿ ಪ್ರೊ. ಬರಗೂರು ರಾಮಚಂದ್ರಪ್ಪನವರು ಸಾಹಿತ್ಯ ಅಕಾಡೆಮಿಯ ಕಾರ್ಯಕ್ರಮವೊಂದಕ್ಕೆ ಮಹಾಶ್ವೇತಾ ಅವರನ್ನು ಮುಖ್ಯ ಅತಿಥಿಯಾಗಿ ಬರಮಾಡಿಕೊಂಡಿದ್ದರು. ಹಲವು ನಕ್ಷತ್ರಗಳ ಹೋಟೆಲ್‌ನಲ್ಲಿ ತಂಗಲು ನಿರಾಕರಿಸಿದ ಆಕೆ, ಯಾರಾದಾದರೂ ಮನೆಯಲ್ಲಿ ಉಳಿದುಕೊಳ್ಳುವೆನೆಂದು ಹೇಳಿದರು. ಆಗ, ನನ್ನ ಗೆಳೆಯರಾದ ಶ್ರೀಮತಿ ಮತ್ತು ಕೆ.ವಿ. ನಾರಾಯಣ ಅವರ ಮನೆಯಲ್ಲಿ ಎರಡು ಮೂರು ದಿನ ಇದ್ದರು. ನಾವು ಅವರನ್ನು ಮೊದಲ ಬಾರಿ ಭೇಟಿಯಾಗಿದ್ದು ಅಲ್ಲಿ. ಹೆಸರಿಗೆ ತಕ್ಕ ಹಾಗೆ ಅಚ್ಚ ಬಿಳಿಯ ಉಡುಪನ್ನು ಧರಿಸಿದ್ದ ಆಕೆ ನಮ್ಮೆಲ್ಲರ ಮೇಲೆ ಎಂದಿಗೂ ಅಳಿಸದ ಪ್ರಭಾವ ಬೀರಿದರು.

ಸರಿಸುಮಾರು ಅದೇ ಕಾಲದಲ್ಲಿ ಶ್ರೀಮತಿಯವರು ಕನ್ನಡಕ್ಕೆ ತಂದ 'ಸ್ತನದಾಯಿನೀ' ಇಂದಿಗೂ ಸ್ತ್ರೀವಾದದ ಪ್ರಮುಖ ಪಠ್ಯಗಳಲ್ಲಿ ಒಂದು. ಆದರೆ, "ನನ್ನ ಆ ಕತೆಯ ನಾಯಕಿ ಯಶೋದ ಕೇವಲ ಪಶ್ಚಿಮ ಬಂಗಾಳಕ್ಕಲ್ಲ, ಇಡೀ ಭಾರತಕ್ಕೆ ಒಡ್ಡಿದ ಪ್ರತಿಮೆ." ಎಂದು ಹೇಳುವುದರ ಮೂಲಕ ಮಹಾಶ್ವೇತಾ ಅವರು ಕತೆಗೆ ಇನ್ನೊಂದೇ ಆಯಾಮವನ್ನು ಕೊಟ್ಟರು. ಹಾಗೆಯೇ ಪಕ್ಷ–ರಾಜಕೀಯದಲ್ಲಿ ಸಂಪೂರ್ಣವಾದ ಅನಾಸಕ್ತಿಯನ್ನು ತೋರಿಸುತ್ತಲೇ ನೂರಕ್ಕೆ ನೂರರಷ್ಟು ಜನಪರವಾದ ರಾಜಕೀಯವನ್ನು ಕಟ್ಟಿಕೊಡುವ ವಿಚಾರಗಳನ್ನು ಹೇಳಿದರು, ಕಥೆ–ಕಾದಂಬರಿಗಳನ್ನು ಬರೆದರು. 'ನನಗೆ ಕೆಲಸ ಮಾಡುವುದು ಮುಖ್ಯ. ರಾಜಕೀಯ ಮಾಡಲು ಪುರಸೊತ್ತಿಲ್ಲ. ಬುಡಕಟ್ಟುಗಳ ಶೋಷಣೆ ಮಾಡುವುದರಲ್ಲಿ ಎಲ್ಲ ಪಕ್ಷಗಳೂ ಒಂದೇ" ಎಂದು ಸ್ಪಷ್ಟವಾಗಿ ಹೇಳಿದರು. ಒಂದಲ್ಲ ಒಂದು ಪಕ್ಷದ ಬಾಲಬಡುಕರಾಗಿ ಜಾಣಕುರುಡು, ಜಾಣಕಿವುಡುಗಳನ್ನು ನಟಿಸುತ್ತಿರುವ ನಮ್ಮ ಹತ್ತು ಹಲವು ಬುದ್ಧಿಜೀವಿಗಳಿಗೆ ಇಲ್ಲಿ ಒಂದು ಪಾಠ ಇದೆ.

ಮಹಾಶ್ವೇತಾ ಅವರು ನಮ್ಮ ಚಿಂತನೆಗಳಲ್ಲಿ ತುಂಬಿಕೊಂಡಿರುವ ಭ್ರಮೆಯ ಬಲೂನುಗಳಿಗೆ ಸೂಜಿ ಚುಚ್ಚುವುದರಲ್ಲಿ ನಿಪುಣರು. ಅವರ ಒಂದು ಪಾತ್ರ, "ಅದೇ ನಿಮಗೆ, ಧಣಿಗಳಿಗೆ, ಸಾಹುಕಾರರಿಗೆ ಸ್ವಾತಂತ್ರ್ಯನೋ ಏನೋ ಬಂತಲ್ಲ, ಅಗ ಧಣಿ ನಮಗೆಲ್ಲ ಅನ್ನ ರೊಟ್ಟಿ ಮಾಡಿಸಿ ಊಟಕ್ಕೆ ಕೊಟ್ಟಿದ್ದರು. ದೊಡ್ಡ ಹಬ್ಬ ಮಾಡಿದ್ದರು." ಎಂದು ಹೇಳಿದರೆ, ಇನ್ನೊಂದು ಪಾತ್ರ, "ನಮ್ಮ ಊರು ಎಂದರೆ, ಈ ಸಿಯೋರಾ ಹಳ್ಳಿ. ದೇಶ ಎಂದರೆ ಅದು ಯಾವುದು?.....ಇಂಡಿಯಾ ಎಂದರೆ ಅದೇನದು" ಎಂದು ಕೇಳುತ್ತದೆ. ಮತ್ತೊಂದು ಪಾತ್ರ, "ಮೊದಲೆತ್ತಿಕೊಳ್ತಾ ನಮ್ಮ ಈ ಸ್ವಾತಂತ್ರ್ಯ ಎಂಬ ಸಂಗತಿಯೇ ಪೊಳ್ಳಾದದ್ದು. ಅಂದ ಮೇಲೆ ಈ ಸ್ವಾತಂತ್ರ್ಯೋತ್ತರ ಭಾರತದ ಪ್ರಜಾಪ್ರಭುತ್ವ ಎಂಬ ಮಾತು ಇನ್ನಷ್ಟು ಪೊಳ್ಳಾದದ್ದು." ಎಂದು ಹೇಳುತ್ತದೆ. ಈ ರೀತಿಯ ಹಲವು ಕಹಿಸತ್ಯಗಳು ಅವರ ಬರವಣಿಗೆಯಲ್ಲಿ ಇಡಿಕಿರಿದಿವೆ. ಆದ್ದರಿಂದಲೇ ಅವರ ಬರವಣಿಗೆಗೆ ಹತ್ತು ಹಲವು ಪ್ರಶಸ್ತಿಗಳು ಬಂದರೂ ಅದು ನಮ್ಮ 'ಮೇನ್‌ಸ್ಟ್ರೀಮ್' ಸಾಹಿತ್ಯಕ ಅಧ್ಯಯನದ ಭಾಗವಾಗಲಿಲ್ಲ. ಬುಡಕಟ್ಟುಗಳಿಗೆ ಬಂದಿರುವ ಗತಿಯೇ ಅವರನ್ನು ಕುರಿತ ಬರವಣಿಗೆಗೂ ಬರುವುದರಲ್ಲಿ ಆಶ್ಚರ್ಯವೇನಿಲ್ಲ. ಒರಿಯಾ ಭಾಷೆಯಲ್ಲಿ ಬಂದ ಗೋಪೀನಾಥ ಮೊಹಂತಿಯವರ ಕೃತಿಗಳೂ ಹೀಗೆಯೇ ಅವಜ್ಞೆಗೆ ಗುರಿಯಾದವು. (ಅಮೆಜಾನ್ ವೆಬ್ ಸೈಟ್ ನಲ್ಲಿ ಅವರ ಒಂದೇ ಒಂದು ಇಂಗ್ಲಿಷ್ ಅನುವಾದ ಲಭ್ಯವಿದೆ!)

ಸ್ವಾನುಭವದ ತೆಕ್ಕೆಗೆ ಸಿಕ್ಕಿದುದನ್ನೇ, ಪ್ರಾದೇಶಿಕವಾದುದನ್ನೇ ಬರೆದರೂ ಅದು ಎಲ್ಲ ದೇಶಕಾಲಗಳ ಮನುಷ್ಯನ ಭಂಗ ಬವಣೆಗಳಿಗೆ ದನಿಯಾಗುವಂತೆ ಬರೆಯುವುದು ದೊಡ್ಡ ಸವಾಲು. ಬಾಲ್ಯ ಮತ್ತು ತಾರುಣ್ಯಗಳಲ್ಲಿ ಪಶ್ಚಿಮ ಬಂಗಾಳದಲ್ಲಿ ಪಡೆದ ಅನುಭವ ಮತ್ತು ಅನಂತರದ ಹಲವು ದಶಕಗಳು ಕೆಲವು ಬುಡಕಟ್ಟುಗಳ ಜನರ ಒಳಿತಿಗಾಗಿ ಒಂದೇ ಸಮನೆ ಕೆಲಸ ಮಾಡಿದುದರ ಫಲವಾಗಿ ಪಡೆದ ಅನುಭವಗಳೇ ಮಹಾಶ್ವತಾದೇವಿ ಅವರ ಬರವಣಿಗೆಯ ಕಚ್ಚಾವಸ್ತು. ತಾನು ಕಂಡ, ಕೇಳಿದ ಸಂಗತಿಗಳ ಬಗ್ಗೆಯೇ ಅವರು ಬರೆದಿರುವುದು. ಆದರೆ, ಆ ಬರೆಹ ಎಲ್ಲೆಡೆಯೂ ಹರಡಿಕೊಂಡಿರುವ ಬುಡಕಟ್ಟುಗಳ, ಬಡವರ ಶೋಷಣೆಯ ಕತೆಯಾಗುತ್ತದೆ. ಅವರ ಪಾತ್ರಗಳು ಅನನ್ಯವೂ ಹೌದು, ಪ್ರಾತಿನಿಧಿಕವೂ ಹೌದು. ಈ ಪಾತ್ರಗಳು ಅಮೆರಿಕಾದ ಎರಡೂ ಖಂಡಗಳೂ ಸೇರಿದಂತೆ ಯಾವುದೇ ದೇಶದ ಬುಡಕಟ್ಟುಗಳ ಜೀವನವೆಂದು ಅವರು ಹೇಳುತ್ತಾರೆ. ದ್ರೋಪ್ದಿ, ಯಶೋದ, ದೌಲೋತಿ, ಸುಜಾತ, ರುಡಾಲಿ, ಭಿಕಿಯ, ನಗೇಸಿಯಾ ಎಲ್ಲರ ಮಾತೂ ಹೀಗೆಯೇ. ಕಲಾತ್ಮಕತೆಯ ಬಗ್ಗೆ ತಲೆಕೆಡಿಸಿಕೊಳ್ಳದಿದ್ದರೂ ಅನುಭವಗಳ ತೀವ್ರತೆಯಿಂದಲೇ ಕಲೆಯಾಗುವ ಹಾಗೂ ಅದನ್ನು ಮೀರುವ ಇಂಥ ಬರವಣಿಗೆ ಸ್ವ–ಮರುಕ ತುಂಬಿದ ಆತ್ಮಕಥನಗಳಿಗಿಂತ ಬಹಳ ಭಿನ್ನವಾದುದು. ಇಲ್ಲಿ ಲೇಖಕಿ ಅನ್ಯರನ್ನು ದಾಖಲೆ ಮಾಡುವ ವ್ಯಕ್ತಿಯೇ ವಿನಾ ತನ್ನ ಗೋಳುಕರೆಯನ್ನು ಹೇಳಿಕೊಳ್ಳುವ ಆತ್ಮಲೀನೆಯಲ್ಲ. ಬದುಕೆಲ್ಲವೂ ಸಾರ್ವಜನಿಕವಾದಾಗ ಖಾಸಗೀ ನಿವೇದನೆಗಳಿಗೆ ಎಡೆಯಿರುವುದಿಲ್ಲ. ಬುಡಕಟ್ಟುಗಳ ಪರವಾಗಿ ನಡೆದಿರುವ ಎಲ್ಲ ಹೋರಾಟಗಳಲ್ಲೂ ತಾನು ಭಾಗವಹಿಸಿರುವೆನೆಂದು ಅವರು ಹೆಮ್ಮೆಯಿಂದಲೇ ಹೇಳಿಕೊಳ್ಳುತ್ತಾರೆ. (ಇಂಥ ಹಲವು ಹೋರಾಟಗಳ ಮುಂಚೂಣಿಯಲ್ಲಿ ಮೇಧಾ ಪಾಟ್ಕರ್, ಊರ್ಮಿಳಾ ಚಾನು ಇರೋಮ್, ಅರುಂಧತಿ ರಾಯ್, ಮಹಾಶ್ವೇತಾದೇವಿ ಮುಂತಾದ ಹೆಣ್ಣುಮಕ್ಕಳು ಇರುವುದು ಆಕಸ್ಮಿಕವೆಂದು ನನಗೆ ತೋರುವುದಿಲ್ಲ.)

ಬುಡಕಟ್ಟು ಸಮುದಾಯಗಳ 'ಪ್ರಗತಿ ಮೀಮಾಂಸೆ' ಮಹಾಶ್ವೇತಾದೇವಿಯವರ ಬರವಣಿಗೆಯ ಇನ್ನೊಂದು ಪ್ರಮುಖ ಕಾಳಜಿ. ಅವರ ಪ್ರಕಾರ ಬುಡಕಟ್ಟಿನವರ ಪಾಲಿಗೆ ಅತ್ಯಂತ ದೊಡ್ಡ ಶತ್ರು ಎಂದರೆ ರಸ್ತೆ. ದೊಡ್ಡ ರಸ್ತೆಯೇ ಅವರಿಗಿಂದು ಮುಳುವಾಗಿ ಕಾಡುತ್ತಿರುವ ಶತ್ರು. ಈ ರಸ್ತೆ ಅವರು ಬೆಳೆದುದನ್ನೆಲ್ಲ ತನಗೆ ಬೇಕೆಂದಲ್ಲಿಗೆ ಸಾಗಿಸಿಬಿಡುತ್ತದೆ, ತರಕಾರಿಗಳನ್ನೂ ಬಿಡದೆ. ಕ್ಷಾಮ ಡಾಮರಗಳಂತಹ ಪ್ರಕೃತಿ ವಿಕೋಪಸದ ಸಂದರ್ಭಗಳಲ್ಲಂತೂ ಈ ರಸ್ತೆ ದೊಡಡ ದೊಡ್ಡ ಲಾರಿ, ಟ್ರಕ್ಕುಗಳನ್ನು ತಂದು ಅವರ ಮಕ್ಕಳು ಮರಿಗಳನ್ನೂ ಬಿಡದೆ ಜೀತದಾಳುಗಳನ್ನಾಗಿ ಕೊಂಡೊಯ್ದು ಬೇರೆ ಕಡೆ ಮಾರಿಬಿಡುತ್ತದೆ' ಅವರನ್ನು ಅವರು ಇರುವ ಹಾಗೆಯೇ ಬಿಟ್ಟುಬಿಡಬೇಕೆನ್ನುವುದನ್ನು ಅವರು ಒಪ್ಪುವುದಿಲ್ಲ. ಪ್ರತಿಯೊಂದು ಬುಡಕಟ್ಟಿನ ರಿಚುಯಲ್ಸ್ ಮತ್ತು ಸಂಪ್ರದಾಯಗಳನ್ನು ಹಾಗೆಯೇ ಉಳಿಸಿಕೊಳ್ಳುವುದೂ ಅವರಿಗೆ ಬೇಡ. ನಾಗರಿಕ ಸಮಾಜದಲ್ಲಿ ಪ್ರತಿಯೊಬ್ಬರಿಗೂ ದೊರೆಯಬೇಕಾದ ಕನಿಷ್ಠ ಸೌಲಭ್ಯಗಳು ಅವರಿಗೂ ದೊರೆಯಬೇಕೆಂಬುದು ಈ ಲೇಖಕಿಯ ಆಗ್ರಹ. ಆದರೆ ಯಾವುದೋ ಕೈಗಾರಿಕೋದ್ಯಮಿಯ ಹಿತಾಸಕ್ತಿಗಾಗಿ ಬುಡಕಟ್ಟುಗಳ

ನಿರ್ವಸತೀಕರಣವನ್ನು ಅವರು ವಿರೋಧಿಸುತ್ತಾರೆ. ಇಂಥ ಸೌಲಭ್ಯಗಳು ಅವರಿರುವ ಕಡೆಯೇ ಬರಬೇಕು. ಬುಡಕಟ್ಟು ಭಾಷೆಗಳಲ್ಲಿ 'ಶೋಷಣೆ', 'ಅತ್ಯಾಚಾರ' ಮುಂತಾದ ಸಂಗತಿಗಳನ್ನು ವಿವರಿಸುವ ಪದಗಳೇ ಇಲ್ಲವಂತೆ. ಇಂಥವರನ್ನು ಸುಲಿಗೆ ಮಾಡುವ ವ್ಯವಸ್ಥೆಯ ಬಗ್ಗೆ ಅವರಿಗೆ ಸಿಟ್ಟು. ಬುಡಕಟ್ಟು ಜನರ ಮನಸ್ತತ್ವವನ್ನು ಅರ್ಥಮಾಡಿಕೊಳ್ಳದ 'ನಾಗರಿಕ' ಸಮಾಜವೇ ಹೆಚ್ಚು ಬರ್ಬರವೆಂಬ ಸಂಗತಿಯನ್ನು ಅವರ ಕತೆಗಳು ಮತ್ತೆ ಮತ್ತೆ ತೋರಿಸಿಕೊಡುತ್ತವೆ. ಒಂದೇ ಭಾಷೆಯನ್ನು ಮಾತನಾಡುವಾಗಲೂ ಅವರ ಮಾತು ನಮಗೆ ನಮ್ಮ ಮಾತು ಅವರಿಗೆ ಅರ್ಥವಾಗುವುದಿಲ್ಲ. ಮಹಾಶ್ವೇತಾ ಒಂದು ಕತೆಯಲ್ಲಿ ಹೀಗೆ ಹೇಳುತ್ತಾರೆ. "ವರ್ಗ ಆಧಾರಿತ ಸಮಾಜದ ನಡೆ ಯಾವಾಗಲೂ ಸಮಾನಾಂತರ ರೇಖೆಗಳ ಮೇಲೆಯೇ ನಡೆಯುತ್ತದೆ. ಈ ರೇಖೆಗಳು ಸಂಧಿಸುವ ಸಾಧ್ಯತೆಯೇ ಇಲ್ಲ. ಭಾಷೆಯೂ ವರ್ಗ ಆಧಾರಿತವೇ ಆಗಿರುತ್ತದೆ. ಶೋಷಣೆ ಮಾಡುತ್ತಿರುವವನು ಒಬ್ಬ ವ್ಯಕ್ತಿಯೇ ಆಗಿರಬಹುದು. ಅಷ್ಟೇಕೆ, ಬಡವರ ಬಗ್ಗೆ ನಿಜವಾದ ಕಾಳಜಿಯನ್ನೇ ಇಟ್ಟುಕೊಂಡು ಈ ಸಮಾಜದ ಕೊಳೆತ ವ್ಯವಸ್ಥೆಯಲ್ಲಿ ಪರಿವರ್ತನೆ ಬರಬೇಕೆಂದು ಖಚಿತವಾಗಿ ನಂಬಿ ಯಾವ ಪಾರ್ಟಿಗೂ ಸೇರದ ಕಾರ್ಯಕರ್ತನೇ ಆಗಿರಬಹುದು. ಈ ಎಲ್ಲರ ಹಿಂದಿ–ಬಂಗಾಳಿ–ಗುಜರಾತೀ ಅಥವಾ ಇನ್ನಾವುದೇ ಭಾಷೆಗಳೂ ಶೋಷಿತರ ಭಾಷೆಗಳಿಗೆ ಸಮಾನಾಂತರವಾಗಿಯೇ ಚಲಿಸುತ್ತಿರುತ್ತವೆ. ಅವು ಎಂದೂ ಪರಸ್ಪರ ಸಂಧಿಸುವುದು ಸಾಧ್ಯವೇ ಇಲ್ಲ."

ಅಷ್ಟೇ ಅಲ್ಲ, ಇಂದಿನ ಸನ್ನಿವೇಶದಲ್ಲಿ ಪ್ರತಿಭಟನೆ ಮಾಡಹೊರಡುವ ವಿದ್ಯಾವಂತರ ಸ್ಥಿತಿಯನ್ನೂ ಅವರು ವಿಡಂಬಿಸುತ್ತಾರೆ. "ಇಂದಿನ ವಿದ್ಯಾವಂತನು ವ್ಯವಸ್ಥೆಗೆ ಬೇಡವಾದ ಸಂಗತಿಗಳ ಬಗ್ಗೆ ತಲೆಕೆಡಿಸಿಕೊಳ್ಳಲು ಒಲ್ಲದವನಾಗುತ್ತಾನೆ. ಯಾರದಾದರೂ ತಲೆಯಲ್ಲಿ ಒಂದಿಷ್ಟು ಸ್ವಂತ ವಿಚಾರಗಳು ಸುಳಿದಾಡಿದರೂ ವ್ಯವಸ್ಥೆಯು ತನ್ನ ಅಸ್ತಿತ್ವಕ್ಕೆ ಸವಾಲು ಬಂತೆಂದು ಜಾಗರೂಕವಾಗಿಬಿಡುತ್ತದೆ. ಅದಕ್ಕೇ ವ್ಯವಸ್ಥೆಯು ವ್ಯಕ್ತಿಯ ಮಿದುಳಿನ ಕಣಗಳನ್ನು ಬಲಪ್ರಯೋಗ ಮಾಡಿ ಆವರಿಸಿಕೊಂಡುಬಿಡುತ್ತದೆ. ಅವನ ದೇಹ ಬೇಕಾದರೆ, ಸುಖವಾಗಿ ಫೋರ್‌ಹಾನ್ಸ್ ಟೂತ್‌ಪೇಸ್ಟಿನಿಂದ ಹಲ್ಲುಜ್ಜುವ ಸೌಲಭ್ಯವನ್ನು ಉಳಿಸಿಕೊಳ್ಳಬಹುದು..... ವ್ಯವಸ್ಥೆಯು ಹಾಕಿದ ತಾಳಕ್ಕೆ ಅನುಗುಣವಾಗಿ ಜನ ಹೆಜ್ಜೆಹಾಕಿ ಕುಣಿಯಲಾರಂಭಿಸುತ್ತಾರೆ."

'ಟಿರೋಡಕ್ಟಿಲ್' ಎನ್ನುವುದು ಮಹಾಶ್ವೇತಾ ದೇವಿ ಅವರು ಬುಡಕಟ್ಟುಗಳ ಸಂಗಡದ ಸಹಜೀವನದಿಂದ ಪಡೆದ ಅನುಭವಗಳ ಹಾಗೂ ತಳೆದ ನಿಲುವುಗಳ ಸಾರಸಂಗ್ರಹದಂತಿರುವ ನೀಳ್ಗತೆ. ಇಲ್ಲಿ ಅವರು ತಮಗೆ ಸಹಜವಾದ ಅನುಭವ ಕೇಂದ್ರಿತವಾದ ವಾಸ್ತವವಾದೀ ನಿರೂಪಣೆಯ ಜೊತೆಜೊತೆಗೆ ಸಾಂಕೇತಿಕತೆಯನ್ನೂ ಬಳಸಿಕೊಂಡಿದ್ದಾರೆ. ಲಕ್ಷಾಂತರ ವರ್ಷಗಳ ಹಿಂದೆ ಇದ್ದ, ಇಂದಿನ ಬುಡಕಟ್ಟು ಜನಾಂಗಗಳ ಪೂರ್ವಜರ ಆತ್ಮವು ಇದ್ದಕ್ಕಿದ್ದಂತೆ ಭಿಕಿಯ ಎಂಬ ಬುಡಕಟ್ಟಿನ ನಿವಾಸಿಗೆ ಹಾಗೂ ಪೂರ್ಣ ಎಂಬ ಬಿಹಾರಿನ ಪತ್ರಕರ್ತನಿಗೆ ಕಾಣಿಸಿಕೊಳ್ಳುತ್ತದೆ. ಅದರ ಅಚಿತಿಮ ಸಂದೇಶವನ್ನು ಗ್ರಹಿಸಲು ಯಾರಿಗೂ ಸಾಧ್ಯವಾಗುವುದಿಲ್ಲ. ಕೊನೆಗೆ ಅದನ್ನು ಕಡುಕತ್ತಲ ಗವಿಯೊಳಗೆ ವಿಸರ್ಜನೆ ಮಾಡಲಾಗುತ್ತದೆ. ಇದನ್ನು ಮಹಾಶ್ವೇತಾ ಅವರು ಹೀಗೆ ವಿವರಿಸುತ್ತಾರೆ: "ಇದೊಂದು ನವಸೃಷ್ಟಿಯ ಪುರಾಣ. ಏಕೆಂದರೆ ಸತ್ತು ಆತ್ಮರೂಪಿಗಳಾಗಿ ಹೋದ ಹಿರಿಯರು ನೂರಾರು ವರ್ಷಗಳ ಅಂತರದಲ್ಲಿ ಯಾವುದೋ ಅಪರಿಚಿತ ಹಕ್ಕಿಯ ಆಕಾರವನ್ನು ತಳೆದು ಇಲ್ಲಿಗೆ ಹೊರಳಿ ಬಂದದ್ದನ್ನು ಈ ಪುರಾಣ ಹೇಳುತ್ತದೆ. ಆದರೆ, ಅವರ ಮೌಖಿಕ ಪರಂಪರೆಯಲ್ಲೆಲ್ಲೂ ಇಂಥದೊಂದು ಪ್ರಸಂಗದ ಪ್ರಸ್ತಾಪವೇ ಇಲ್ಲ. ಆದರೆ ಇನ್ನುಮುಂದೆ ಅವರು ತಮ್ಮ ಸಂಕಟಮಯವಾದ ದುರದೃಷ್ಟದ ಬದುಕನ್ನೇ ಅನಿವಾರ್ಯವಾಗಿ ಬದುಕುತ್ತಾ ತಮಗೇನಾದರೂ ಸಂದೇಶವನ್ನು ಹೊತ್ತು ತರುವ ನೆರಳಿಗಾಗಿ ಕಾಯುತ್ತಿರುತ್ತಾರೆ. .... ಈ ಆದಿವಾಸಿಗಳೊಂದಿಗೆ ಸಂವಹನ–ಸಂಪರ್ಕಗಳನ್ನು ನಾವು ಸಾಧಿಸಲು ಸಾಧ್ಯವಾಗದೆ ಸೋತಿದ್ದೇವೆ. ಈ ಲೋಕವನ್ನು ಅರ್ಥಮಾಡಿಕೊಳ್ಳುವ ಯಾವುದೇ ಪ್ರಯತ್ನವನ್ನು ನಡೆಸದೆಯೇ, ನಾಗರಿಕತೆಯ ಹೆಸರಿನಲ್ಲಿ ಆ ಲೋಕವನ್ನು ನಿರ್ನಾಮ ಮಾಡಿಬಿಟ್ಟಿದ್ದೇವೆ.............. ಆದರೆ ನಿರ್ನಿಮಿತ್ತವಾಗಿ, ನಿರಂತರವಾಗಿ ಎಲ್ಲ ಕಟ್ಟುಪಾಡುಗಳನ್ನು ದಾಟಿ ಅವರನ್ನು ಪ್ರೀತಿಸುವುದು ಸಾಧ್ಯವಾಗುವುದಾದರೆ ಮಾತ್ರ (ಇದೆಲ್ಲವನ್ನೂ ಮತ್ತೆ ಕಟ್ಟಬಹುದು) ಈ ಹಲವು ಸಾವಿರ ವರ್ಷಗಳಲ್ಲಿ ನಾವು ಅವರನ್ನು ಪ್ರೀತಿಸಿಯೂ ಇಲ್ಲ. ಗೌರವಿಸಿಯೂ ಇಲ್ಲ." ಇಂಥ ಪ್ರೀತಿ ಕೂಡ ಅವರಿಗೋಸ್ಕರ ಅಲ್ಲ. ನಮ್ಮದೇ ನಾಗರಿಕತೆಯ ಉಳಿವಿಗಾಗಿ. ದಿನೇದಿನೇ ಬರ್ಬರವಾಗುತ್ತಿರುವ ವರ್ತಮಾನ ಮತ್ತು ಖಚಿತವಾಗುತ್ತಿರುವ ವಿನಾಶದಿಂದ ಬಿಡುಗಡೆ ಪಡೆಯಲೆಂದು. ಈ 'ಟಿರೋಡಕ್ಟಿಲ್' ನಾವೆಲ್ಲರೂ ಓದಲೇ ಬೇಕಾದ ಕತೆ. ಕನ್ನಡದಲ್ಲಿ ಇಂಥ ಇನ್ನೊಂದು ಕತೆಯಿಲ್ಲ. ಹಾಗೆ ನೋಡಿದರೆ, ಮಹಾಶ್ವೇತಾದೇವಿಯವರ ಬಹುಪಾಲು ಕತೆಗಳಿಗೆ ಈ ಮಾತು ಅನ್ವಯಿಸುತ್ತದೆ.

ಮಹಾಶ್ವೇತಾ ದೇವಿ ಅವರ ಕತೆ–ಕಾದಂಬರಿಗಳು ವಿಭಿನ್ನವಾದ ಕಲಾಮೀಮಾಂಸೆಯನ್ನು ಕಟ್ಟಿಕೊಡುತ್ತವೆ. ಇವುಗಳ ಗುರಿ ರಸಾನುಭವವನ್ನೋ ಸಂತೋಷವನ್ನೋ ಕೊಡುವುದಲ್ಲ. ಕಲಾಕೃತಿಯ ರೂಪದ ಬಗ್ಗೆ ಇಲ್ಲಿ ವಿಶೇಷವಾದ ಕಾಳಜಿಯಿಲ್ಲ. ಇಲ್ಲಿ ವಾಸ್ತವದ ಮಂಡನೆಗಿಂತ ಭಿನ್ನವಾದ ಭಾವನಾತ್ಮಕತೆಯಾಗಲೀ ಭಾವುಕತೆಯಾಗಲೀ ಇಲ್ಲ. ತಾತ್ವಿಕವಾದ ನಿರಾಶಾವಾದ ಮತ್ತು ಕ್ರಿಯಾಶೀಲವಾದ ಆಶಾವಾದ ಎರಡಕ್ಕೂ ಇಲ್ಲಿ ಎಡೆಯಿದೆ. ಪಾತ್ರಗಳು ತಮ್ಮ ವರ್ಗ–ವರ್ಣ–ಸನ್ನಿವೇಶಗಳ ಎರಕದಲ್ಲಿ ಮೂಡಿಬಂದಿರುವುದರಿಂದ ಅವುಗಳ ಸ್ವಭಾವ ಸ್ಪಷ್ಟವಾಗಿದೆ. ಲೇಖಕಿಯ ಒಲವು ನಿಲುವುಗಳೂ ಅಷ್ಟೇ ಸ್ಪಷ್ಟವಾಗಿದೆ. ಆದರೆ, ಯಾವುದೂ 'ಹುಸಿ' ವಕೀಲಿ ಎನ್ನಿಸುವುದಿಲ್ಲ. ಸಮತಾವಾದ, ಸಮಾಜವಾದ, ಸ್ತ್ರೀವಾದ ಮುಂತಾದ ಹತ್ತು ಹಲವು ನಿಲುವುಗಳು ಹೊರಗಿನಿಂದ ಕ್ಷಿಪ್ತವಾದ ಐಡಿಯಾಲಜಿಗಳಾಗದೆ ಜೀವನದ ಅನಿವಾರ್ಯತೆಯಿಂದಲೇ ಚಿಮ್ಮಿಬರುವ ಕ್ರಿಯೆಗಳಾಗಿಬಿಡುತ್ತವೆ. ದೋಪ್ದಿ, ಮೇರಿ, ದೌಲೋತಿ, ಸುಜಾತ ಮುಂತಾದ ಪಾತ್ರಗಳು ಪಂಡಿತಮಂಡಳಿಯಿಂದ ರೂಪಿತರಾದವರಲ್ಲ. ಇದು ಕಲೆಯ ಸೀಮಿತಗಳನ್ನೂ ಮೀರುವ ಕಲೆ. ಕಥೆಗಳ ಹರಹಿನಲ್ಲಿ ಅಲ್ಲಲ್ಲಿ ಬರುವ ಪುನರಾವರ್ತನೆ ಕೂಡ ಭಾರವೆನ್ನಿಸುವುದಿಲ್ಲ.

ಕರ್ನಾಟಕದ ಇಂದಿನ ಸಾಮಾಜಿಕ/ಸಾಂಸ್ಕೃತಿಕ ಸನ್ನಿವೇಶದಲ್ಲಿ ಮಹಾಶ್ವೇತಾ ಅವರನ್ನು ಸರಿಯಾಗಿ ಗ್ರಹಿಸುವ ಅಗತ್ಯವಿದೆ. ಅವರು ಹಿಂಸೆ ಮತ್ತು ಅಹಿಂಸೆಗಳ ನಡುವೆ ಖಚಿತವಾದ ಗೆರೆ ಎಳೆದು ಎಲ್ಲ ಬಗೆಯ ಹಿಂಸೆಯನ್ನು ಖಂಡಿಸಿದವರಲ್ಲ. ಸರ್ಕಾರ, ಸೈನ್ಯ ಮತ್ತು ಬಂಡವಾಳಶಾಹಿಗಳು ನಡೆಸುವ ರಕ್ತಸಹಿತ ಹಾಗೂ ರಕ್ತರಹಿತ ಹಿಂಸೆಗಳ ನಿಕಟ ಪರಿಚಯ ಅವರಿಗೆ ಇತ್ತು. '೧೦೮೪ ರ ತಾಯಿ' ಮತ್ತು 'ದೋಪ್ದಿ'ಗಳು ಈ ಬಗೆಯ ಹಿಂಸೆಯನ್ನು ನೇರವಾಗಿ ಹೇಳಿದರೆ ಉಳಿದ ಬರೆಹಗಳಿಗೆ ಅದರ ಅರಿವಿದೆ. ಬುಡಕಟ್ಟು ಜನಾಂಗದವರ ದುಃಖದ ಹಾಗೆಯೇ ಕೋಪ ಮತ್ತು ಅಪನಂಬಿಕೆಗಳನ್ನೂ ಅವರು ಅರ್ಥ ಮಾಡಿಕೊಂಡಿದ್ದರು. "ಮಹಾತ್ಮಾ ಗಾಂಧಿ ನಿರಂತರವಾಗಿ ಜಪಿಸಿದ ಆ ರಘುಪತಿ ರಾಘವನು ಮತ್ತೆ ಮತ್ತೆ ಅವತಾರವೆತ್ತಿ ಬರುವುದು ಈ ಜನರಿಗೆ ವಿಧಿಸಿದ ಶಿಕ್ಷೆಯು ನಿರಂತರವಾಗಿ ಜಾರಿಯಲ್ಲಿದೆ ಎಂಬುದನ್ನು ಖಾತರಿಗೊಳಿಸಿಕೊಳ್ಳಲು ಮಾತ್ರವೇ ಏನು?" ಎಂಬ ಪ್ರಶ್ನೆಯನ್ನು ಕೇಳಲು ಅವರಿಗೆ ಸಾಧ್ಯವಾಯಿತು. ಆದ್ದರಿಂದಲೇ ಅವರನ್ನು ತಮ್ಮವರೆಂದು 'ಕ್ಲೈಮ್' ಮಾಡಲು ನಮ್ಮ ಕಾಲದ ಕಲಾವಿದರಿಗಾಗಲೀ ಹೋರಾಟಗಾರರಿಗಾಗಲೀ, ಬುದ್ಧಿಜೀವಿಗಳಿಗಾಗಲ್ಲ ಅರ್ಹತೆ ಇಲ್ಲ.



ಈ ಸಂಕಲನಗಳ ಅನುವಾದ ಮತ್ತು ಅನುವಾದಕರ ಬಗ್ಗೆ ಕೆಲವು ಮಾತುಗಳನ್ನು ಹೇಳಬೇಕು. ಶ್ರೀಮತಿಯವರದು ಹೃದಯವುಳ್ಳ ಹಾದಿ. ಕಳೆದ ಮೂವತ್ತು ವರ್ಷಗಳ ಅವಧಿಯಲ್ಲಿ ಅವರು ಮಹಾಶ್ವೇತಾ ದೇವಿಯವರನ್ನು ಹೊರತುಪಡಿಸಿ ಬೇರೆ ಯಾರದೇ ಕಥೆ–ಕಾದಂಬರಿ–ನಾಟಕ–ಕವಿತೆಗಳನ್ನು ಅನುವಾದಿಸಿಲ್ಲ. ಕನ್ನಡ ಬರುತ್ತದೆ, ತೆಲುಗು ಬರುತ್ತದೆ, ಇಂಗ್ಲಿಷ್ ಬರುತ್ತದೆ, ಅನುವಾದ ಮಾಡಲು ಬರುತ್ತದೆ ಎಂಬ ಕಾರಣದಿಂದ ಕೈಗೆ ಸಿಕ್ಕಿದ್ದನ್ನೆಲ್ಲ ಅನುವಾದಿಸುವ ಹಂಬಲ ಅವರನ್ನು ಆವರಿಸಿಲ್ಲ. ತಮ್ಮ ಜೀವನಶೈಲಿ ಮತ್ತು ದೃಷ್ಟಿಕೋನಗಳನ್ನು ಬದಲಿಸಿದ ಒಬ್ಬ ಲೇಖಕಿಯನ್ನು ಆರಿಸಿಕೊಂಡು ಅವರ ಬರೆಹಗಳಿಗೆ ತಮ್ಮನ್ನು ತೆತ್ತುಕೊಂಡಿದ್ದಾರೆ. ಇದುವರೆಗೆ, 'ಸ್ತನದಾಯಿನೀ', 'ಬೇಟೆ', 'ದೋಪ್ದಿ', 'ಕುಲಪುತ್ರ', 'ದೌಲೋತಿ', 'ಉಪ್ಪು', 'ರುದಾಲಿ', 'ಟಿರೋಡಕ್ಟಿಲ್' ಮತ್ತು '೧೦೮೪ ರ ತಾಯಿ' ಎಂಬ ಕೃತಿಗಳನ್ನು ಅನುವಾದಿಸಿದ್ದಾರೆ. ಅವರು ಕೂಡ ಮಹಾಶ್ವೇತಾದೇವಿಯವರ ಹಾಗೆಯೇ ಸ್ವಾಭಿಮುಖಿಯಲ್ಲದ ಶೈಲಿಯನ್ನು ರೂಪಿಸಿಕೊಂಡಿದ್ದಾರೆ. ನಮ್ಮ ಗಮನ ವಸ್ತುವಿನ ಕಡೆಗೆ ಹೋಗಬೇಕೇ ವಿನಾ ಕಲೆಗಾರಿಕೆಯ ಕಡೆಗೆ ಅಲ್ಲವೆಂಬ ನಿಲುವು ಮೂಲ ಮತ್ತು ಅನುವಾದಗಳೆರಡಕ್ಕೂ ಹೊಂದಿಕೊಳ್ಳುತ್ತದೆ. ಮಹಾಶ್ವೇತಾದೇವಿಯವರು ಕವಿತೆಗಳನ್ನು ಬರೆಯಲಿಲ್ಲವೆನ್ನುವುದು ಇಲ್ಲಿ ಗಮನಿಸಬೇಕು. ಅವರು ತಮ್ಮ ಕಥೆಗಳ ನಡುವೆ ಕೊಡುವ ಹಾಡುಗಳೂ ಗದ್ಯಗಂಧಿಯಾಗಿಯೇ ಇವೆ. (ಬಂಗಾಳೀ ಮೂಲದಲ್ಲಿ ಅವು ಹೇಗಿವೆಯೋ ನನಗೆ ಗೊತ್ತಿಲ್ಲ. ಅವರು ನೂರಕ್ಕೆ ನೂರರಷ್ಟು ಗದ್ಯ ಲೇಖಕಿ. ಹಾಗೆಂದರೆ ಅವರಲ್ಲಿ ಭಾವತೀವ್ರತೆ ಇಲ್ಲವೆಂದು ಅರ್ಥವಲ್ಲ. ಅದು ಗದ್ಯಕ್ಕೇ ವಿಶಿಷ್ಟವಾದ ಭಾವತೀವ್ರತೆ. ಶ್ರೀಮತಿಯವರಿಗೂ ಈ ಮಾತು, ಈ ಕಲೆ ಚೆನ್ನಾಗಿ ಗೊತ್ತು.



ಈ ಸಂಪುಟಗಳ ಸಂಗಡ ಒದಗಿಸಲಾಗಿರುವ ಪೂರಕ ಸಾಮಗ್ರಿಯೂ ಬಹಳ ಉಪಯುಕ್ತವಾಗಿದೆ. ಎರಡು ಸಂದರ್ಶನಗಳು, ಲೇಖಕಿಯ ಪರಿಚಯ, ಕೃತಿಗಳ ಪರಿಚಯ ಎಲ್ಲವೂ ನಿಜಕ್ಕೂ 'ಲೇಬರ್ ಆಫ್ ಲವ್'. ಅವರಿಗೆ ನಮ್ಮೆಲ್ಲರ ಅಭಿನಂದನೆಗಳು ಸಲ್ಲಬೇಕು.

**(ನಿವೃತ್ತ ಕನ್ನಡ ಪ್ರಾಧ್ಯಾಪಕರಾದ ಎಚ್.ಎಸ್. ರಾಘವೇಂದ್ರ ರಾವ್ ಅವರು ಕನ್ನಡದ ಹಿರಿಯ ಸಾಹಿತ್ಯ ಮತ್ತು ಸಂಸ್ಕೃತಿ ಚಿಂತಕರೂ ಹೌದು)**

# ವಚನಕಾರ್ತಿಯರ ಧರ್ಮ



ಕರ್ನಾಟಕದ ಇತಿಹಾಸದಲ್ಲಿ ೧೨ನೇ ಶತಮಾನ ಒಂದು ಅಪೂರ್ವ ಸಾಮಾಜಿಕ-ಸಾಂಸ್ಕೃತಿಕ-ಸಾಹಿತ್ಯಿಕ ಆಂದೋಲನದ ಉಜ್ವಲ ಕಾಲಾವಧಿ. ಇದರ ಕಾವಿಗೆ ಒಳಗಾಗದ ಜನ ಸಮುದಾಯಗಳೇ ಇರಲಿಲ್ಲವೆಂದು ಹೇಳಬಹುದು. ಮುಖ್ಯವಾಗಿ ಇದರಲ್ಲಿ ಎಲ್ಲ ಜಾತಿ-ಕಸುಬುಗಳ ಕುಟುಂಬಗಳ ಮಹಿಳೆಯರ ಭಾಗವಹಿಸುವಿಕೆ ಹಿಂದೆಂದೂ ಕಾಣದಷ್ಟು ಕ್ರಾಂತಿಕಾರಿಯಾದದ್ದು. ಬಸವಣ್ಣನ ನೇತೃತ್ವದ ಈ ಕಾಯಕ ಗೌರವದ ಆಂದೋಲನ ಪುರುಷರಲ್ಲಿಯಂತೇ ಮಹಿಳೆಯರಲ್ಲೂ ಸಮಾನವಾದ ಸಾಮಾಜಿಕ-ಸಾಂಸ್ಕೃತಿಕ ಸಾಹಿತ್ಯಿಕ ಸಂವೇದನೆಯನ್ನು ಪ್ರಚೋದಿಸಿದ ಪರಿ ಈ ಆಧುನಿಕ ಕಾಲದಲ್ಲೂ ರೋಮಾಂಚನವನ್ನುಂಟು ಮಾಡುವಂತಹದ್ದು. ಈ ಮಹಿಳೆಯರು-ಅಕ್ಷರಸ್ಥ ಅನಕ್ಷರಸ್ಥರೆಂಬ ಭೇಧವಿಲ್ಲದೆ-ಆಂದೋಲನದ ಕಾವಿನಲ್ಲಿ ನಿರ್ಭಿಡೆಯಿಂದ ತಮ್ಮ ಕುಟುಂಬಗಳ ಕಸುಬಿಗಳಿಗೇ ವಿಶಿಷ್ಟವಾದ ದೈವ, ನುಡಿಗಟ್ಟುಗಳನ್ನು ಕಂಡುಕೊಂಡು ತಮ್ಮ ಅನುಭಾವಿಕತೆಯನ್ನು ನಿರೂಪಿಸುವ ಬಗೆ ನಿಜವಾಗಿಯೂ ಬೆರಗುಗೊಳಿಸುವಂಥಹದ್ದು. ಇದನ್ನು ಮಹಿಳೆಯ ಕಣ್ಣಿನ ಧರ್ಮ ಎಂದೂ ಕರೆಯಬಹುದು. ಇಂತಹ ಧರ್ಮವನ್ನು ನಿರೂಪಿಸುವ ಕೆಲ ವಚನಕಾರ್ತಿಯರ ಆಯ್ದ ಕೆಲವು ವಚನಗಳನ್ನು ಇಲ್ಲಿ ನೀಡುತ್ತಿದ್ದೇವೆ.-ಸಂ.

ಹೆಣ್ಣು ಹೆಣ್ಣಾದೊಡೆ ಗಂಡಿನ ಸೂತಕ
ಗಂಡು ಗಂಡಾದೊಡೆ ಹೆಣ್ಣಿನ ಸೂತಕ
ಮನದ ಸೂತಕ ಹಿಂಗಿದೊಡೆ
ತನುವಿನ ಸೂತಕಕ್ಕೆ ತೆರಹುಂಟೇ ಅಯ್ಯ?
ಮೊದಲಿಲ್ಲದ ಸೂತಕಕ್ಕೆ ಮರುಳಾಯಿತ್ತು ಜಗವೆಲ್ಲ!
ಎನ್ನ ದೇವ ಚನ್ನಮಲ್ಲಿಕಾರ್ಜುನಯ್ಯನೆಂಬ ಗರುವಂಗೆ
ಜಗವೆಲ್ಲ ಹೆಣ್ಣು ನೋಡ

**-ಅಕ್ಕ ಮಹಾದೇವಿ**

ನುಡಿಯ ಹಂಗಿನ್ನೂ ನಿಮಗೆ ಹಿಂಗದು,
ನಡೆಯನೆಂತು ಪರರಿಗೆ ಹೇಳುವಿರಿ?
ಒಡಲ ಹಂಗಿನ ಸುಳುಹು ಬಿಡದು;
ಎನ್ನೊಡನೆ ಮತ್ತೇತರ ಅನುಭವವಣ್ಣಾ?
ತಾನಲ್ಲದೆ ಇದಿರಿಂಗೆ ಹೇಳಬಹುದೆ?
ಅರಿವ ತೋರಬಲ್ಲಡೆ ತನ್ನನರುಹದೆ ಅರಿವನು
ಕಾಣಾ ಅಜಗಣ್ಣ ತಂದೆ

**ಮುಕ್ತಾಯಕ್ಕ**

ಕೃತ್ಯ ಕಾಯಕವಿಲ್ಲದವರು ಭಕ್ತರಲ್ಲ;
ಸತ್ಯಶುದ್ಧವಿಲ್ಲದುದು ಕಾಯಕವಲ್ಲ;
ಆಸೆ ಎಂಬುದು ಭವದ ಬೀಜ;
ನಿರಾಸೆಯೆಂಬುದು ನಿತ್ಯ ಮುಕ್ತಿ;
ಉರಿಲಿಂಗ ಪೆದ್ದಿಗಳನರಸನಲ್ಲಿ ಸದರವಲ್ಲ ಕಾಣವ್ವ

**-ಪುಣ್ಯಸ್ತ್ರೀ ಕಾಳವ್ವೆ**

ಗರ್ವದಿಂದ ಮಾಡುವ ಭಕ್ತಿ ದ್ರವ್ಯದ ಕೇಡು;
ನಡೆಯಿಲ್ಲದ ನುಡಿ ಅರಿವಿಂಗೆ ಹಾನಿ;
ಕೊಡದೆ ತ್ಯಾಗಿ ಎನಿಸಿಕೊಂಬುದು ಮುಡಿ ಇಲ್ಲದ ಶೃಂಗಾರ;
ದೃಢವಿಲ್ಲದ ಭಕ್ತಿ ಅಡಿವೊಡೆದ ಕುಂಭದಲ್ಲಿ ಸುಜಲವ ತುಂಬಿದಂತೆ
ಮಾರಯ್ಯ ಪ್ರಿಯ ಅಮಲೇಶ್ವರಲಿಂಗವ ಮುಟ್ಟದ ಭಕ್ತಿ.

**-ಆಯ್ದಕ್ಕಿ ಲಕ್ಕಮ್ಮ**

ಕಾದ ಹಾಲ ನೊಣ ಮುಟ್ಟಬಲ್ಲುದೆ?
ಕಿಚ್ಚಿನೊಳಗಣ ಗುಂಡ ಬೆಕ್ಕು ಮುಟ್ಟಬಲ್ಲುದೆ?
ಮರುಜವಣಿಯ ಕಡ್ಡಿ ಕೈಯಲ್ಲಿದ್ದವಂಗೆ ಸರ್ಪ ಕಡಿಯಬಲ್ಲುದೆ?
ಈ ತ್ರಿವಿಧವನರಿದವಂಗೆ ಹಿಂದೆ ಶಂಕೆ ಇಲ್ಲ ಮುಂದೆ ಭೀತಿ ಇಲ್ಲ
ಕಳಂಕು ಇಲ್ಲದೆ ಅಮುಗೇಶ್ವರಲಿಂಗವು ಅಪ್ಪಿಕೊಂಡಿತ್ತು.

**-ಅಮುಗೆ ರಾಯಮ್ಮ**

ಬತ್ತಲೆ ಇದ್ದವರೆಲ್ಲ ಕತ್ತೆಯ ಮಕ್ಕಳು
ತಲೆ ಬೋಳಾದವರೆಲ್ಲ ಮುಂಡೆಯ ಮಕ್ಕಳು
ತಲೆ ಜಡಗಟ್ಟಿದವರೆಲ್ಲ ಹೊಲೆ ಸಂತಾನ
ಆವ ಪ್ರಕಾರವಾದಡೇನು? ಅರಿವೇ ಮುಖ್ಯವಯ್ಯ
ಆಚಾರವೇ ಪ್ರಾಣವಾದ ರಾಮೇಶ್ವರ ಲಿಂಗದಲ್ಲಿ.

**-ಅಕ್ಕಮ್ಮ**



ಚಿತ್ರ: ವಿಜಯಶ್ರೀ ಪಾಳಾಡಿ

ಒತ್ತೆಯ ಹಿಡಿದು ಮತ್ತೊತ್ತೆಯ ಹಿಡಿಯೆ
ಹಿಡಿದಡೆ ಬತ್ತಲೆ ನಿಲಿಸಿ ಕೊಲುವರಯ್ಯಾ
ವ್ರತಹೀನನರಿದು ಬೆರೆದಡೆ
ಕಾದಕತ್ತಿಯಲ್ಲಿ ಕೈ ಕಿವಿ ಮೂಗ ಕೊಯ್ವರಯ್ಯ
ಒಲ್ಲೆನೊಲ್ಲೆ ಬಲ್ಲೆನಾಗಿ ನಿಮ್ಮಾಣೆ ನಿರ್ಲಜ್ಜೇಶ್ವರಾ

**-ಸೂಳೆ ಸಂಕವ್ವೆ**

ಕಲ್ಲ ಬಿತ್ತಿ ನೀರನೆರೆದಲ್ಲಿ
ಪಲ್ಲವಿಸುವುದೆ ದಿಟದ ಬೀಜದ ವೃಕ್ಷದಂತೆ?
ಶ್ರದ್ಧೆ ಸನ್ಮಾರ್ಗ ಭಕ್ತಿ ಇಲ್ಲದಲ್ಲಿ
ಗುರು ಭಕ್ತಿ, ಶಿವಲಿಂಗ ಪೂಜೆ, ಚರ ಸೇವೆ
ತ್ರಿವಿಧ ಇತ್ತವೇ ಉಳಿಯಿತ್ತು.
ಮತ್ತೆ ನಿಜವಸ್ತುವಿನ ಸುದ್ದಿ ನಿಮಗೆತ್ತಣದೊ?
ಎನ್ನಯ್ಯ ಪ್ರಿಯ ಇಮ್ಮಡಿ ನಿಃಕಳಂಕ
ಮಲ್ಲಿಕಾರ್ಜುನನಲ್ಲಿ ವಿಶ್ವಾಸ ಬೇಕು

**-ಮೋಳಿಗೆ ಮಹಾದೇವಿ**

ತಲೆಯ ಮೇಲೆ ತಲೆಯುಂಟೆ? ಹಣೆಯಲ್ಲಿ ಕಣ್ಣುಂಟೆ?
ಗಳದಲ್ಲಿ ವಿಷವುಂಟೆ? ದೇವರೆಂಬವರಿಗೆಂಟೊಡಲುಂಟೆ?
ತಂದೆಯಿಲ್ಲದವರುಂಟೆ? ತಾಯಿಯಿಲ್ಲದವರುಂಟೆ?
ಎಲವೋ, ನಿನ್ನ ಹಣೆಯಲ್ಲಿ ನೇಸರು ಮೂಡದೆ?
ಶಂಭುಜಕ್ಕೇಶ್ವರನಲ್ಲದೆ ಉಳಿದ ದೈವಗಳುಂಟೆ?

**-ಸತ್ಯಕ್ಕ**

ಮರ್ತ್ಯದ ಮನುಜರು ಸತ್ತರೆಲ್ಲ!
ಕತ್ತಲೆಯೊಳು ಮುಳುಗಿ, ಮಾತು ಕಲಿತುಕೊಂಡು,
ತೂತು ಬಾಯೊಳಗೆ ನುಡಿದು, ಕಾತರಿಸಿ ಕಂಗೆಟ್ಟು,
ಹೇಸಿಕೆಯ ಮಲದ ಕೊಣದ ಉಚ್ಚೆಯ ಬಾವಿಗೆ ಮೆಚ್ಚಿ
ಕಚ್ಚಿಯಾಡಿ ಹುಚ್ಚುಗೊಂಡು ತಿರುಗುವ ಕತ್ತೆ ಮನುಜರ
ಮೆಚ್ಚರು ನಮ್ಮ ಅಪ್ಪಣ್ಣಪ್ರಿಯ ಚೆನ್ನಬಸವಣ್ಣ

**-ಹಡದಪ್ಪಣ್ಣಗಳ ಪುಣ್ಯಸ್ತ್ರೀ ಲಿಂಗಮ್ಮ**

ಗಂಡು ಮೋಹಿಸಿ ಹೆಣ್ಣ ಹಿಡಿದಡೆ
ಅದು ಒಬ್ಬರ ಒಡವೆ ಎಂದರಿಯಬೇಕು
ಹೆಣ್ಣು ಮೋಹಿಸಿ ಗಂಡ ಹಿಡಿದಡೆ
ಉತ್ತರವಾವುದೆಂದರಿಯಬೇಕು
ಈ ಎರಡರ ಉಭಯವ ಕಳೆದು ಸುಖಿ ತಾನಾಗಬಲ್ಲಡೆ
ನಾಸ್ತಿನಾಥನು ಪರಿಪೂರ್ಣನೆಂಬೆ.

**-ಗೊಗ್ಗವ್ವೆ**

**(ಆಯ್ಕೆ : ಸವಿತಾ ನಾಗಭೂಷಣ**
**ಆಕರ: ವಚನ ವರ್ಷ**
ಸಂ. ಡಾ. ಬಸವರಾಜ ಸಾದರ)

## ರಮಣ-ಗಾಂಧಿ ಸಾಹಿತ್ಯ-ಪ್ರಶಸ್ತಿ ಇತ್ಯಾದಿ ಎರಡು ಟಿಪ್ಪಣಿಗಳು



**ಕ**ಳೆದ ೨೫ ವರ್ಷಗಳಂತೆ ಈ ವರ್ಷವೂ ನಾನು ತಿರುವಣ್ಣಾಮಲೈನಲ್ಲಿರುವ ರಮಣಾಶ್ರಮಕ್ಕೆ ನಾಲ್ಕು ದಿವಸ ಹೋಗಿಬಂದೆ. ನನ್ನ ಕಾಲಿನ ಗಂಭೀರ ಸಮಸ್ಯೆಯಿಂದಾಗಿ ೧೯೯೮ರ ನಂತರ ಮೂರು ನಾಲ್ಕು ವರ್ಷ ಅಲ್ಲಿಗೆ ಹೋಗದಿದ್ದಾಗ ಅಲ್ಲಿಗೆ ಹೋಗಿದ್ದ ನನ್ನ ಪತ್ನಿಯನ್ನು ನನ್ನ ಬಗ್ಗೆ ವಿಚಾರಿಸಿದ ಆಶ್ರಮದ ಉಸ್ತುವಾರಿಯವರು 'ನಾಗಭೂಷಣ ಅವರು ಸಂಕೋಚಪಡುವುದು ಬೇಡ. ಅವರು ಷೂ ಹಾಕಿಕೊಂಡೇ ಬರಲಿ. ಅವರು ಶ್ರೀಚಕ್ರವಿರುವ ಮಾತೃಭೂತೇಶ್ವರ ಗುಡಿಯ ಹೊರತಾಗಿ ಇನ್ನೆಲ್ಲಕಡೆ-ಸಮಾಧಿ ಮಂದಿರ, ರಮಣರ ಧ್ಯಾನ ಶಕ್ತಿಯಿಂದ ಸ್ಪಂದಿಸುವ ಹಳೆಯ ಧ್ಯಾನ ಮಂದಿರ ಮತ್ತು ಊಟದ ಮನೆ-ಅವರು ಓಡಾಡಬಹುದು ಎಂಬ ವಿಶೇಷ ಅನುಮತಿಯೊಂದಿಗೆ ಹೇಳಿಕಳಿಸಿದ ನಂತರ ಮತ್ತೆ ನಿರಂತರವಾಗಿ ನಾವು ನಮ್ಮ ಕೆಲ ಗೆಳೆಯರೊಂದಿಗೆ ಅಲ್ಲಿಗೆ ಹೋಗಿಬರುತ್ತಿದ್ದೇವೆ.

ಈ ಬಾರಿ ನಮ್ಮೊಂದಿಗಿದ್ದವರು ಗೆಳೆಯರಾದ ಬಾಲು ಮತ್ತು ಸುರೇಂದ್ರ. ಸವಿತಾ ಮತ್ತು ಸುರೇಂದ್ರ ೧೪ ಕಿಮೀಗಳ ಕಾಲ್ನಡಿಗೆಯ ಬೆಳಗಿನ ಗಿರಿ ಪ್ರದಕ್ಷಿಣೆ ಕೂಡ ಮಾಡಿಬಂದರು. ನಮ್ಮ ಈ 'ಯಾತ್ರೆ'ಯ ಬಗ್ಗೆ ಹಲವರು 'ಅಲ್ಲಿ ಹೋಗಿ ಏನು ಮಾಡುತ್ತೀರಿ?' ಎಂದು ಕುತೂಹಲದಿಂದ ವಿಚಾರಿಸಿದ್ದಾರೆ. ನಾವು 'ಏನೂ ಮಾಡದೆ ಇರಲೆಂದೇ ಅಲ್ಲಿಗೆ ಹೋಗುವುದು' ಎಂದರೆ ಅವರಲ್ಲಿ ಬಹಳಷ್ಟು ಜನ ಕಣ್ಣು ಪಿಳಿಪಿಳಿ ಬಿಡುತ್ತಾರೆ! ಹಾಗಾಗಿಯೇ-ಇಬ್ಬರು ಮುವ್ವರ ಹೊರತಾಗಿ-ಈ ಬಗ್ಗೆ ನಮ್ಮನ್ನು ವಿಚಾರಿಸಿದ ಯಾರೂ ಅತ್ತ ಕಡೆ ಸುಳಿದಿಲ್ಲ! ಅವರಿಗೆಲ್ಲ ಏನಾದರೂ 'ಮಾಡು'ತ್ತಿರುವುದೇ ಬದುಕಾಗಿದ್ದು ಅವರಿಗೆ ಈ 'ಮಾಡು'ವುದೆಂಬುದರ ಭಾರ ತಾಗಿ ಒಳಗಿನ ಕರೆ ಬರದ ಹೊರತು ಆಲ್ಲಿಗೆ ಹೋಗಲಾರರು. ಹಾಗಾಗಿಯೇ ಗಾಂಧಿ, ಹೋರಾಟದಿಂದ ಬಳಲಿದವರಿಗೆ ಒಂದಷ್ಟು ದಿನ ರಮಣಾಶ್ರಮಕ್ಕೆ ಹೋಗಿ ಶಕ್ತಿ ತುಂಬಿಕೊಂಡು ಬನ್ನಿ ಎನ್ನುತ್ತಿದ್ದರಂತೆ! ರಮಣರು ಕೂಡ ಗಾಂಧಿ ನಡೆಗಳನ್ನು ನಿರಂತರ ಗಮನಿಸುತ್ತಿದ್ದು ತಮ್ಮ ಮತ್ತು ಅವರ ಮೂಲಕ ಕ್ರಿಯಾಶೀಲವಾಗಿರುವುದು ಒಂದೇ ಶಕ್ತಿ ಎಂದು ಹೇಳುತ್ತಿದ್ದರು ಆದರೆ ಸ್ವತಃ ಗಾಂಧಿ ಎಂದೂ ರಮಣಾಶ್ರಮಕ್ಕೆ ಹೋಗಲಾಗಲಿಲ್ಲ! ಆದರೆ ನಾವು ಗಾಂಧಿ ಮಾತನ್ನು ಅನುಸರಿಸಿಯೇ ಪ್ರತಿ ವರ್ಷ ಅಲ್ಲಿಗೆ ಹೋಗಿ ಬರುವುದು ಎಂದರೆ ಎಷ್ಟು ಜನಕ್ಕೆ ಅರ್ಥವಾಗುವುದೋ ತಿಳಿಯದು!

### ಜಯಂತ್‌ಗೆ ದ.ಏಷ್ಯಾ ಸಾಹಿತ್ಯ ಪ್ರಶಸ್ತಿ

**ಗೆ**ಳೆಯ ಜಯಂತ್ ಕಾಯ್ಕಿಣಿ ಅವರಿಗೆ ಈ ಬಾರಿಯ ದಕ್ಷಿಣ ಏಷ್ಯಾದ ಪ್ರತಿಷ್ಠಿತ ಡಿಎಸ್‌ಸಿ ಪುರಸ್ಕಾರ ಸಂದಿದೆ. ತೇಜಸ್ವಿನಿ ನಿರಂಜನ ಅವರು ಅನುವಾದಿಸಿರುವ ಅವರ ಆಯ್ದ ಕಥೆಗಳ ಸಂಗ್ರಹ 'ನೋ ಪ್ರಸೆಂಟ್ಸ್ ಪ್ಲೀಸ್' ಪುಸ್ತಕಕ್ಕೆ ಈ ಪುರಸ್ಕಾರ, ೨೫ ಸಾವಿರ ಡಾಲರ್‌ಗಳ(ಅಂದರೆ ಸುಮಾರು ೧೮ ಲಕ್ಷ ರೂ.ಗಳು) ಮೌಲ್ಯದ ಈ ಪ್ರಶಸ್ತಿ ಅದರ ರೂಪಾಯಿ ಮೌಲ್ಯದ ದೃಷ್ಟಿಯಿಂದ-ಇದರಲ್ಲಿ ಆರ್ಧದಷ್ಟು ಅನುವಾದಕರಿಗೆ ಸಲ್ಲುವುದಾದರೂ-ನಮ್ಮ 'ಜ್ಞಾನಪೀಠ' ಪ್ರಶಸ್ತಿಗಿಂತ ಬಹು ಹೆಚ್ಚು ದೊಡ್ಡದು.. ಆದರೆ ಜಯಂತರಿಗೆ ಜ್ಞಾನಪೀಠ ಸದ್ಯಕ್ಕೆ ದೂರದ ಮಾತಾಗಿರುವುದಿರಲಿ, ನಮ್ಮ ಕೇಂದ್ರ ಸಾಹಿತ್ಯ ಅಕಾಡೆಮಿಯಾಗಲೀ., ರಾಜ್ಯ ಸಾಹಿತ್ಯ ಅಕಾಡೆಮಿಯಾಗಲೀ ಅವರತ್ತ ತಿರುಗಿ ನೋಡಿಲ್ಲ. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗೆ ವೃದ್ಧ ಸಾಹಿತಿಗಳ-ಆಯ್ಕೆ ವಿಧಿ ವಿಧಾನಗಳನ್ನು ಹಿಂಬಾಲಿಸಿ ಅದನ್ನು ಯಶಸ್ವಿಯಾಗಿ ನಿಭಾಯಿಸಿದ ಕೆಲ ಚಾಣಾಕ್ಷ ಸಾಹಿತಿಗಳ ಅಪವಾದಗಳ ಹೊರತಾಗಿ-ಸಾಲು ಇನ್ನೂ ಮುಗಿದಿಲ್ಲವಾದರೆ, ರಾಜ್ಯ ಸಾಹಿತ್ಯ ಅಕಾಡೆಮಿಯ ಸಾಮಾಜಿಕ ನ್ಯಾಯ ಇತ್ಯಾದಿ ನ್ಯಾಯಗಳ ಹಳಸಲು ಸ್ಟಾಕ್ ಇನ್ನೂ ಖಾಲಿಯಾಗಿಲ್ಲ. ಹಾಗಾಗಿಯೇ ನಮ್ಮ ಸಾಹಿತ್ಯ ಪುರಸ್ಕಾರಗಳ ಬಗ್ಗೆ ನಿಜ ಸಾಹಿತಿಗಳಿಗಾಲೀ, ಸಾಹಿತ್ಯಾಸಕ್ತರಿಗಾಗಲೀ ಕುತೂಹಲವಾಗಲೀ, ಗೌರವವಾಗಲೀ ಉಳಿಯದೆ ಅದು ಶುದ್ಧ ಸರ್ಕಾರಿ ವ್ಯವಹಾರದಂತಾಗಿದೆ.



ಇಷ್ಟೆಲ್ಲ ಇಲ್ಲಿ ಹೇಳಲು ಕಾರಣ, ಒಂದು ಸಮಾಜದ ನಿಜವಾದ ಶಕ್ತಿ ಅದರ ಸಾಹಿತ್ಯದಲ್ಲಿರುತ್ತದೆ ಎಂಬ ನಂಬಿಕೆಯಿಂದಾಗಿ. ಏಕೆಂದರೆ ಒಂದು ಸಮಾಜದ ಪರಂಪರೆಯಲ್ಲಿ ಮಾಗಿದ ವಿವೇಕ ಮತ್ತು ಧಾರಣಾ ಶಕ್ತಿಗಳ ಸಾಂದ್ರ ರೂಪವೇ ಸಾಹಿತ್ಯ. ಸಮಾಜ ಕಷ್ಟಕ್ಕೆ ಸಿಕ್ಕಿದಾಗ ಅದು ತನ್ನ ಸ್ಮೃತಿ ಕೋಶ ಸೇರಿದ ಇಂತಹ ಸಾಹಿತ್ಯದಿಂದ ಶಕ್ತಿಯನ್ನು ಮೊಗೆಮೊಗೆದು ಪಡೆಯಬಹುದು. ಅಂತಹ ಶಕ್ತಿ ಪ್ರದಾನ ಮಾಡುವ ನಮ್ಮ ಇಂದಿನ ಕೆಲವೇ ಕೆಲವು ಸಾಹಿತಿಗಳಲ್ಲಿ ಜಯಂತ್ ಕೂಡ ಒಬ್ಬರು. ವಿಶೇಷವಾಗಿ ಅವರ ಕಥೆಗಳು ಮಾನವತೆಯ ಬಹು ಸೂಕ್ಷ್ಮ ಶೋಧನೆಯ ಕಲಾತ್ಮಕ ಪ್ರಯತ್ನಗಳಾಗಿವೆ. ನಗರ-ನಿರ್ದಿಷ್ಟವಾಗಿ ಅವರು ಬಹುಕಾಲ ವಾಸಿಸಿದ್ದ ಮುಂಬೈ-ಜೀವನದ ಸಣ್ಣ ಸಣ್ಣ ವಿವರಗಳ-ಚಲನೆಗಳ ಹಿನ್ನೆಲೆಯಲ್ಲಿ ಭಾಷೆಯ ಕುಸುರಿ ಕೆಲಸದೊಂದಿಗೆ ನಡೆಯುವ ಈ ಶೋಧನೆ ನಮ್ಮ ಹೃದಯಗಳನ್ನು ಕಲಕಿಬಿಡುತ್ತವೆ. ಜಾಗತೀಕರಣದ ಸೂಕ್ಷ್ಮ ಸಾಂಸ್ಕೃತಿಕ ಶೋಧನೆ ಕನ್ನಡದಲ್ಲೇನಾದರೂ ನಡೆದಿದ್ದರೆ ಅದು ಜಯಂತರ ಕಥೆಗಳಲ್ಲೇ ತನ್ನ ಅತ್ಯುತ್ತಮ ರೂಪ ಪಡೆದಿರುವುದು ಎಂದು ಹೇಳಬೇಕು. ಆದರೆ ಇಂದು ಕನ್ನಡದಲ್ಲಿ ಸಾಹಿತ್ಯ ಎಂಬುದು ಸಮೂಹ ಸನ್ನಿ ಹಿಡಿದುಕೊಂಡ ಸಾಹಿತಿ ವೇಷಧಾರಿಗಳ ಶಕ್ತಿರಾಜಕಾರಣದ ಆಡೊಂಬಲವಾಗಿದ್ದು ನಿಜ ಸಾಹಿತಿಗಳು ಅಬ್ಬೇಪಾರಿಗಳಂತಾಗಿದ್ದಾರೆ ಇಂತಹ ದುಃಸ್ಥಿತಿಯ ಮಧ್ಯೆ ಜಯಂತರಿಗೆ ದೊರೆತಿರುವ ಪುರಸ್ಕಾರ ಸ್ವಲ್ಪವಾದರೂ ಸಮಾಧಾನ ನೀಡುವಂತಹದು. ಆದರೂ ಒಂದು ಮಾತು ಹೇಳಬೇಕು. ಇದೆಲ್ಲ ಅನುವಾದದ ಅದೃಷ್ಟ-ಅನುಕೂಲವಿರುವವರಿಗೆ ಮಾತ್ರವೇನೋ!

**-ಡಿಎಸ್ಸೆನ್**


Statement about Ownership and other particulars about News paper 'Hosa Manushya'

FORM 1V

1. Place of Publication : Shimoga
2. Printers name : D.S. Nagabhushana
   Nationality : Indian
   Address : HIG-5, 'Nudi', Kallalli Extn, Vinoba Nagara Shimoga-577204
3. Publishers Name: D.S.Nagabhushana
   Nationality : Indian
   Address : Same as above
4. Editor's name : D.S.Nagabhushana
   Nationality : Indian
   Adddress : Same as above
5. Name of Individuals who own the News paper : D.S.Nagabhushana,
   Address : Same as above

I, D.S.Nagabhushana hereby declare that the particulars given above are true to the best of my knowledge and belief.

Shimoga
31.3.2019

Sd/-
D.S.Nagabhushana

## ಪುಸ್ತಕಾವಲೋಕನ

ಪು: ಬಲಾಕ (ಪ್ರಬಂಧಗಳ ಸಂಕಲನ) ಲೇ: ಡಾ. ಕಮಲಾ ಹಂಪನಾ ಪ್ರ: ಸಪ್ನ ಬುಕ್ ಹೌಸ್, ಬೆಂಗಳೂರು ಪು: ೩೬೫ ಬೆಲೆ: ರೂ. ೨೭೦/-

### ಹಿರಿಯ ಲೇಖಕಿಯೊಬ್ಬರ ಕಾಳಜಿಗಳ ವೈವಿಧ್ಯ



ಖ್ಯಾತ ಕನ್ನಡ ವಿದ್ವಾಂಸರೂ, ಲೇಖಕಿಯೂ ಆದ ಡಾ. ಕಮಲಾ ಹಪನಾ ಅವರ ಸಮಗ್ರ ಸಾಹಿತ್ಯ ಸಂಪುಟಗಳಲ್ಲಿ ಒಂಬತ್ತನೆಯದಾದ ಈ ಸಂಪುಟ ವಿವಿಧ ಸಂದರ್ಭಗಳಲ್ಲಿ ಅವರು ಬರೆದ ಬೇರೆ ಬೇರೆ ನೆಲಗಳುಳ್ಳ ಪ್ರಬಂಧಗಳ ಸಂಗ್ರಹವಾಗಿದೆ. ತಮ್ಮ ಎಲ್ಲಾ ಈ ಸಂಪುಟಗಳಿಗೂ 'ಬ'ಕಾರದಿಂದ ಪ್ರಾರಂಭವಾಗುವ ಹೆಸರನ್ನಿಡುವುದು ಕಮಲಾ ಅವರ ಅಭ್ಯಾಸ. ಬಲಾಕ ಹೆಸರೇ ಸೂಚಿಸುವಂತೆ ಕೊಕ್ಕರೆಯ ಪಕ್ಷಿನೋಟ ಈ ಹೊತ್ತಿಗೆಯಲ್ಲಿದೆ. ಪ್ರತಿ ಅಧ್ಯಾಯಕ್ಕೆ ಗರಿ ಎಂದು ಹೆಸರಿಟ್ಟಿದ್ದು ಆರು ಗರಿಗಳನ್ನು ಈ ಸಂಪುಟ ಒಳಗೊಂಡಿದೆ.

ಮೊದಲ ಗರಿಯಲ್ಲಿ ಸಂಶೋಧನೆ ಎಂದರೆ ಏನು? ಎಂದು ತಿಳಿಸುತ್ತಾರೆ. ಹಿಂದೆ ಸಂಶೋಧನೆ ಎಂಬ ಹೆಸರಿಲ್ಲದೆಯೇ ನಡೆದ ಅನೇಕ ಸಂಶೋಧನೆಗಳನ್ನು ಹೆಸರಿಸುತ್ತಾರೆ. ಕವಿ ಕಾಲ-ಕಾವ್ಯಗಳ ಸಂಗ್ರಹ, ಶಾಸನಗಳ ಓದು ಈ ಕುರಿತ ಇಲ್ಲಿನ ಬರಹಗಳು ಇಂದಿನ ಸಂಶೋಧನಾ ವಿದ್ಯಾರ್ಥಿಗೆ ಉತ್ತಮ ಮಾರ್ಗದರ್ಶಿಯಾಗಿದೆ ಅವರ ಅಪಾರ ಓದು ಚಿಕಿತ್ಸಕ ನೋಟ ಈ ಭಾಗಗಳಲ್ಲಿ ಅವರು ಹೆಸರಿಸುವ ಗ್ರಂಥಗಳಿಂದ ವ್ಯಕ್ತವಾಗುತ್ತದೆ. ಗರಿ ಎರಡರಲ್ಲಿ ಕಮಲಾರವರ ಸೃಜನಶೀಲ ಬರಹಗಳ ವ್ಯಾಪ್ತಿಯನ್ನು ಕಾಣಬಹುದು. 'ಅಹಿಂಸೆಯ ಹಾದಿಯಲ್ಲಿ' ಭರತ ಬಾಹುಬಲಿಯರ ಬಾಲ್ಯದ ಚಿತ್ರಣ ಹೊಂದಿದೆ. 'ದಂಡಂ ದಶಗುಣಂ ಭವೇತ್' ಎಂಬ ಲೇಖನದಲ್ಲಿ ವಿಶ್ವಾಮಿತ್ರಾಹಿ ಎಂಬ ಶ್ಲೋಕವನ್ನು ಹೆಸರಿಸಿ ದಂಡದಿಂದ ಆಗುವ ಹಲವು ಪ್ರಯೋಜನಗಳನ್ನು ತಿಳಿಸುತ್ತಾರೆ. ಕಮಲಾ ಅವರು ಚಿತ್ರಿಸುವ 'ನಾ ಕಂಡ ಬೆಂಗಳೂರು' ವಾಹನಗಳಿಲ್ಲದ ವಿಶಾಲವಾದ ಹೂತುಂಬಿದ ಸಾಲುಮರಗಳ ಚಿತ್ರಣವನ್ನು ಅವರೇ ಅನುಭವಿಸಿ ದರ್ಶಿಸಿರುವುದನ್ನು ಈಗಿನವರು ಊಹಿಸಲೂ ಸಾಧ್ಯವಿಲ್ಲ. ಹಾಗೂ ಕುಟುಂಬ ಎಂಬ ಕಲ್ಪನೆ( ನಮ್ಮ ಹಳಗನ್ನಡ ಕಾವ್ಯಗಳಲ್ಲಿ ಬಂದಿರುವ) ಅದಕ್ಕಿರುವ ಪ್ರಾಮುಖ್ಯತೆ ವಡ್ಡಾರಾಧನೆಯಿಂದ ಪಂಪನವರೆಗೆ ಹೆಕ್ಕಿ ತೆಗೆದಿದ್ದಾರೆ.

'ಗರಿ' ಮೂರರಲ್ಲಿ ಡಾ॥ ಶ್ರೀ ಶಿವಮೂರ್ತಿ ಮುರುಘರಾಜ ಶರಣರ ವ್ಯಕ್ತಿತ್ವ ಅವರ ಮಹಿಳಾಪರ ಚಿಂತನೆಗಳ ಕುರಿತು ಬರೆಯುತ್ತಾರೆ. 'ಮಂಗಳಮುಖಿಯರನ್ನು ವಿಶೇಷ ಚೇತನಗಳ ವ್ಯಕ್ತಿಗಳನ್ನು ನೋಡುವ ಹಾಗೆಯೇ ಸಮಾಜ ನೋಡಬೇಕು ಎನ್ನುತ್ತಾರೆ.ಈ ಬರಹಗಳಲ್ಲಿ ಅವರ ವೈಚಾರಿಕ ಪ್ರಖರತೆ ಹಾಗೂ ದಿಟ್ಟ ನಿಲುವು ಗೋಚರವಾಗುತ್ತದೆ. ಏಕರೂಪದ -ಕನ್ನಡ ಮಾಧ್ಯಮದ -ಶಿಕ್ಷಣಕ್ಕಾಗಿ ಆಗ್ರಹಿಸುವ ಲೇಖನಗಳು ಇಲ್ಲಿವೆ. ಹಾಗೂ ದೊಡ್ಡರಂಗೇಗೌಡ, ನರಹಳ್ಳಿ ಬಾಲಸುಬ್ರಹ್ಮಣ್ಯ ಡಾ॥ ಯಶೋಧಾ ಭಟ್, ಬಿ.ಗಿರಿಜಾ ಹಾಗೂ ಅವರು ತುಂಬಾ ಗೌರವಿಸುವ ಶ್ರೀ ಸಿದ್ಧಗಂಗಾ ಮಠದ ಶ್ರೀ ಶಿವಕುಮಾರ ಸ್ವಾಮಿಗಳ ಕುರಿತು ವ್ಯಕ್ತಿಚಿತ್ರಗಳಿವೆ. ಎಲ್ಲರನ್ನೂ ಗೌರವಿಸುವ ಪ್ರೀತಿಸುವ ಸಕಲರಲ್ಲಿ ಒಳಿತನ್ನೇ ಕಾಣುವ ಸದ್ಗುಣ ಅವರ ಈ ಬರಹಗಳ ಮೂಲಕ ವ್ಯಕ್ತವಾಗಿದೆ.ಹಾಗಾಗಿ ಇಲ್ಲಿ ವಿಮರ್ಶಾತ್ಮಕ ದೃಷ್ಟಿಯ ಅಗತ್ಯ ಅವರಿಗೆ ಕಂಡಿಲ್ಲ

ಉಳಿದ ಗರಿಗಳಲ್ಲಿ ಕಮಲರವರು ವಿವಿಧ ವೇದಿಕೆಗಳಲ್ಲಿ ಮಾಡಿದ ಭಾಷಣಗಳು, ಬರೆದ ಮುನ್ನುಡಿಗಳು ಸೇರಿವೆ. ಓದು, ಅಧ್ಯಾಪನ ಸಾಹಿತಿಗಳ ಒಡನಾಟ, ಮಕ್ಕಳ, ವಿದ್ಯಾರ್ಥಿಗಳನ್ನು ಕುರಿತ ಅವರ ಕಾಳಜಿ, ಉಪನ್ಯಾಸಗಳು ಪರರಿಗೆ ಮಾಡಿದ ಕೈಲಾದ ಸಹಾಯ, ಹಂಪನಾರವರೊಡನೆಯ ಅನುರೂಪದ ದಾಂಪತ್ಯದ ಇಣುಕುನೋಟ-ಇವುಗಳನ್ನು ಒಟ್ಟಾರೆಯಾಗಿ ಕಾಣಬಹುದು. ಈ ಎಲ್ಲಾ ಮಾಹಿತಿ ಹೊಂದಿರುವ ಹಿಂದಿನ ಕಾಲಘಟ್ಟದ ಕುರುಹುಗಳು ಸಿಗುವ, ಇವರು ಅಧ್ಯಯನ ಮಾಡಿರುವ ಕನ್ನಡ ಸಾಹಿತ್ಯದ ಅಮೂಲ್ಯ ಪುಸ್ತಕಗಳ ಪಟ್ಟಿ ಅವುಗಳು ಪ್ರಕಟವಾದ ಕಾಲ ಇತ್ಯಾದಿಗಳಿಂದ ಕೂಡಿದ ಈ ಗ್ರಂಥವು ಕನ್ನಡ ಸಾಹಿತ್ಯದಲ್ಲಿ ಮಹಿಳೆಯರ ಬಹುಮುಖ ಭಾಗವಹಿಸುವಿಕೆ ಕುರಿತ ಅಧ್ಯಯನದಲ್ಲಿ ಆಸಕ್ತಿ ಇರುವವರಿಗೆ ಅಭ್ಯಾಸ ಯೋಗ್ಯವಾಗಿದೆ.

**-ಮಂಜುಳಾ ಕೆ. ರಾಜು**

ಪು: ಕಾಡುಜೇಡ ಹಾಗೂ ಬಾತುಕೋಳಿ ಹೂ(ಕವನ ಸಂಕಲನ) ಲೇ: ಹೆಚ್. ಆರ್ ಸುಜಾತಾ ಪ್ರ: ಪಲ್ಲವ ಪ್ರಕಾಶನ ಪು: ೨೧೨ ಬೆಲೆ : ರೂ. ೨೦೦/-

### ಹೆಣ್ಣು ಅರಿವಿನ ಕವಿತೆಗಳು



ಇರುವೆಯ ಸಾಲಲ್ಲಿ ಮೆಲ್ಲಗೆ ಸಾಗುತ್ತಾ ಇಡಿಯ ಬ್ರಹ್ಮಾಂಡವನ್ನೇ ತೂಗಿನೋಡುವ ಮಹತ್ವಾಕಾಂಕ್ಷೆಯ ಕವಯತ್ರಿ ಎಚ್.ಆರ್.ಸುಜಾತಾ. ಅವರ 'ಕಾಡುಜೇಡ ಹಾಗೂ ಬಾತುಕೋಳಿ ಹೂ' ಎಂಬ ಸಂಕಲನದ ಕವಿತೆಗಳು ಪರಿಸರ ಕೇಂದ್ರದ ಮೂಲಕ ಮಾಡಿಸುವ ವಿಶ್ವದರ್ಶನ ವಿಶಿಷ್ಟವಾದದ್ದು. ಅನುದಿನದ ದಂದುಗದಲ್ಲಿ ಮನುಷ್ಯನ ಪ್ರಜ್ಞಾಕೇಂದ್ರವೇ ವಿಹ್ವಲಗೊಂಡಿರುವಾಗ, ತಮ್ಮ ತಣ್ಣಗಿನ ದನಿಯಲ್ಲಿ, ಜೀವದ ಸೊಲ್ಲುಗಳನ್ನು ಆಯ್ದು ನೇಯುವ ತಾದಾತ್ಮ್ಯದಿಂದಾಗಿ ಇಲ್ಲಿನ ಕವಿತೆಗಳು ಅವರಿಸಿಕೊಳ್ಳುತ್ತ ಹೋಗುತ್ತವೆ. ಕಾಲದ ಯಾವುದೋ ಬಿಂದುವಿನಲ್ಲಿ ಘಟಿಸುವ ಎಲ್ಲಾ ಘಟನೆಗಳಿಗೆ ಸಂಬಂಧದ ಸೂತ್ರ ಜೋಡಿಸುವ ಪ್ರಕೃತಿಯ ವಿಸ್ಮಯ ' ಕಾಡುಜೇಡ ಹಾಗೂ ಬಾತುಕೋಳಿ ಹೂ' ಕವಿತೆಯಲ್ಲಿ ರೂಪಕವಾಗಿದೆ. ಇಂಥ ಸೂಕ್ಷ್ಮ ನೋಟದ ಕ್ರಮ, ಸಮರ್ಥ ರೂಪಕ ಶಕ್ತಿ ಹಾಗೂ ಕಾವ್ಯ ಭಾಷೆಯ ಅಂತರಂಗ ಅರಿತು ಬಳಸುವ ಹದದಿಂದಾಗಿ ಎಚ್.ಆರ್. ಸುಜಾತ ಅವರ ಕವಿತೆಗೆಗಳು ಈ ಕಾಲದ ಅಬ್ಬರದ ದನಿಗಳ ಮಧ್ಯೆ ಅನನ್ಯವಾಗಿ ನಿಲ್ಲುತ್ತವೆ.

ಕನ್ನಡ ಕಾವ್ಯ ಪರಂಪರೆಯಲ್ಲಿ ಪುರುಷ ಲೋಕದೃಷ್ಟಿಯು ಪ್ರಧಾನವಾಗಿ ತನ್ನ ಯಜಮಾನ್ಯವನ್ನು ಸ್ಥಾಪಿಸಿರುವುದು ವಾಸ್ತವ. ಅಂಥ ಥಾಳಾಗಿ ಕಾಣುವ ಪರಂಪರೆಯೊಳಗೆ ಸುಪ್ತವಾಗಿ ಮಾತ್ರ ಸಂವೇದನೆಯ ಧಾರೆಯು ಅಂತರಗಂಗೆಯಂತೆ ಹರಿದಿದೆ. ಸುಜಾತರ ಕಾವ್ಯದ ನಂಟು ಈ ಧಾರೆಯ ಜೊತೆ ಬೆಸೆದಿದೆ. ವಾದ ಸಿದ್ಧಾಂತಗಳ ಹಟಮಾರಿತನಕ್ಕೆ ತನ್ನನ್ನು ತೆತ್ತುಕೊಳ್ಳದೇ ಹೆಣ್ತನದ ದೇಸಿ ನೆಲೆಗಳಲ್ಲಿ ಸಂಚರಿಸಿರುವ ಕಾವ್ಯ ತಾಜಾ ಕಸುವಿನಿಂದ ಕಂಗೊಳಿಸುತ್ತಿದೆ. ಗ್ರಾಮ್ಯ ಸೊಗಡಿನ ಜಾನಪದ ಸಂವೇದನೆಯೊಂದು ದಕ್ಕಿರುವದು ಈ ಕವಿತೆಗಳ ಶಕ್ತಿಯಾಗಿದೆ.

ಪಂಚಭೂತಗಳ ನಡುವೆ ಅವುಗಳ ಭಾಗವಾಗಿಯೇ ತನ್ನನ್ನು ಅರಿಯುವ ಹೆಣ್ಣುನೋಟವೊಂದು ವಿಶ್ವವನ್ನು ಭಾವಿಸುವ ಪರಿ ಅಚ್ಚರಿ ಮೂಡಿಸುತ್ತದೆ. ಹಸಿ ಮಣ್ಣು, ಮಿಂಚು, ಮಳೆ,ಕಾಮನಬಿಲ್ಲು , ಹೂವು, ಜೇನು, ಗಂಧ, ಬಯಲು, ಗಾಳಿ, ದಟ್ಟ ಕಾನನ ಎಲ್ಲವನ್ನೂ ಹೆಣ್ಣೊಬ್ಬಳು ತನ್ನ ಸಂವೇದನೆಯ ಭಾಗವಾಗಿ ಕಾಣುವುದು ಇಲ್ಲಿನ ಸ್ಥಾಯಿಭಾವವಾಗಿ ಕಾಣುತ್ತದೆ.

**ಹೆಣ್ಣು ಹೆಣ್ಣಾಗಿ ಅರಳುವುದು/ಹರಿವಾಗುವುದು ಹಸಿರಾಗುವುದು/ತನ್ನ ತಾನೇ ಮರೆವಂತೆ ಮೈ ತುಂಬಿಕೊಳ್ಳುವುದು/ದುಂಡಗಿನ ವಿಶ್ವವೇ ತಾನಾಗುವುದು..**

*(ಜೋಡಿ ಮೊಲೆಗಳು)*

ಹೆಣ್ತನದ ವಿಕಾಸವನ್ನು ವಿಶ್ವದ ವಿಕಾಸದ ಭಾಗವಾಗಿ ಗುರುತಿಸುವ ನೋಟವೊಂದು ಇಲ್ಲಿನ ಕವಿತೆಗಳಿಗೆ ಸಿದ್ದಿಸಿದೆ. ಈ ನೋಟದ ಮುಂದೆ ಇತಿಹಾಸ, ಪುರಾಣ ಕಾವ್ಯಗಳಲ್ಲಿ ಗಂಡು ಹೆಣ್ಣಿನ ಕುರಿತು ಕಟ್ಟಿದ ಪರಿಕಲ್ಪನೆಗಳೆಲ್ಲಾ ಬಿದ್ದುಹೋಗುತ್ತವೆ. ಅಂಥ ಬಯಲೊಂದನ್ನು ಇಲ್ಲಿನ ಕವಿತೆಗಳು ಕಾಣಿಸುತ್ತಿವೆ.

ಶಾಕ್ತ ಸ್ತ್ರೀ ಪರಂಪರೆಯ ಆದಿಮ ಸಂವೇದನೆಯನ್ನು ಸಾಂದ್ರವಾಗಿ ಚಿತ್ರಿಸುವ ಬಗೆಯಿಂದಾಗಿ ಊರ ಹಬ್ಬ, ಉರಿಮಾರಿ ಕವಿತೆಗಳು ಗಮನಾರ್ಹವಾಗಿ ಕಾಣುತ್ತವೆ. ರೌದ್ರವಾಗಿ ತೋರುವ ಶಕ್ತಿದೇವತೆಗಳಲ್ಲಿ ಮಾತೃತ್ವದ ತಂಪನ್ನು ಕಾಣುವ, ರಕ್ತಸಿಕ್ತ ಆಚರಣೆಗಳಲ್ಲಿ ಸ್ತ್ರೀ ದೇಹಮೂಲದ ಅನುಭವಗಳನ್ನು ಕಾಣಿಸುವ ಮೂಲಕ ಕವಿತೆಗಳು ಸಾಂಸ್ಕೃತಿಕ ಆಯಾಮವೊಂದನ್ನು ಕಟ್ಟುತ್ತಿವೆ. 'ಹಣೆಮೇಲೆ ಉರಿವ ಸೂರ್ಯ, ಎದೆಯೊಳಗೆ ಮುಚ್ಚಿಟ್ಟ ಚಂದ್ರ' ನನ್ನು ಒಡಲುಗೊಂಡ ಉರಿಮಾರಿ ಹೊಟ್ಟೆಹೊರೆಯಲು ಅಸಿಟ್ಟು, ಉಪ್ಪು, ಮೆಣಸಿನಕಾಯಿ, ಕಾಸು ಕರಿಮಣಿ ಪಡಿಯನ್ನು ಪಡೆಯುವ,ಮಾರಿಯನ್ನು ಹೊತ್ತು ತಿರುಗುವ ಲೌಕಿಕದ ಹೆಣ್ಣಾಗಿ ಕಾಣಿಸುತ್ತಾಳೆ. ಕಂದನ ಬಾಯಲ್ಲಿ ಅವಳೆದೆಯ ಚಂದಿರ ಹಾಲಾಗಿ ಇಳಿಯುವುದು ಮಾತೃಸಂವೇದನೆಯ ಕಾಲಾತೀತ ಬೆಸುಗೆಯಾಗಿ ಕಾಣಿಸುತ್ತದೆ. ಒಟ್ಟಾರೆಯಾಗಿ 'ಕಾಡುಜೇಡ....' ಸಂಕಲನದ ಹಲವು ಕವಿತೆಗಳು ತಮ್ಮ ಸಂವೇದನೆಯ ವಿಸ್ತಾರ, ಪರಿಸರದೊಂದಿಗಿನ ತಾದಾತ್ಮ್ಯ, ಸ್ತ್ರೀ ಮೂಲ ಅರಿವನ್ನು ದಾಟಿಸುವ ಭಾಷಾಭಿವ್ಯಕ್ತಿಯಿಂದಾಗಿ ಗಟ್ಟಿಯಾಗಿ ಉಳಿಯಬಲ್ಲವು.

**-ಡಾ. ಗೀತಾ ವಸಂತ**

ಪು: **ಅಂತರಂಗ ಬಹಿರಂಗ** (ಕಿಷನ್ ಪಟ್ನಾಯಕ್ ಅವರ ಜೀವನ ಚಿತ್ರ) ಸಂ: **ಅಶೋಕ ಸೆಕಸರಿಯಾ** ಮತ್ತು **ಸಂಜಯ ಭಾರತಿ** ಕನ್ನಡಕ್ಕೆ : **ಹಸನ್ ನಯೀಂ ಸುರಕೋಡ** ಪ್ರ: **ಕುವೆಂಪು ಭಾಷಾ ಭಾರತಿ**, ಬೆಂಗಳೂರು ಪುಟಗಳು: ೨೪೮ ಬೆಲೆ: ರೂ. ೧೫೦/-

## ಅಪರೂಪದ ಸಮಾಜವಾದಿಯೊಬ್ಬರ ಸ್ಥೂಲ ಜೀವನ ಚಿತ್ರ



**ಕ**ರ್ನಾಟಕದಲ್ಲಿನ ಸಮಾಜವಾದಿ ಚಳುವಳಿಯ ಪರಿಚಯವಿರುವವರಿಗೆ ಕಿಷನ್ ಪಟ್ನಾಯಕ್ ಅಪರಿಚಿತರೇನಲ್ಲ. ಲೋಹಿಯಾ ಸಾವಿನ ನಂತರ ಸಮಾಜವಾದಿ ಪಕ್ಷದ ಗುಂಪುಗಾರಿಕೆಯಿಂದ ಬೇಸತ್ತು 'ಲೋಹಿಯಾ ವಿಚಾರ ಮಂಚ್' ಸ್ಥಾಪನೆಯ ಮೂಲಕ ಸಮಾಜವಾದಿ ವಿಚಾರಗಳನ್ನು ರಾಷ್ಟ್ರಾದ್ಯಂತ ಯುವಜನರ ಮಧ್ಯೆ ಹರಡಲು ಪ್ರಯತ್ನ ಮಾಡಿದ ನಾಯಕರಿವರು. ಈ ಪ್ರಯತ್ನದ ಭಾಗವಾಗಿಯೇ ಅವರು ಕರ್ನಾಟಕದ ಪಕ್ಷೇತರ ಸಮಾಜವಾದಿಗಳೊಂದಿಗೆ, ವಿಶೇಷವಾಗಿ ಲಂಕೇಶ್, ತೇಜಸ್ವಿ, ಮಹಾದೇವ ಮುಂತಾದ ಲೇಖಕ-ಕಲಾವಿದರೊಂದಿಗೆ ನಿಕಟ ಸಂಪರ್ಕದಲ್ಲಿದ್ದು ಇಲ್ಲಿ 'ಸಮಾಜವಾದಿ ಯುವಜನ ಸಭಾ'ದ ಚಟುವಟಿಕೆಗಳಿಗೆ ಸ್ಫೂರ್ತಿಯೂ ಆಗಿದ್ದವರು. ನಂತರದಲ್ಲಿ ಅವರು ಕರ್ನಾಟಕ ರೈತ ಮತ್ತು ದಲಿತ ಚಳುವಳಿಗಳಲ್ಲದೆ ರಾಷ್ಟ್ರಾದ್ಯಂತ ನಡೆದಿದ್ದ ಇತರ ಹಲವು ಜನಪರ ಚಳುವಳಿಗಳನ್ನು ಒಂದು ಸಮಾಜವಾದಿ ಕೇಂದ್ರಕ್ಕೆ ತರಲು ಯತ್ನಿಸಿದವರು. ಆ ಪ್ರಯತ್ನದ ಮಧ್ಯೆಯೇ ಅಸು ನೀಗಿದವರು.

. ಮೂಲತಃ ಒರಿಸ್ಸಾದವರಾದ ಕಿಷನ್ ಪ್ರಾಧ್ಯಾಪಕ ಮತ್ತು ಕವಿ ಆಗುವ ಆಸೆಯಿಂದ ಎಂ.ಎ. ಓದಲು ಹೋಗಿ, ಆಕಸ್ಮಿಕವೆಂಬಂತೆ ಸಮಾಜವಾದಿ ರಾಜಕಾರಣಕ್ಕೆ ಒಲಿದು, ಮೊದಲ ಪ್ರಯತ್ನದಲ್ಲೇ (೧೯೬೨) ಲೋಕಸಭಾ ಸದಸ್ಯರಾದದ್ದು ಒಂದು ಕುತೂಹಲಕಾರಿ ಕಥನವೇ ಆಗಿದೆ. ಮೂರನೇ ಲೋಕಸಭೆಯ ಅತ್ಯಂತ ಚಿಕ್ಕವಯಸ್ಸಿನ ಸದಸ್ಯರಾದ ಇವರು ತಮ್ಮ ನಾಯಕ ಲೋಹಿಯಾ ಅವರ ಮಾರ್ಗದರ್ಶನದಲ್ಲಿ ಸೂಕ್ಷ್ಮ ಅಧ್ಯಯನ ಶೀಲತೆಯ ಮೂಲಕ ಹಲವು ವಿಷಯಗಳಲ್ಲಿ ಸರ್ಕಾರವನ್ನು, ನಿರ್ದಿಷ್ಟವಾಗಿ ಪ್ರಧಾನ ಮಂತ್ರಿ ನೆಹರೂ ಅವರನ್ನು-ಅವರು ತಮ್ಮ ಜನಪ್ರಿಯತೆಯ ಉತ್ತುಂಗದಲ್ಲಿದ್ದ ಆ ಕಾಲದಲ್ಲಿ-ಮುಖಾಮುಖಿಯಾದ ಬಗೆ ಬೆರಗು ಹುಟ್ಟಿಸುವಂತಿದೆ. ಈ ಸಂಬಂಧದ ಕಿಷನ್ ಅವರ ನೆನಪುಗಳು ಮತ್ತು ದಾಖಲೆಗಳು, ಅವರ ಕೆಲವು ಪತ್ರಗಳು ಹಾಗೂ ಅವರನ್ನು ಕುರಿತು ಪತ್ನಿ ವಾಣಿ ಮತ್ತು ಆತ್ಮೀಯ ಶಿಷ್ಯ ಅರವಿಂದ ಮೋಹನ್ ಬರೆದ ಲೇಖನಗಳಲ್ಲಲ್ಲದೆ. ಕಿಷನ್ ಅವರ ಆಯ್ದ ಮೂರು ಕವಿತೆಗಳ ಅನುವಾದವೂ ಈ ಪುಸ್ತಕದಲ್ಲಿ ಸಂಗ್ರಹಿತವಾಗಿವೆ.

ಇವುಗಳಲ್ಲಿ ಕಿಷನ್ ಅವರ ವ್ಯಕ್ತಿತ್ವವನ್ನು ಬಹು ಪರಿಣಾಮಕಾರಿಯಾಗಿ ಚಿತ್ರಿಸಿರುವುದು ಅರವಿಂದ ಮೋಹನ್ ಅವರ ಪುಟ್ಟ ಬರಹವೇ ಹೊರತು ಅವರ ನೆನಪುಗಳ ದಾಖಲೆಗಳಲ್ಲ. ಕಾರಣ, ಈ ನೆನಪುಗಳು ಯಾವುದೇ ಕಾಲಾನುಕ್ರಮಣಿಕೆಯಿಲ್ಲದೆ ಅಸ್ತವ್ಯಸ್ತವಾಗಿರುವುದರ ಜೊತೆಗೆ ಅವರ ಆಕಸ್ಮಿಕ ಸಾವಿನಿಂದಾಗಿ ಅಪೂರ್ಣವಾಗಿ ಉಳಿದಿರುವುದು. ಅಲ್ಲದೆ ಇವುಗಳ ಕನ್ನಡಾನುವಾದ ಕೂಡ ಹಲವೆಡೆ ಪದಶಃ ಮತ್ತು ಕೆಲವೆಡೆ ಅಸಂಬಂದ್ಧವಾಗಿದ್ದು ಓದುಗರನ್ನು ಕಂಗೆಡಿಸುವಂತಿದೆ. ಇದೇ ಮಾತನ್ನು ಕಿಷನ್ ಕವಿತೆಗಳ ಅನುವಾದದ ಬಗ್ಗೆ ಸಹ ಹೇಳಬಹುದು. ಅನುವಾದಕರಿಗೆ ಯಾವುದೇ ವಾಕ್ಯ ಅಥವಾ ವಾಕ್ಯ ಸಂದರ್ಭ ಅರ್ಥವಾಗದಿದ್ದರೆ ಅದನ್ನು ಮಕ್ಕೀಕಾ ಮಕ್ಕಿ ಅನುವಾದಿಸಲು ಹೋಗದೆ ಆ ಭಾಗವನ್ನು ಕೈ ಬಿಡುವುದೇ ಒಳ್ಳೆಯದೇನೋ. ಆದರೆ ಅರವಿಂದ ಮೋಹನ್ ಅವರ ಲೇಖನ ಅಚ್ಚುಕಟ್ಟಾಗಿ ಅನುವಾದಿತವಾಗಿದ್ದು, ಕಿಷನ್ ಅವರ ಪೂರ್ಣ ಜೀವತಾವಧಿಯ ಸಾಧನೆಗಳನ್ನು ಸಮಗ್ರವಾಗಿ ನಿರೂಪಿಸುತ್ತಾ, ಕಿಷನ್ ನೆನಪು ಇಂದು ಏಕೆ ನಮಗೆ ಮುಖ್ಯ ಎಂಬುದನ್ನು ಮನಗಾಣಿಸುವಂತಿದೆ.

ಈ ದೌರ್ಬಲ್ಯಗಳ ಮಧ್ಯೆಯೂ ಈ ಪುಸ್ತಕ ಭಾರತದ ಸಮಾಜವಾದಿ ಚಳುವಳಿ ತನ್ನೆಲ್ಲ ತಾತ್ವಿಕ ಶಕ್ತಿ-ಸೌಂದರ್ಯಗಳ ಹೊರತಾಗಿಯೂ ಏಕೆ ಒಂದು ರಾಜಕೀಯ ಶಕ್ತಿಯಾಗಿ ಉಳಿಯಲಾರದೇ ಹೋಯಿತು ಎಂಬ ಪ್ರಶ್ನೆಗೆ ಸೂಚ್ಯವಾಗಿಯಾದರೂ ಉತ್ತರಗಳನ್ನು ನೀಡುತ್ತದೆ. ಹಾಗೇ ಪರೋಕ್ಷವಾಗಿ, ಮುಂದೆ ಸಮಾಜವಾದಿ ರಾಜಕಾರಣವನ್ನು ಕಟ್ಟಬಯಸುವವರಿಗೆ ಕೆಲವು ಎಚ್ಚರಿಕೆಗಳನ್ನೂ ನೀಡುತ್ತದೆ.

**-ಡಿಎಸ್ಸೆನ್**

ಪು: **ಶಾಂತವೇರಿ ಗೋಪಾಲಗೌಡ** ಲೇ: **ನಟರಾಜ ಹುಳಿಯಾರ್** ಪ್ರ: **ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ**, ಹೊಸ ದೆಹಲಿ ಪು: ೧೫೨ ಬೆಲೆ:: ರೂ. ೧೮೦/ -

## ಗೋಪಾಲಗೌಡರನ್ನು ಕುರಿತ 'ಹೊಸ' ಪುಸ್ತಕ



**ಕ**ರ್ನಾಟಕದ ಮೇರು ಸಮಾಜವಾದಿ ನಾಯಕ ಶಾಂತವೇರಿ ಗೋಪಾಲಗೌಡರ ಕುರಿತು ಈವರೆಗೆ ಹತ್ತಾರು ಕೃತಿಗಳು ಪ್ರಕಟವಾಗಿವೆ. ಅಲ್ಲದೆ ನೂರಾರು ಲೇಖನಗಳಲ್ಲಿ, ಕನ್ನಡದ ಹತ್ತಾರು ಸಾಹಿತ್ಯ ಕೃತಿಗಳಲ್ಲಿ, ಕವನಗಳಲ್ಲಿ. ಅವರನ್ನು ಹತ್ತಿರದಿಂದ ಬಲ್ಲವರ, ಅವರು ಓಡಾಡಿದ ನೆಲದಲ್ಲಿ ಜೀವಿಸಿದವರ ಮನಸಿನಲ್ಲಿ ಮೂಡಿದ ಈ ನಾಯಕನ ವಿಶೇಷ ಚಿತ್ರಣಗಳು ದೊರಕುತ್ತವೆ. .ನಟರಾಜ್ ಹುಳಿಯಾರ್ ಅವರ ಈ ಕೃತಿ ಈ ಎಲ್ಲದರ ಸಾರವನ್ನು ಹೀರಿಕೊಂಡಂತೆ ಬರೆಯಲ್ಪಟ್ಟಿದೆ.

ನ್ಯಾಷನಲ್ ಬುಕ್ ಟ್ರಸ್ಟ್‌ನ ರಾಷ್ಟ್ರೀಯ ಜೀವನ ಚರಿತ್ರೆ ಮಾಲೆಯಲ್ಲಿ ಪ್ರಕಟವಾಗಿರುವ ಈ ಕೃತಿ ಕೇವಲ ೪೯ ವರ್ಷಗಳಷ್ಟೇ ಬದುಕಿ, ಮೂರು ಬಾರಿ ಶಾಸಕರಾಗಿ ಸಮಾಜವಾದಿ ಚಳವಳಿಯನ್ನು ರಾಜ್ಯದಲ್ಲಿ ಕಟ್ಟಿ ಕರ್ನಾಟಕದ ಆದರ್ಶ ರಾಜಕಾರಣದ ಪ್ರಖರ ಮಾದರಿಯಾಗಿ ಇವತ್ತಿಗೂ ಉಳಿದಿರುವ ಈ ಧೀಮಂತ ರಾಜಕಾರಣಿಯ ಬದುಕನ್ನು ಸಾರವತ್ತಾಗಿ ಪ್ರಸ್ತುತಪಡಸುತ್ತದೆ.ನಟರಾಜ್ ಹುಳಿಯಾರ್ ಅವರಿಗೆ ಈ ಕೃತಿ ರೂಪಿಸುವಲ್ಲಿ ಹೆಚ್ಚು ನೆರವಾಗಿರುವುದು ಕೋಣಂದೂರು ವೆಂಕಪ್ಪಗೌಡರು ಸಂಪಾದಿಸಿರುವ 'ಜೀವಂತ ಜ್ವಾಲೆ' ಕೃತಿ. ಜತೆಗೆ ಕಾಳೇಗೌಡ ನಾಗವಾರ ಅವರು ಸಂಪಾದಿಸಿದ ಶಾಂತವೇರಿ 'ಗೋಪಾಲಗೌಡರ ನೆನಪಿನ ಸಂಪುಟ', ಡಾ. ವಿಷ್ಣುಮೂರ್ತಿ ಅವರು ಸಂಪಾದಿಸಿರುವ 'ಗೋಪಾಲಗೌಡರ ಡೈರಿ ಮತ್ತು ಪತ್ರಗಳು' ಕೃತಿಗಳ ನೆರವನ್ನೂ ಅವರು ಪಡೆದಿದ್ದಾರೆ .ಅಲ್ಲದೆ ಪಿ. ಲಂಕೇಶ್, ಕಡಿದಾಳು ಶಾಮಣ್ಣ, ಕೋಣಂದೂರು ಲಿಂಗಪ್ಪ, ಪೂರ್ಣಚಂದ್ರ ತೇಜಸ್ವಿ ಅವರು ವಿವಿಧ ಸಂದರ್ಭದಲ್ಲಿ ಮಾಡಿದ ಉಲ್ಲೇಖಗಳೂ ಇಲ್ಲಿ ಬಳಕೆಯಾಗಿ ಪುಸ್ತಕದ ಮೌಲಿಕತೆಯನ್ನು ಹೆಚ್ಚಿಸಿವೆ. ಗೋಪಾಲಗೌಡರ ಬಾಲ್ಯ, ಕಾಗೋಡು ಸತ್ಯಾಗ್ರಹ, ಲೋಹಿಯಾ ಒಡನಾಟ , ಶಾಸಕರಾಗಿ ತೋರಿದ ಬದ್ಧತೆ-ಸಾತ್ವಿಕ ಸಿಟ್ಟು, ಮದುವೆ-ಸಂಸಾರದ ವಿವರಗಳ ಜತೆಗೆ ಅವರ ಕೊನೆಯ ಕಷ್ಟದ ದಿನಗಳ ಮಾಹಿತಿ ವಿವರವಾಗಿ ಇಲ್ಲಿ ಮೂಡಿಬಂದಿದೆ. ಅಲ್ಲದೆ ಗೋಪಾಲಗೌಡರು ಕಾಲವಾದ ನಂತರ ಅವರನ್ನು ನಂಬಿದವರ, ಅನುಸರಿಸಿದವರ ಮನದಲ್ಲಿ ಉಳಿದ ರೀತಿಯನ್ನೂ ಈ ಕೃತಿ ಚಿತ್ರಿಸುತ್ತದೆ.

ಈ ಕೃತಿಯ ವಿಶೇಷವೆಂದರೆ ಲೇಖಕರು ಈ ಕೃತಿ ರಚನೆಗಾಗಿ ಕೈಗೊಂಡ ಕ್ಷೇತ್ರಕಾರ್ಯ ನೀಡುವ ಮಾಹಿತಿ ಮತ್ತು ಗೋಪಾಲಗೌಡರ ವ್ಯಕ್ತಿತ್ವ ಮತ್ತು ರಾಜಕಾರಣದ ಬಗೆಗಿನ ಒಳನೋಟಗಳು. ಗೋಪಾಲಗೌಡರ ಬದುಕಿನಿಂದ ಸ್ಫೂರ್ತವಾದ ಯು.ಆರ್. ಅನಂತಮೂರ್ತಿ ಅವರ 'ಅವಸ್ಥೆ' ಕಾದಂಬರಿಯನ್ನು ಆಧರಿಸಿ ಬಂದ ಸಿನಿಮಾ ಕುರಿತ ಮೊಕದ್ದಮೆಯ ವಿಚಾರಣೆಯ ಸಂದರ್ಭದಲ್ಲಿ ನ್ಯಾಯಾಧೀಶರು ನ್ಯಾಯವಾದಿ ರವಿವರ್ಮಕುಮಾರ್‌ರನ್ನು 'ಗೋಪಾಲಗೌಡರೆಂದರೆ ವಿಧಾನಸೌದದ ಎದುರಿನ ವೃತ್ತದ ಹೆಸರಿನವರೇ?' ಎಂದು ಕೇಳಿದ ಪ್ರಸಂಗ ಸ್ವಾರಸ್ಯಕರವಾಗಿ ಇಲ್ಲಿ ನಿರೂಪಿತವಾಗಿದೆ. ಗೋಪಾಲಗೌಡರ 'ನೈತಿಕ ಸಿಟ್ಟು ಮತ್ತು ಚಿಕಿತ್ಸಕ ವ್ಯಂಗ್ಯ' ಅಧ್ಯಾಯದಲ್ಲಿ ಹುಳಿಯಾರ್ ಅವರು ಈ ಸಂಬಂಧವಾಗಿ ರಾಮಮನೋಹರ ಲೋಹಿಯಾ ಅವರ ಬಳಿ ಇದ್ದ ಕೆಲ ಟಿಪ್ಪಣಿಗಳನ್ನು ಈ ಕೃತಿಯಲ್ಲಿ ನಮೂದಿಸುತ್ತಾರೆ. ವಿಧಾನಸಭೆ ಅಧಿವೇಶನದಲ್ಲಿ ರಾಜ್ಯಪಾಲರ ಭಾಷಣವನ್ನು ಹರಿದು, ಕಾಲಿನಿಂದ ತುಳಿದು ಹಾಕಿದ ಐತಿಹಾಸಿಕ ಘಟನೆಯ ಬಗ್ಗೆ ಗೋಪಾಲಗೌಡರು ಈ ಟಿಪ್ಪಣಿಯ ಪ್ರಕಾರ 'ನನ್ನ ಸಿಟ್ಟು ತಾಮಸವಾಗಿರಲಿಲ್ಲ, ಸಾತ್ವಿಕವೇ ಆಗಿತ್ತು. ಪ್ರತಿಭಟನೆ ಯಾವ ರೀತಿ ಇರಬೇಕೆಂಬುದನ್ನು ವಿವೇಚಿಸುವ ಮೊದಲೇ ನನ್ನ ಕೈಕಾಲುಗಳು ಪ್ರತಿಭಟನೆ ತೋರಿಸಿದ್ದವು' ಎಂದಿದ್ದಾರೆ. ಈ ದೃಷ್ಟಿಯಿಂದ ಈ ಟಿಪ್ಪಣಿ ಮಹತ್ವದ್ದೇ ಸರಿ.

ಗೋಪಾಲಕೃಷ್ಣ ಅಡಿಗರ 'ಶಾಂತವೇರಿಯ ಅಶಾಂತ ಸಂತ' ಸೇರಿದಂತೆ ಸಮಕಾಲೀನರ ಕಾವ್ಯದಲ್ಲಿ ಗೋಪಾಲಗೌಡರು ಕಂಡ ಬಗೆಯನ್ನೂ ಸಹ ಹುಳಿಯಾರ್ ವಿಶೇಷವಾಗಿ ಕಟ್ಟಿಕೊಟ್ಟಿದ್ದಾರೆ. ಶಾಸಕನಾಗುವುದು ಎಂದರೆ 'ಪ್ರಜಾಪ್ರಭುತ್ವದ ಬೇರುಗಳನ್ನು ಗಟ್ಟಿಗೊಳಿಸುವ ಕೆಲಸ' ಎಂದು ನಂಬಿದ್ದ ಶಾಂತವೇರಿ ಗೋಪಾಲಗೌಡರ ಕುರಿತ ನಟರಾಜ್ ಹುಳಿಯಾರ್ ಅವರ ಈ ಕೃತಿ ಈ ನಾಯಕನ ಬಗ್ಗೆ ಇದುವರೆಗೆ ಬಂದಿರುವ ಇತರೆಲ್ಲ ಕೃತಿಗಳಿಗಿಂತ ಹೆಚ್ಚು ತೀವ್ರವಾದ ಬೆಳಕನ್ನು ಚೆಲ್ಲಿ ಗಮನ ಸೆಳೆಯುತ್ತದೆ. ಆದರೆ ಪುಸ್ತಕಕ್ಕೆ ಇಟ್ಟಿರುವ ಬೆಲೆ ಮಾತ್ರ ಜಾಸ್ತಿ ಎನಿಸದಿರದು.

**-ಹೊನ್ನಾಳಿ ಚಂದ್ರಶೇಖರ್**

‘ಹೊಸ ಮನುಷ್ಯ’ದ ಮಹಿಳಾ ವಿಶೇಷ ಸಂಚಿಕೆಗೆ
ಹಾರ್ದಿಕ ಶುಭಾಶಯಗಳು



**ಜಿ. ರಾಜಶೇಖರ**

ಮತ್ತು ಕುಟುಂಬ

ಉಡುಪಿ

---

ಹೊಸ ಮನುಷ್ಯ’ದ ಮಹಿಳಾ ವಿಶೇಷ ಸಂಚಿಕೆಗೆ
ಹಾರ್ದಿಕ ಶುಭಾಶಯಗಳು



**ಡಾ. ಲೋಕೇಶ ಅಗಸನಕಟ್ಟೆ**

ಮತ್ತು ಕುಟುಂಬ

**ಚಿತ್ರದುರ್ಗ**

ಹೊಸ ಮನುಷ್ಯ'ದ ಮಹಿಳಾ ವಿಶೇಷ ಸಂಚಿಕೆಗೆ

ಹಾರ್ದಿಕ ಶುಭಾಶಯಗಳು



**ಜಿ.ಪಿ. ಬಸವರಾಜು**

ಮತ್ತು **ಕುಟುಂಬ**

**ಮೈಸೂರು**

ಹೊಸ ಮನುಷ್ಯ'ದ ಮಹಿಳಾ ವಿಶೇಷ ಸಂಚಿಕೆಗೆ

ಹಾರ್ದಿಕ ಶುಭಾಶಯಗಳು



ವಿಜಯೇಂದ್ರ ಪಾಟೀಲ

ಮತ್ತು **ಕುಟುಂಬ**

**ಬೆಂಡಿಗಾನಹಳ್ಳಿ** (ಬೆಂಗಳೂರು)

ಹೊಸ ಮನುಷ್ಯ'ದ ಮಹಿಳಾ ವಿಶೇಷ ಸಂಚಿಕೆಗೆ
ಹಾರ್ದಿಕ ಶುಭಾಶಯಗಳು



**ಪುಲ್‌ಕುಲ್ ಮುನಿಸ್ವಾಮಪ್ಪ ಮುನಿವೆಂಕಟಮ್ಮ ಧರ್ಮದತ್ತಿ (ರಿ)**

'ಸರ್ವೋದಯ', ನಂ. ೭೨, ಪ್ರೊ. ಎ.ಆರ್. ಕೃಷ್ಣಶಾಸ್ತ್ರಿ ರಸ್ತೆ

ಬಸವನಗುಡಿ, ಬೆಂಗಳೂರು-೫೬೦ ೦೦೪


## ತಿಂಗಳ ಸಾಲುಗಳು...



ಮಗಳಿಗೆ ಮದುವೆ ಮಾಡುವುದು ತಂದೆ ತಾಯಿಗಳ ಜವಾಬ್ದಾರಿಯೇನಲ್ಲ. ಅವರ ಜವಾಬ್ದಾರಿ ಏನಿದ್ದರೂ ಒಳ್ಳೆಯ ಆರೋಗ್ಯ ಮತ್ತು ಯೋಗ್ಯ ಶಿಕ್ಷಣ ಒದಗಿಸುವುದರೊಂದಿಗೆ ಮುಗಿಯುತ್ತದೆ. ಹುಡುಗಿ ತನ್ನ ಸಂಗಾತಿಯನ್ನು ಆಯ್ದುಕೊಳ್ಳುವ ಹಾದಿಯಲ್ಲಿ ಒಂದು ವೇಳೆ ತಪ್ಪು ಹೆಜ್ಜೆ ಇಟ್ಟರೂ ಅದನ್ನು ವಿಕಾಸಶೀಲ ಸಮಾಜವೊಂದು ಗಂಡು-ಹೆಣ್ಣುಗಳ ಸಹಜ ಸಂಬಂಧದ ಸ್ಥಾಪನೆಗೆ ತೆರಬೇಕಾದ ಬೆಲೆ ಎಂದಷ್ಟೇ ಪರಿಗಣಿಸಬೇಕು.

–ಡಾ. ರಾಮಮನೋಹರ ಲೋಹಿಯಾ


*ಶುಭಾಶಯಗಳೊಂದಿಗೆ,*

**ಆರ್. ಉಮೇಶ್ ಅಂಡ್ ಅಸೋಸಿಯೇಟ್ಸ್**

**ಲೆಕ್ಕ ಪರಿಶೋಧಕರು, ಮೈಸೂರು**

ಮೊಬೈಲ್ : ೯೪೪೮೦೮೪೭೯೩



HOSA MANUSHYA, a kannada Socialist monthly solely owned, edited, published and printed by D.S. Nagabhushana, at HIG-5,Kallahally Extn.,Vinoba Nagara, SHIVAMOGGA-577204. Printed at Replica Offset Printers, No.14/1, 1st Main, Industrial Town, Rajaji Nagara, Bengaluru-560 044 Ph: 08023357963

**Regd. News Paper** RNI No. KARKAN/2012/47568
Rgd No. KA/SK/SMG-1209/2019-21


ಇವರಿಗೆ \ To


If undelivered, please return to D.S. Nagabhushana, Editor,
'Hosa Manushya', 'HIG-5, 'Nudi', Kallahalli Extension,
Vinoba Nagara, Shivamogga -577204( Karnataka)